ಭಾರತದ ಲೆಕ್ಕನಿಯಂತ್ರಕರು ಮತ್ತು
ಮಹಾಲೆಕ್ಕಪರಿಶೋಧಕರ
“ಪ್ರಧಾನ ಮಂತ್ರಿ ಖನಿಜ ಕ್ಷೇತ್ರ ಕಲ್ಯಾಣ ಯೋಜನೆಯ (ಪಿಎಂಕೆಕೆಕೆವೈ) ಮೇಲಿನ ಜಿಲ್ಲಾ ಖನಿಜ ಪ್ರತಿಷ್ಠಾನ ಟ್ರಸ್ಟ್ (ಡಿಎಂಎಫ್‌ಟಿ) ಒಳಗೊಂಡಂತೆ” ವರದಿ

ಕರ್ನಾಟಕ ಸರ್ಕಾರ

2025ನೇ ಸಾಲಿನ ವರದಿ ಸಂಖ್ಯೆ – 7

ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆ – ಸಿವಿಲ್

ಪರಿವಿಡಿ

ಕಂಡಿಕೆ ಸಂಖ್ಯೆ	ವಿವರಗಳು	ಪುಟ ಸಂಖ್ಯೆ
	ಮುನ್ನುಡಿ	v
	ಸ್ಥೂಲನೋಟ	vii-x
	ಅಧ್ಯಾಯ – I	
	ಪೀಠಿಕೆ	**1**
1.1	ಪೀಠಿಕೆ	1
1.2	ಲೆಕ್ಕಪರಿಶೋಧನೆಯ ಉದ್ದೇಶಗಳು	2
1.3	ಲೆಕ್ಕಪರಿಶೋಧನೆಯ ಮಾನದಂಡ	2-3
1.4	ಲೆಕ್ಕಪರಿಶೋಧನೆಯ ವ್ಯಾಪ್ತಿ ಮತ್ತು ವಿಧಾನ	3-4
1.5	ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಗಿರುವ ಅಂಶಗಳು	4-5
1.6	ಕೃತಜ್ಞತೆಗಳು	5
	ಅಧ್ಯಾಯ – II	
	ಕಾನೂನಾತ್ಮಕ ಚೌಕಟ್ಟು	**7**
2.1	ಸಾಂಸ್ಥಿಕ ರಚನೆ	7
2.2	ಯೋಜನೆಯ ಕಾರ್ಯಗತಗೊಳಿಸುವಿಕೆ	8
2.3	ಡಿಎಂಎಫ್‌ಟಿಗಳ ರಚನೆ	8-9
2.3.1	ಟ್ರಸ್ಟಿಗಳ ನಾಮನಿರ್ದೇಶನ	9
2.3.2 2.3.3	ಭಾರತ ಸರ್ಕಾರದ ನಿರ್ದೇಶನಗಳಿಗೆ ಬದ್ಧತೆಯಿಂದ ಕೂಡಿರದಿದ್ದುದು	9-11
2.4	ವಾರ್ಷಿಕ ಪೂರ್ವಭಾವಿ ಯೋಜನೆಗಳ ತಯಾರಿಸುವಿಕೆ	11-12
2.5	ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ತೊಂದರೆಗೆ ಈಡಾಗಿರುವ ಪ್ರದೇಶಗಳು	12-13
2.6	ತೊಂದರೆಗೆ ಈಡಾಗಿರುವ ಜನತೆಯನ್ನು ಗುರುತಿಸುವಿಕೆ	13-14
	ಅಧ್ಯಾಯ – III	
	ಡಿಎಂಎಫ್‌ಟಿ ಹಣಕಾಸಿನ ಸಂಗ್ರಹಣೆ	**15**
3.1	ಹಣಕಾಸು ನಿರ್ವಹಣೆ	15-16
3.2 3.3	ಹಣಕಾಸು ವೆಚ್ಚ	16-17
3.4	ಡಿಎಂಎಫ್ ಮೌಲ್ಯಮಾಪನ, ಬೇಡಿಕೆ ಮತ್ತು ಕೊಡುಗೆಗಳ ಸಂಗ್ರಹ	17-18
3.5	ಕಾಮಗಾರಿಗಳನ್ನು ಕಾರ್ಯಗತಗೊಳಿಸುವ ಇಲಾಖೆಗಳು/ಸಂಸ್ಥೆಗಳು (WEDAs) ಡಿಎಂಎಫ್ ಕೊಡುಗೆಯನ್ನು ಕಡಿತಗೊಳಿಸದಿರುವುದು	18-19
3.6	ಅಕ್ರಮವಾಗಿ ಸಾಗಿಸಲಾದ ಖನಿಜಗಳ ಮೇಲೆ ಡಿಎಂಎಫ್ ಸಂಗ್ರಹಿಸದಿರುವುದು	20

ಕಂಡಿಕೆ ಸಂಖ್ಯೆ	ವಿವರಗಳು	ಪುಟ ಸಂಖ್ಯೆ
	ಅಧ್ಯಾಯ – IV	
	ಡಿಎಂಎಫ್‌ಟಿಗಳಲ್ಲಿ ಲೆಕ್ಕವನ್ನಿಡುವಿಕೆಯಲ್ಲಿನ ನಿರ್ವಹಣೆ, ಹೊಣೆಗಾರಿಕೆ ಮತ್ತು ಪಾರದರ್ಶಕತೆ ವ್ಯವಸ್ಥೆ	**21**
4.1	ಡಿಎಂಎಫ್‌ಟಿ ಕೊಡುಗೆಗಳನ್ನು ಖಜಾನೆಯಲ್ಲಿನ ವೈಯಕ್ತಿಕ ಠೇವಣಿ ಖಾತೆಗಳಲ್ಲಿ ನಿರುಪಯುಕ್ತವಾಗಿ ಇಡಲಾಗಿದ್ದುದು	21-22
4.2	ಡಿಎಂಎಫ್‌ಟಿ ಕೊಡುಗೆಗಳ ಮೇಲೆ ಬಡ್ಡಿ ಸಂಚಯಗಳು	22
4.3	ಡಿಎಂಎಫ್ ಅನುದಾನಗಳ ಮರುಪಾವತಿ ಮಾಡದಿರುವುದು	22-23
4.4	ದತ್ತಿ ಹಣಕಾಸಿನ ಹೂಡಿಕೆ	23-24
4.5	ಡಿಎಂಎಫ್‌ಟಿ ಲೆಕ್ಕಪತ್ರಗಳು	24
4.6	ಯೋಜನೆಗಳ ಅನುಷ್ಠಾನದ ಮೇಲ್ವಿಚಾರಣೆ	24-25
4.6.1	ರಾಜ್ಯ ಮಟ್ಟದ ಮೇಲ್ವಿಚಾರಣಾ ಸಮಿತಿ	25
4.6.2	ರಾಜ್ಯ ಮಟ್ಟದ ಅಧಿಕಾರಯುಕ್ತ ಸಮಿತಿ	25-26
4.7	ಪ್ರತಿಷ್ಠಾನ ಟ್ರಸ್ಟ್ ಮತ್ತು ವ್ಯವಸ್ಥಾಪನಾ ಸಮಿತಿಗಳ ಸಭೆಗಳು	26-27
	ಅಧ್ಯಾಯ – V	
	ಯೋಜನೆಗಳ ನಿರ್ವಹಣೆ	**29**
5.1	ಆದ್ಯತೆಯ ಕ್ಷೇತ್ರಗಳಿಗೆ ಪೂರ್ವಭಾವಿ ಯೋಜನೆಗಳನ್ನು ತಯಾರಿಸುವಿಕೆ	29-31
5.2	ಮಾರ್ಗಸೂಚಿಗಳಲ್ಲಿ ಚಿಂತಿಸಿರದ ಕಾಮಗಾರಿಗಳನ್ನು ಸೇರ್ಪಡೆಗೊಳಿಸಿಕೊಂಡಿದ್ದುದು	31-36
5.3	ಡಿಎಂಎಫ್‌ಟಿ ಹಣಕಾಸನ್ನು ನಿಯಮಬಾಹಿರವಾಗಿ ಹಂಚಿಕೆ ಮಾಡಿದ್ದುದು	36-37
	ಪಿಎಂಕೆಕೆಕೆವೈ ಅಡಿಯಲ್ಲಿನ ಯೋಜನೆಗಳನ್ನು ಕಾರ್ಯಗತಗೊಳಿಸಿದ್ದುದು	37
5.4	4(ಜಿ) ವಿನಾಯಿತಿಯನ್ನು ಪಡೆದುಕೊಳ್ಳುವ ಸಲುವಾಗಿ ಕಾಮಗಾರಿಗಳ ವಿಭಜನೆ	37-38
5.5	ಕಾಮಗಾರಿಗಳು/ಯೋಜನೆಗಳ ಜಂಟಿ ಭೌತಿಕ ಪರೀಕ್ಷಣೆ	38-39
5.5.1	ಅನುಮೋದಿತ ಕಾಮಗಾರಿಗಳಿಂದ ಮಾರ್ಗಾಂತರಣ	39-43
	ಕಾಮಗಾರಿಗಳಿಂದ ಗುರಿಯಾಗಿಸಿಕೊಳ್ಳಲಾಗಿದ್ದಂತಹ ಉದ್ದೇಶಗಳು ಈಡೇರಿರದಿದ್ದುದು	43
5.6	ಕುಡಿಯುವ ನೀರು ಸರಬರಾಜು	43
5.6.1 5.6.2	ನೀರಿನ ಮೂಲವನ್ನು ಗುರುತಿಸದೆಯೇ ಕುಡಿಯುವ ನೀರು ಯೋಜನೆ ಕಾರ್ಯಗತಗೊಳಿಸಿದು	43-46
5.7	ಶೈಕ್ಷಣಿಕ ಕ್ಷೇತ್ರ	46
5.7.1	ಇ–ಕಲಿಕೆ ವ್ಯವಸ್ಥೆಯ ಸ್ಥಾಪನೆ	46-47
5.7.2 5.7.3 5.7.4	ಶಾಲೆಗಳಿಗೆ ಗಣಕಯಂತ್ರಗಳು ಮತ್ತು ಇತರೆ ಉಪಕರಣಗಳನ್ನು ಒದಗಿಸಿರುವುದು	47-49

ಕಂಡಿಕೆ ಸಂಖ್ಯೆ	ವಿವರಗಳು	ಪುಟ ಸಂಖ್ಯೆ
5.7.5	ಗಣಕಯಂತ್ರಗಳು ಬಳಕೆಯಾಗುತ್ತಿರುವುದನ್ನು ಮೇಲ್ವಿಚಾರಣೆ ಮಾಡದಿದ್ದ ಕಾರಣ ನಿಷ್ಫಲ ವೆಚ್ಚ	49-51
5.8	ಮಹಿಳಾ ಮತ್ತು ಮಕ್ಕಳ ಕಲ್ಯಾಣ	51
5.8.1	ಅನುತ್ಪಾದಕ ವೆಚ್ಚ	51-52
5.9	ಕೌಶಲ್ಯ ಅಭಿವೃದ್ಧಿ	52
5.9.1	ಕಾಮಗಾರಿಯನ್ನು ಪೂರ್ಣಗೊಳಿಸುವಲ್ಲಿನ ವಿಳಂಬ	52-53
	ಇತರೆ ಆದ್ಯತೆಯ ಕ್ಷೇತ್ರಗಳು	53
5.10	ಭೌತಿಕ ಮೂಲಸೌಕರ್ಯ	53
5.10.1 5.10.2	ನಿಕೃಷ್ಟ ಗುಣಮಟ್ಟದ ಹಾಗೂ ಕಾಮಗಾರಿಯ ಅಪೂರ್ಣ ಅನುಷ್ಠಾನ	54-56
	ಕಾಮಗಾರಿಗಳನ್ನು ಕೈಗೆತ್ತಿಕೊಳ್ಳುವಲ್ಲಿನ ವಿಳಂಬ	56
5.11	ಕಾಮಗಾರಿಗಳನ್ನು ಪ್ರಾರಂಭಿಸುವಲ್ಲಿನ ವಿಳಂಬ	56-57
	ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾದಂತಹ ಇತರೆ ಅಂಶಗಳು	58
5.12	ಪಿಎಂಕೆಕೆಕೆವೈ ಯೋಜನೆಗಳು/ಕಾರ್ಯಚಟುವಟಿಕೆಗಳ ಮೌಲ್ಯಮಾಪನ	58
5.12.1	ಫಲಾನುಭವಿ ಸಮೀಕ್ಷೆ	58-60
5.12.2	ಡಿಎಂಎಫ್‌ಟಿ ಗಳ ನಿಯಮಬಾಹಿರ/ಒಪ್ಪಿಕೊಳ್ಳಲು ಸಾಧ್ಯವಿರದ ವೆಚ್ಚಗಳು	60-61
	ಅನುಬಂಧಗಳು	**63**

ಸಂಖ್ಯೆ	ವಿವರಗಳು	ಕಂಡಿಕೆಯ ಉಲ್ಲೇಖ	ಪುಟ ಸಂಖ್ಯೆ
1	ಜಿಲ್ಲಾ ಖನಿಜ ಪ್ರತಿಷ್ಠಾನ ಟ್ರಸ್ಟ್‌ನ ಸದಸ್ಯರು	2.3	63
2	2015–16ನೇ ಹಣಕಾಸು ವರ್ಷದಿಂದ 2022–23ನೇ ಸಾಲಿನವರೆಗಿನ ಜಿಲ್ಲಾವಾರು ಡಿಎಂಎಫ್ ಸಂಗ್ರಹ	3.1	64-65
3	*ಜಿಲ್ಲಾವಾರು ಡಿಎಂಎಫ್ ಸಂಗ್ರಹ, ಅನುಮೋದಿತ ಕ್ರಿಯಾ ಯೋಜನೆ, ಖರ್ಚು ಮತ್ತು ಕಾಮಗಾರಿಗಳ ಸ್ಥಿತಿ ವಿವರಗಳು – ಮಾರ್ಚ್ 2023*	3.1	66-67
4	2016–17 ರಿಂದ 2022–23 ರವರೆಗೆ ನಡೆದ ವ್ಯವಸ್ಥಾಪಕ ಸಮಿತಿ ಮತ್ತು ಆಡಳಿತ ಮಂಡಳಿಯ ಸಭೆಗಳನ್ನು ತೋರಿಸುವ ತ:ಖ್ತೆ	4.7	68-69
5	ಟೆಂಡರ್ ಕರೆಯದೆ ನಿರ್ಮಿತಿ ಕೇಂದ್ರಕ್ಕೆ ನೀಡಲಾದ ಕಾಮಗಾರಿಗಳನ್ನು ತೋರಿಸುವ ತ:ಖ್ತೆ	5.4	70
6	ಚಿತ್ರದುರ್ಗ ಜಿಲ್ಲೆಯ ಭರಮಸಾಗರ ಮತ್ತು ತಾಳ್ಯ ಹೋಬಳಿಯಲ್ಲಿ ಜಂಟಿ ಭೌತಿಕ ತಪಾಸಣೆಯ ಸಮಯದಲ್ಲಿ ಗಮನಕ್ಕೆ ಬಂದ ಶಾಲಾವಾರು ಸಮಸ್ಯೆಗಳು	5.7.3	71-72
7	ಶಾಲೆಗಳಲ್ಲಿ ಪ್ರೊಜೆಕ್ಟರ್‌ಗಳನ್ನು ಬಳಸದಿರಲು ಕಾರಣಗಳು	5.7.4	73-74
8	ಆಡಳಿತಾತ್ಮಕ ವೆಚ್ಚದಿಂದ ಮಾಡಲಾದ ಸ್ವೀಕಾರಾರ್ಹವಲ್ಲದ ವೆಚ್ಚವನ್ನು ತೋರಿಸುವ ತ:ಖ್ತೆ	5.12.2	75

ಮುನ್ನುಡಿ

1. ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ಈ ವರದಿಯನ್ನು ರಾಜ್ಯ ಶಾಸಕಾಂಗದ ಮುಂದೆ ಮಂಡಿಸುವ ಸಲುವಾಗಿ ಸಂವಿಧಾನದ ಕಲಮು 151 (2)ರ ಅಡಿಯಲ್ಲಿ ಕರ್ನಾಟಕದ ರಾಜ್ಯಪಾಲರಿಗೆ ಸಲ್ಲಿಸುವ ಸಲುವಾಗಿ ತಯಾರಿಸಲಾಗಿರುವುದು.
2. ಈ ವರದಿಯು ಜಿಲ್ಲಾ ಖನಿಜ ಪ್ರತಿಷ್ಠಾನ ಟ್ರಸ್ಟ್ (ಡಿಎಂಎಫ್‌ಟಿ) ಒಳಗೊಂಡಂತೆ ಪ್ರಧಾನ ಮಂತ್ರಿ ಖನಿಜ ಕ್ಷೇತ್ರ ಕಲ್ಯಾಣ ಯೋಜನೆಯ (ಪಿಎಂಕೆಕೆಕೆವೈ) ಮೇಲೆ ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಯ ಫಲಿತಾಂಶಗಳನ್ನು ಒಳಗೊಂಡಿರುವುದು.
3. ಲೆಕ್ಕಪರಿಶೋಧನೆಯನ್ನು ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧರು ನೀಡಿರುವ ಲೆಕ್ಕಪರಿಶೋಧನೆಯ ಮಾನದಂಡಗಳ ಅನುಸಾರ ನಡೆಸಲಾಗಿರುವುದು.
4. ಕನ್ನಡ ಭಾಷಾಂತರ ಆವೃತ್ತಿಯ ಸಂದೇಹಗಳಿಗೆ ಆಂಗ್ಲ ಭಾಷಾ ಆವೃತ್ತಿಯೇ ಅಧಿಕೃತವೆಂದು ಪರಿಗಣಿಸಬೇಕು.

ಸ್ಥೂಲನೋಟ

ಸ್ಥೂಲನೋಟ

ನಾವು ಈ ವಿಷಯವನ್ನು ಏತಕ್ಕಾಗಿ ಆಯ್ಕೆ ಮಾಡಿಕೊಂಡೆವು?

ಜಿಲ್ಲಾ ಖನಿಜ ಪ್ರತಿಷ್ಠಾನ ಟ್ರಸ್ಟ್ (ಡಿಎಂಎಫ್‌ಗಳು) ಉತ್ಪಾದಿಸಿರುವಂತಹ ಹಣಕಾಸನ್ನು ಉಪಯೋಗಿಸಿಕೊಂಡು ಗಣಿಗಾರಿಕೆ ಸಂಬಂಧಿತ ಕಾರ್ಯಾಚರಣೆಗಳಿಂದ ತೊಂದರೆಗೆ ಈಡಾಗಿರುವಂತಹ ಪ್ರದೇಶಗಳು ಮತ್ತು ಜನತೆಯ ಕಲ್ಯಾಣ ಅಥವಾ ಯೋಗಕ್ಷೇಮವನ್ನು ಖಚಿತಪಡಿಸಿಕೊಳ್ಳುವ ಸಲುವಾಗಿ ಭಾರತ ಸರ್ಕಾರವು ಸೆಪ್ಟಂಬರ್ 2015ರಲ್ಲಿ ಪ್ರಧಾನ ಮಂತ್ರಿ ಖನಿಜ ಕ್ಷೇತ್ರ ಕಲ್ಯಾಣ ಯೋಜನೆಯನ್ನು (ಪಿಎಂಕೆಕೆಕೆವೈ) ಪ್ರಾರಂಭಿಸಿತು. ಪಿಎಂಕೆಕೆಕೆವೈಯ ಉದ್ದೇಶಗಳು (ಎ) ಗಣಿಗಾರಿಕೆಯಿಂದ ತೊಂದರೆಗೆ ಈಡಾಗಿರುವ ಪ್ರದೇಶಗಳಲ್ಲಿ ವಿವಿಧ ಅಭಿವೃದ್ಧಿ ಮತ್ತು ಕಲ್ಯಾಣಕಾರಿ ಯೋಜನೆಗಳು/ಕಾರ್ಯಕ್ರಮಗಳನ್ನು ಕಾರ್ಯಗತಗೊಳಿಸುವುದು ಹಾಗೂ ಈ ಯೋಜನೆಗಳು/ಕಾರ್ಯಕ್ರಮಗಳು ರಾಜ್ಯ ಮತ್ತು ಕೇಂದ್ರ ಸರ್ಕಾರದ ಪ್ರಸಕ್ತ ಪ್ರಗತಿಯಲ್ಲಿರುವ ಯೋಜನೆಗಳು/ಕಾರ್ಯಕ್ರಮಗಳಿಗೆ ಪೂರಕವಾಗಿರುವುದು; (ಬಿ) ಗಣಿಗಾರಿಕೆ ಇರುವಂತಹ ಜಿಲ್ಲೆಗಳಲ್ಲಿ ಗಣಿಗಾರಿಕೆ ವೇಳೆಯಲ್ಲಿ ಹಾಗೂ ತದನಂತರದಲ್ಲಿ ಪರಿಸರದ ಮೇಲೆ, ಜನತೆಯ ಆರೋಗ್ಯ ಮತ್ತು ಸಾಮಾಜಿಕ-ಆರ್ಥಿಕತೆಯ ಮೇಲೆ ಪ್ರತಿಕೂಲ ಪ್ರಭಾವಗಳನ್ನು ಕನಿಷ್ಠ ಮಟ್ಟಕ್ಕೆ ತರುವುದು / ತಡೆಯುವುದು; ಹಾಗೂ (ಸಿ) ಗಣಿಗಾರಿಕೆ ಪ್ರದೇಶಗಳಲ್ಲಿ ತೊಂದರೆಗೆ ಈಡಾಗಿರುವ ಜನತೆಗಾಗಿ ದೀರ್ಘಾವಧಿ ಊರ್ಜಿತಗೊಳ್ಳಬಲ್ಲಂತಹ ಜೀವನೋಪಾಯಗಳನ್ನು ಖಚಿತಪಡಿಸಿಕೊಳ್ಳುವುದು.

ಯೋಜನೆ ಪ್ರಾರಂಭಗೊಂಡಾಗಿನಿಂದ ಜಿಲ್ಲಾ ಖನಿಜ ಪ್ರತಿಷ್ಠಾನ ಟ್ರಸ್ಟ್‌ಗಳು (ಡಿಎಂಎಫ್‌ಟಿಗಳು) ಮಾರ್ಚ್ 2023ರ ಅಂತ್ಯದವರೆಗೂ ₹ 4003.51 ಕೋಟಿ ಸಂಗ್ರಹಿಸಿದ್ದವು ಹಾಗೂ ₹ 1,826.46 ಕೋಟಿಗಳಷ್ಟನ್ನು ಖರ್ಚು ಮಾಡಿದ್ದವು.

ಮಾರ್ಚ್ 2023ರಲ್ಲಿದ್ದಂತೆ ಡಿಎಂಎಫ್‌ಟಿಗಳು ಪಿಎಂಕೆಕೆಕೆವೈ ಅಡಿಯಲ್ಲಿ 10,865 ಯೋಜನೆಗಳನ್ನು ಮಂಜೂರು ಮಾಡಿದ್ದವು ಹಾಗೂ ₹ 3,902.00 ಕೋಟಿ ಹಣಕಾಸನ್ನು ಹಂಚಿಕೆ ಮಾಡಿದ್ದವು.

ಗಣಿಗಾರಿಕೆ ಸಂಬಂಧಿತ ಕಾರ್ಯಾಚರಣೆಗಳಿಂದ ತೊಂದರೆಗೆ ಈಡಾಗಿರುವ ವ್ಯಕ್ತಿಗಳು ಮತ್ತು ಪ್ರದೇಶಗಳ ಹಿತಾಸಕ್ತಿ ಮತ್ತು ಪ್ರಯೋಜನಗಳಿಗಾಗಿ ಜಿಲ್ಲಾ ಖನಿಜ ಪ್ರತಿಷ್ಠಾನ ಹಣಕಾಸನ್ನು ಎಷ್ಟರಮಟ್ಟಿಗೆ ಉಪಯೋಗಿಸಿಕೊಳ್ಳಲಾಗಿರುವುದು ಎಂಬುದನ್ನು ನಿರ್ಧಾರಣೆ ಮಾಡುವ ಸಲುವಾಗಿ. ಜಿಲ್ಲಾ ಖನಿಜ ಪ್ರತಿಷ್ಠಾನ ಟ್ರಸ್ಟುಗಳ (ಡಿಎಂಎಫ್‌ಟಿಗಳ) ರಚನೆಯನ್ನು, ಡಿಎಂಎಫ್‌ಟಿಗಳಲ್ಲಿ ಲಭ್ಯವಿರುವಂತಹ ಮೂಲಧನ (ಕಾರ್ಪಸ್) ಹಾಗೂ ಅಧಿನಿಯಮಗಳು, ಅಧಿಸೂಚನೆ ಹಾಗೂ ಹೊರಡಿಸಲಾಗಿರುವಂತಹ ನಿಯಮಗಳಲ್ಲಿ ಯೋಜನೆಯಲ್ಲಿ ಚಿಂತಿಸಿರುವಂತಹ ರೀತಿಯಲ್ಲಿ, ಅವುಗಳ ಉಪಯೋಗಕ್ಕಾಗಿ ಆಡಳಿತಾತ್ಮಕ ಮತ್ತು ಉತ್ತರದಾಯಿತ್ವ ವ್ಯವಸ್ಥೆಗಳಿಗೆ ಅನುಸರಣಾ ಕ್ರಮಗಳನ್ನು ಮೌಲ್ಯಮಾಪನ ಮಾಡುವ ಸಲುವಾಗಿ ಒಂದು ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಯನ್ನು ನಡೆಸಲಾಯಿತು.

ಈ ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಯು ಪ್ರಧಾನ ಮಂತ್ರಿ ಖನಿಜ ಕ್ಷೇತ್ರ ಕಲ್ಯಾಣ ಯೋಜನೆಯನ್ನು ಕಾರ್ಯಗತಗೊಳಿಸುವಿಕೆಯ ಆಡಳಿತಾತ್ಮಕ ಅಂಶಗಳನ್ನು, ಸಾಮಾಜಿಕ-ಸಾಂಸ್ಕೃತಿಕ ಹಾಗೂ ಸಾಮಾಜಿಕ ಮಾನಸಿಕ ಸಮಸ್ಯೆಗಳಿಗೆ ಸಂಬಂಧಿಸಿದಂತೆ ಇತರೆ ಪ್ರಮುಖ ಅಂಶಗಳನ್ನು, ಗಣಿಗಾರಿಕೆ ಚಟುವಟಿಕೆಗಳ ಕಾರಣ ಅಲೆಮಾರಿ/ಸ್ಥಳೀಯ ಜನತೆಯ ವಲಸೆ/ಸ್ಥಳಾಂತರಗಳ ಕಾರಣ, ಜೀವನೋಪಾಯ, ಆರೋಗ್ಯ, ಮುಂತಾದವುಗಳ ಮೇಲಿನ ಪ್ರಭಾವ, ಇತ್ಯಾದಿಗಳನ್ನು ವ್ಯಾಪಿಸಿರುವುದು.

ನಾವು ಏನನ್ನು ಗಮನಿಸಿರುವೆವು ಹಾಗೂ ಶಿಫಾರಸು ಮಾಡಿರುವೆವು?

ಕಾನೂನಾತ್ಮಕ ಚೌಕಟ್ಟು

ಗಣಿಗಾರಿಕೆ ಚಟುವಟಿಕೆಗಳಿಂದ ತೊಂದರೆಗೆ ಈಡಾದಂತಹ ವ್ಯಕ್ತಿಗಳು, ಕೈಗಾರಿಕೆಗಳು, ಗುತ್ತಿಗೆದಾರರುಗಳು ಹಾಗೂ ಜಿಲ್ಲೆಗಳಿಂದ ಪರಿಸರೀಯ ಸಂಸ್ಥೆಗಳ ಸಹಿಭಾಗಿಗಳ ಪ್ರತಿನಿಧಿಗಳ ನಾಮನಿರ್ದೇಶನಕ್ಕೆ ನಿಯಮಗಳು ಅನುವು ಮಾಡಿರುತ್ತವೆಯಾದರೂ, ನಾಮನಿರ್ದೇಶನಗಳನ್ನು ಕೇವಲ ಐದು ಜಿಲ್ಲೆಗಳಲ್ಲಿ ಮಾಡಲಾಗಿದ್ದಿತು. ಡಿಎಂಎಫ್‌ಟಿಗಳ ಆಡಳಿತ ಮಂಡಳಿ ಮತ್ತು ವ್ಯವಸ್ಥಾಪಕ ಸಮಿತಿಯ ಸಂಯೋಜನೆ ಅಥವಾ ರಚನೆಯನ್ನು ನಿಯಂತ್ರಿಸುವ ನಿಯಮಗಳಲ್ಲಿ ಕೆಲವು ಬದಲಾವಣೆಗಳನ್ನು ತಕ್ಷಣದಿಂದ ಅಳವಡಿಸಿಕೊಳ್ಳುವಂತೆ ಭಾರತ ಸರ್ಕಾರದ ಗಣಿ ಸಚಿವಾಲಯವು ರಾಜ್ಯ ಸರ್ಕಾರಗಳಿಗೆ ನಿರ್ದೇಶಿಸಿದ್ದಿತಾದರೂ, ಕರ್ನಾಟಕ ಸರ್ಕಾರವು ಡಿಎಂಎಫ್‌ಟಿ ನಿಯಮಗಳು, 2016ಕ್ಕೆ ಯಾವುದೇ ತಿದ್ದುಪಡಿಯನ್ನು ಮಾಡಲಿಲ್ಲ. ಪರಿಪ್ರೇಕ್ಷಣ ಯೋಜನೆಯ ತಯಾರಿಕೆಗಾಗಿ ಯಾವುದೇ ಬೆಂಚುಮಾರ್ಕು/ಮಾನದಂಡ / ಮಟ್ಟದ ಗುರುತು ಸಮೀಕ್ಷೆಯನ್ನು ನಡೆಸಿರಲಿಲ್ಲ. ಪರೀಕ್ಷಾ-ಪರಿಶೀಲನೆ ಮಾಡಲಾದ ಡಿಎಂಎಫ್‌ಟಿಗಳ ಪರಿಪ್ರೇಕ್ಷಣ ಪೂರ್ವಭಾವಿ ಯೋಜನೆಯನ್ನು ತಯಾರಿಸುವ ಸಲುವಾಗಿ ಯಾವುದೇ ಮೂಲ ಸಮೀಕ್ಷೆಯನ್ನು ಮಾಡಿರಲಿಲ್ಲ. ಪರೀಕ್ಷಾ-ಪರಿಶೀಲನೆ ಮಾಡಲಾದಂತಹ ಡಿಎಂಎಫ್‌ಟಿಗಳು ಕೈಗೆತ್ತಿಕೊಳ್ಳಬೇಕಾದಂತಹ ಕಾರ್ಯಚಟುವಟಿಕೆಗಳಿಗಾಗಿ ಪ್ರಧಾನ ಪೂರ್ವಭಾವಿ ಯೋಜನೆ ಅಥವಾ ಅಂತರ್ದೃಷ್ಟಿ ದಾಖಲೆಗಳನ್ನು ತಯಾರಿಸಿರಲಿಲ್ಲ ಹಾಗೂ ಡಿಎಂಎಫ್‌ಟಿಗಳು ತೊಂದರೆಗೆ ಈಡಾಗಿರುವ ವ್ಯಕ್ತಿ/ಜನತೆಯ ಪಟ್ಟಿಯನ್ನು ತಯಾರಿಸಿರಲಿಲ್ಲ.

(ಅಧ್ಯಾಯ II)

ಡಿಎಂಎಫ್‌ಟಿಗಳ ಹಣಕಾಸಿನ ಸಂಗ್ರಹಣೆ

ಡಿಎಂಎಫ್‌ಟಿಗಳ ಹಣಕಾಸಿನ ಪ್ರಮುಖ ಮೂಲವು ಗಣಿಗಳು ಮತ್ತು ಕಲ್ಲುಗಣಿಗಳ (ಕ್ವಾರೀಸ್) ಗುತ್ತಿಗೆ ಹಿಡುವಳಿದಾರರು ನಿಗದಿತ ದರಗಳಲ್ಲಿ ನೀಡುವ ಕೊಡುಗೆಗಳಿಂದ ಆಗಿದ್ದಿತು. ಈ ಹಣಕಾಸಿಗೆ ಬಾಕಿಯಿರುವ ಮೊತ್ತಗಳ ಸಂಗ್ರಹಣೆಯನ್ನು ಖಚಿತಪಡಿಸಿಕೊಳ್ಳುವ ಸಲುವಾಗಿ ಯಾವುದೇ ನಿಯಂತ್ರಣ ವ್ಯವಸ್ಥೆಯು ಇರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಕಾಮಗಾರಿಗಳಿಗಾಗಿ ಉಪಯೋಗಿಸಲಾದಂತಹ ಅಪ್ರಧಾನ ಖನಿಜಗಳು, ಕಾಮಗಾರಿಯನ್ನು ಕಾರ್ಯಗತಗೊಳಿಸುವ ಇಲಾಖಾ ಸಂಸ್ಥೆಗಳು ಮೂಲದಲ್ಲಿಯೇ ಕಡಿದುಕೊಳ್ಳಲಾದಂತಹ ರಾಜಧನ ಮತ್ತು ಡಿಎಂಎಫ್ ಕೊಡುಗೆ ಮುಂತಾದ ವಿವರಗಳನ್ನು ಸೂಚಿಸುವಂತಹ ಸಲ್ಲಿಕೆಗಳನ್ನು ಪಡೆದುಕೊಳ್ಳುವ ವ್ಯವಸ್ಥೆಯು ಇರಲಿಲ್ಲ. ಡಿಎಂಎಫ್‌ಟಿಗಳು ಒದಗಿಸಿರುವಂತಹ ಹಣಕಾಸಿನ ಮೇಲೆ ಕಾರ್ಯಗತಗೊಳಿಸುವ ಸಂಸ್ಥೆಗಳು ಸ್ವೀಕರಿಸಿರುವಂತಹ ಬಡ್ಡಿ ಮೊತ್ತಗಳು ಡಿಎಂಎಫ್‌ಟಿ, ಬಳ್ಳಾರಿ, ಇವರಿಗೆ ವರ್ಗಾವಣೆ ಮಾಡದೆಯೇ ಕಾರ್ಯಗತಗೊಳಿಸುವ ಸಂಸ್ಥೆಗಳಲ್ಲಿ ಉಳಿದುಕೊಂಡಿದ್ದಿತು.

(ಅಧ್ಯಾಯ – III)

ಡಿಎಂಎಫ್‌ಟಿಗಳಲ್ಲಿ ಲೆಕ್ಕವನ್ನಿಡುವಿಕೆಗಳ ಪರಿಗಣನೆ, ಉತ್ತರದಾಯಿತ್ವ ಮತ್ತು ಪಾರದರ್ಶಕತೆ ವ್ಯವಸ್ಥೆ

ಜಿಲ್ಲಾ ಖನಿಜ ಪ್ರತಿಷ್ಠಾನ ಟ್ರಸ್ಟ್ (ಫೌಂಡೇಷನ್ನು) ಟ್ರಸ್ಟಿನ ಹಣಕಾಸನ್ನು ಗಳಿಸಬಹುದಾದ ಬಡ್ಡಿಯನ್ನು ಬಿಟ್ಟುಕೊಟ್ಟು ಖಜಾನೆಯ ವೈಯಕ್ತಿಕ ಠೇವಣಿ ಖಾತೆಗಳಲ್ಲಿ ನಿರುಪಯುಕ್ತವಾಗಿ ಇಡಲಾಗಿದ್ದಿತು, ಡಿಎಂಎಫ್‌ಟಿ, ಬಳ್ಳಾರಿ ಒದಗಿಸಿದ್ದಂತಹ ಹಣಕಾಸಿನ ಮೇಲೆ ಗಳಿಸಲಾದ ಬಡ್ಡಿಯನ್ನು ಕಾರ್ಯಗತಗೊಳಿಸುವ ಸಂಸ್ಥೆಗಳು ಪಾವತಿಸಿರಲಿಲ್ಲ. ದತ್ತಿ ಹಣಕಾಸನ್ನು ನಿಶ್ಚಿತ ಅವಧಿ ಠೇವಣಿಗಳಲ್ಲಿ ಇಡುವಲ್ಲಿ ಡಿಎಂಎಫ್‌ಟಿ, ಬಳ್ಳಾರಿ, ಇದರ ಉದಾಸೀನತೆಯು ಬಡ್ಡಿಯ ನಷ್ಟದಲ್ಲಿ ಪರಿಣಮಿಸಿದ್ದಿತು.

ರಾಜ್ಯ ಮಟ್ಟದ ಮೇಲ್ವಿಚಾರಣಾ ಸಮಿತಿಯನ್ನು ರಚಿಸಲಾಗಿದ್ದಿತಾದರೂ, ಯಾವುದೇ ಸಭೆಗಳನ್ನು ನಡೆಸಿರಲಿಲ್ಲ. ಡಿಎಂಎಫ್‌ಟಿಗಳ ಯೋಜನೆಗಳು ಮತ್ತು ಕಾರ್ಯಕ್ರಮಗಳು ಹಾಗೂ ವ್ಯವಸ್ಥಾಪನಾ ಸಮಿತಿಗಳನ್ನು ಮೇಲ್ವಿಚಾರಣೆ ಮಾಡಬೇಕಿದ್ದಂತಹ ಹಾಗೂ ಮುಖ್ಯ ಕಾರ್ಯದರ್ಶಿಯವರ ನೇತೃತ್ವದಲ್ಲಿದ್ದಂತಹ ರಾಜ್ಯ ಮಟ್ಟದ ಅಧಿಕಾರದತ್ತ ಸಮಿತಿಯು (ಸ್ಟೇಟ್ ಲೆವೆಲ್ ಎಂಪವರ್ಡ್ ಕಮಿಟಿ) ನಿರ್ದಿಷ್ಟ ಪಡಿಸಿದ ವರ್ಷಕ್ಕೆ ಕನಿಷ್ಠ ಮೂರು ಸಭೆಗಳಿಗೆ ಬದಲಾಗಿ 2018ರಿಂದ 2023ರ ಅವಧಿಯಲ್ಲಿ ಕೇವಲ ನಾಲ್ಕು ಸಲ ಸಭೆ ಸೇರಿದ್ದಿತು. ಪರೀಕ್ಷಾ-ಪರಿಶೀಲನೆ ಮಾಡಲಾದ ಜಿಲ್ಲೆಗಳಲ್ಲಿ ಪ್ರತಿಷ್ಠಾನ ಟ್ರಸ್ಟುಗಳು ಹಾಗೂ ವ್ಯವಸ್ಥಾಪನಾ ಸಮಿತಿಗಳು ಸಭೆಗಳನ್ನು ನಿರ್ದಿಷ್ಟ ಸಂಖ್ಯೆಗಳಲ್ಲಿ ನಡೆಸಿರಲಿಲ್ಲ.

(ಅಧ್ಯಾಯ – IV)

ಯೋಜನೆಗಳ ನಿರ್ವಹಣೆ

ಪರಿಸರ ಸಂರಕ್ಷಣೆ, ಪರಿಹಾರಕ ಅರಣ್ಯಗಳನ್ನು/ಗಿಡಮರಗಳನ್ನು ಬೆಳೆಸುವುದು ಹಾಗೂ ಮಾಲಿನ್ಯ ನಿಯಂತ್ರಣ ಕ್ರಮಗಳು (ಇಪಿಪಿಸಿ), ಮಹಿಳೆಯರು ಮತ್ತು ಮಕ್ಕಳ ಕ್ಷೇಮಾಭ್ಯುದಯ (ಡಬ್ಲ್ಯೂಸಿಡಿ), ವಯೋವೃದ್ಧರು ಮತ್ತು ವಿಕಲಚೇತನ ಜನತೆಯ ಕ್ಷೇಮಾಭ್ಯುದಯ (ಡಬ್ಲ್ಯೂಎಡಿ), ಕೌಶಲ್ಯ ಅಭಿವೃದ್ಧಿ, ನೈರ್ಮಲ್ಯ ಹಾಗೂ ಪರಿಸರದ ಗುಣಮಟ್ಟ ಹೆಚ್ಚಳಕ್ಕಾಗಿ ಇತರೆ ಕ್ರಮಗಳು, ಇವೇ ಮುಂತಾದ ಆದ್ಯತೆಯ ವಲಯಗಳಿಗೆ ಹಣಕಾಸಿನ ಹಂಚಿಕೆಯು ಕಡಿಮೆ ಪ್ರಮಾಣದಲ್ಲಿ ಆಗಿದ್ದಿತು. ಪಿಎಂಕೆಕೆಕೆವೈ ಮಾರ್ಗಸೂಚಿಗಳಲ್ಲಿ ಚಿಂತಿಸಿರದಂತಹ ಶಿಕ್ಷಣ, ಆರೋಗ್ಯ, ಭೌತಿಕ ಮೂಲಸೌಕರ್ಯಗಳು, ನೀರಾವರಿ ಮತ್ತು ಇಂಧನ ಹಾಗೂ ಜಲಾನಯನ ಅಭಿವೃದ್ಧಿ ಶೀರ್ಷಿಕೆಗಳ ಅಡಿಯಲ್ಲಿ ಕಾಮಗಾರಿಗಳನ್ನು ಅನುಮೋದಿಸಲಾಗಿದ್ದಿತು ಹಾಗೂ ಕಾರ್ಯಗತಗೊಳಿಸಲಾಗಿದ್ದಿತು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಕಾರ್ಯಗತಗೊಳಿಸುವ ಸಂಸ್ಥೆಯು (ಉಪ-ನಿರ್ದೇಶಕರು, ಶಿಕ್ಷಣ ಇಲಾಖೆ, ಚಿತ್ರದುರ್ಗ) ಒಂದು ಕಾಮಗಾರಿಯನ್ನು ಪ್ರತಿಯೊಂದು ₹ 1.00 ಕೋಟಿಗೂ ಕಡಿಮೆ ಇರುವ ರೀತಿಯಲ್ಲಿ 12 ಸಣ್ಣ ಕಾಮಗಾರಿಗಳನ್ನಾಗಿ ವಿಭಜಿಸಿದ್ದಿತು ಹಾಗೂ ಕಾಮಗಾರಿಯನ್ನು ಟೆಂಡರುಗಳನ್ನು ಆಹ್ವಾನಿಸದೆಯೇ ಕಿಯಾನಿಕ್ಸ್‌ಗೆ ವಹಿಸಿಕೊಡಲಾಗಿದ್ದಿತು. ಅದೇ ರೀತಿಯಲ್ಲಿ, ಡಿಎಂಎಫ್‌ಟಿ, ಬಳ್ಳಾರಿ, ಆರು ಕಾಮಗಾರಿಗಳಿಗೆ ಸಂಬಂಧಿಸಿದಂತೆ ಪ್ರತಿಯೊಂದನ್ನೂ ಎರಡು ಅಥವಾ ಹೆಚ್ಚಿನ ಸಣ್ಣ ಕಾಮಗಾರಿಗಳನ್ನಾಗಿ ವಿಭಜಿಸಿತು ಹಾಗೂ ಅವುಗಳನ್ನು ನಿರ್ಮಿತಿ ಕೇಂದ್ರಕ್ಕೆ ನೀಡಿತು. ಕಾಮಗಾರಿಗಳನ್ನು ಯೋಜಿಸುವ ವೇಳೆಯಲ್ಲಿ ಸ್ಥಳೀಯ ಗ್ರಾಮ ಸಭೆ/ತೊಂದರೆಗೆ ಈಡಾದ ಜನತೆಯೊಂದಿಗೆ ಸಮಾಲೋಚನೆಗಳನ್ನು ಮಾಡಿರಲಿಲ್ಲ ಹಾಗೂ ಪೂರ್ಣಗೊಂಡಿರುವ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಅವುಗಳನ್ನು ಪರಿಣಾಮಕಾರಿತ್ವದಿಂದ ಉಪಯೋಗಿಸುವ ಹಾಗೂ ನಿರ್ವಹಿಸಿಕೊಂಡು ಹೋಗುವ ಸಲುವಾಗಿ ಈ ನಿಟ್ಟಿನಲ್ಲಿ ಯಾವುದೇ ಜಾಗೃತಿ-ಅರಿವು ಮೂಡಿಸುವ ಕಾರ್ಯಚಟುವಟಿಕೆಗಳನ್ನು ನಡೆಸಿರಲಿಲ್ಲ. ಕಾರ್ಯಗತಗೊಳಿಸುವ ಸಂಸ್ಥೆಗಳು ಅನುಮೋದಿತ ಕಾಮಗಾರಿ ಪೂರ್ವಭಾವಿ ಯೋಜನೆಗಳಿಂದ ಮಾರ್ಗಾಂತರಣಗಳನ್ನು ಮಾಡಿದ್ದವು. ಉದಾಹರಣೆಗೆ, ಕಾಮಗಾರಿಗಳನ್ನು ಪೂರ್ಣಗೊಳಿಸುವಲ್ಲಿ ವಿಳಂಬಗಳು, ನಿಕೃಷ್ಟ ಗುಣಮಟ್ಟ ಹಾಗೂ ಅಪೂರ್ಣಗೊಂಡಿರುವ ಕಾಮಗಾರಿಗಳು, ಇತ್ಯಾದಿಗಳ ದೃಷ್ಟಾಂತಗಳಿದ್ದವು. ವಾರ್ಷಿಕ ಪೂರ್ವಭಾವಿ ಯೋಜನೆಗಳು ಹಾಗೂ ಅನುಮೋದಿತ ಯೋಜನೆಗಳು/ಕಾರ್ಯಕ್ರಮಗಳನ್ನು ಕಾರ್ಯಗತಗೊಳಿಸುವಿಕೆಯನ್ನು ಖಚಿತಪಡಿಸಿಕೊಳ್ಳುವಲ್ಲಿ ವ್ಯವಸ್ಥಾಪನಾ ಸಮಿತಿಯ ವಿಫಲತೆಯು ಅನುದಾನಗಳು ಬಿಡುಗಡೆಗೊಂಡಿದ್ದಾಗ್ಯೂ ಕಾಮಗಾರಿಗಳನ್ನು ಪ್ರಾರಂಭಿಸಿರದಿರುವಲ್ಲಿ ಪರಿಣಮಿಸಿದ್ದಿತು.

(ಅಧ್ಯಾಯ –*V*)

ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು ಏನನ್ನು ಶಿಫಾರಸು ಮಾಡುತ್ತಿರುವರು

ಪಿಎಂಕೆಕೆಕೆವೈ ಉದ್ದೇಶಗಳನ್ನು ಪೂರೈಸುವ ರೀತಿಯಲ್ಲಿ ಡಿಎಂಎಫ್‌ಟಿಗಳು ಪರಿಪ್ರೇಕ್ಷಣ ಮತ್ತು ವಾರ್ಷಿಕ ಪೂರ್ವಭಾವಿ ಯೋಜನೆಗಳನ್ನು ರೂಪಿಸುವ ಸಲುವಾಗಿ ಭಾರತ ಸರ್ಕಾರವು ಸವಿವರ ನಿರ್ದೇಶನಗಳನ್ನು / ಮಾರ್ಗಸೂಚಿಗಳನ್ನು ಒಳಗೊಂಡಂತೆ ಡಿಎಂಎಫ್‌ಟಿ ನಿಯಮಗಳಿಗೆ ತಿದ್ದುಪಡಿ ತರಲು ಕ್ರಮವನ್ನು ಕೈಗೊಳ್ಳಬೇಕು ಎಂಬುದಾಗಿ ಲೆಕ್ಕಪರಿಶೋಧನೆಯು ಶಿಫಾರಸು ಮಾಡುತ್ತಿರುವುದು.

ಸರ್ಕಾರವು ಮಾಹಿತಿ, ಶಿಕ್ಷಣ ಸಂವಹನ – ಪ್ರಸಾರ ಕಾರ್ಯಚಟುವಟಿಕೆಗಳ ಮೂಲಕ ಯೋಜನೆಯ ಬಗ್ಗೆ ಅರಿವನ್ನು ಹೆಚ್ಚಳಗೊಳಿಸುವ ಸಲುವಾಗಿ ಕ್ರಮವನ್ನು ತೆಗೆದುಕೊಳ್ಳತಕ್ಕದ್ದು ಹಾಗೂ ಗಣಿಗಾರಿಕೆಯಿಂದ ನೇರವಾಗಿ ಭಾಧಿತರಾದ ಜನರನ್ನು ಗುರಿಯಾಗಿರಿಸಿದ ಯೋಜನೆಗಳ ಪೂರ್ವಭಾವಿಯಾಗಿ ಯೋಜಿಸುವುದನ್ನು ಸಕ್ರಿಯಗೊಳಿಸಲು ಸರ್ಕಾರವು ಡಿಎಂಎಫ್‌ಟಿಗಳು ಭಾಧಿತರಾದ ವ್ಯಕಿಗಳ ಪಟ್ಟಿಯನ್ನು ತಯಾರಿಸಬೇಕೆಂದು ಸೂಕ್ತ ನಿರ್ದೇಶನಗಳನ್ನು ನೀಡಬೇಕು.

ಡಿಎಂಎಫ್‌ಗಳಿಗೆ ರಾಜಧನ, ದಂಡ ಹಾಗೂ ಕಾಣಿಕೆ, ಇವುಗಳನ್ನು ಪಾವತಿಸಬೇಕಿರುವ ಬಾಕಿಗಳನ್ನು ಮೂಲದಲ್ಲಿಯೇ ಕಡಿದುಕೊಳ್ಳಲಾಗಿರುವುದು ಮತ್ತು ಯಥಾರ್ಥತೆಯಿಂದ ಕೂಡಿದಂತೆ ಪಾವತಿಸಲಾಗಿರುವುದು ಎಂಬುದನ್ನು ಖಚಿತಪಡಿಸಿಕೊಳ್ಳುವ ಸಲುವಾಗಿ ಕಾರ್ಯಗತಗೊಳಿಸುವ ಇಲಾಖೆಗಳು/ಸಂಸ್ಥೆಗಳಿಂದ ಸಲ್ಲಿಕೆಗಳನ್ನು ಪಡೆದುಕೊಳ್ಳುವ ಒಂದು ಸಮರ್ಪಕವಾದಂತಹ ವ್ಯವಸ್ಥೆಯನ್ನು ಸ್ಥಾಪಿಸತಕ್ಕದ್ದು.

ಡಿಎಂಎಫ್‌ಟಿ ಹಣಕಾಸುಗಳ ಮೇಲೆ ಗಳಿಸಲಾಗಿರುವ ಬಡ್ಡಿಯನ್ನು ಹಾಗೂ ಪ್ರತಿಯೊಂದು ಯೋಜನೆಯು ಪೂರ್ಣಗೊಂಡನಂತರ ಖರ್ಚಾಗದೆಯೇ ಉಳಿದಿರುವ ಶಿಲ್ಕನ್ನು ನಿಯತಕಾಲಿಕವಾಗಿ ವರ್ಗಾಯಿಸುವ ಸಲುವಾಗಿ ಕಾರ್ಯಗತಗೊಳಿಸುವ ಸಂಸ್ಥೆಗಳು ಕ್ರಮವನ್ನು ಕೈಗೊಳ್ಳಬೇಕು.

ಪಿಎಂಕೆಕೆಕೆವೈ ಮಾರ್ಗಸೂಚಿಗಳ ಅನುವುಗಳ ಅನುಸಾರ ಹಾಗೂ ಹಾಗೂ ಡಿಎಂಎಫ್‌ಟಿ ನಿಯಮಗಳು, 2016ರ ಅನುವುಗಳ ಅನುಸಾರ ಕಾಮಗಾರಿಗಳನ್ನು ಯೋಜಿಸುವ ಸಲುವಾಗಿ ಹಾಗೂ ಕಾರ್ಯಗತಗೊಳಿಸುವ ಸಲುವಾಗಿ ಕ್ರಮವನ್ನು ಕೈಗೊಳ್ಳತಕ್ಕದ್ದು.

ಡಿಎಂಎಫ್‌ಟಿಗಳು ಹಾಗೂ ಸಂಬಂಧಿತ ಅಧೀನ ಇಲಾಖೆಗಳು ಸೃಷ್ಠಿಸಲಾಗಿರುವ ಆಸ್ತಿಗಳನ್ನು ಯಾವ ಉದ್ದೇಶಕ್ಕಾಗಿ ಸೃಷ್ಠಿಸಲಾಗಿರುವುದೋ ಅಂತಹ ಉದ್ದೇಶಕ್ಕಾಗಿ ಉಪಯೋಗಿಸಿಕೊಳ್ಳುತ್ತಿರುವುದನ್ನು ಹಾಗೂ ಸಂಬಂಧಿತ ಕಾರ್ಯಾಚರಣೆಗಳು ಮತ್ತು ನಿರ್ವಹಣಾ ವೆಚ್ಚಗಳನ್ನು ಪೂರೈಸುವ ಸಲುವಾಗಿ ವ್ಯವಸ್ಥೆಗಳನ್ನು ಮಾಡಿಕೊಳ್ಳಲಾಗಿರುವುದು ಎಂಬುದರ ಬಗ್ಗೆ ಖಚಿತಪಡಿಸಿಕೊಳ್ಳತಕ್ಕದ್ದು.

ಲೆಕ್ಕಪರಿಶೋಧನಾ ಶಿಫಾರಸುಗಳಿಗೆ ಸರ್ಕಾರದ ಪ್ರತಿಕ್ರಿಯೆ

ಕರ್ನಾಟಕ ಸರ್ಕಾರವು ಲೆಕ್ಕಪರಿಶೋಧನೆಯ ಎಲ್ಲಾ ಶಿಫಾರಸುಗಳನ್ನು ಒಪ್ಪಿಕೊಂಡಿರುವುದು ಹಾಗೂ ಎಲ್ಲೆಲ್ಲಿ ಅಗತ್ಯತೆ ಇರುವುದೋ ಅಂತಹ ಕಡೆಗಳಲ್ಲಿ ಅಗತ್ಯ ಕ್ರಮಗಳನ್ನು ಕೈಗೊಳ್ಳುವುದಾಗಿ ಭರವಸೆ ನೀಡಿರುವುದು.

ಅಧ್ಯಾಯ – I
ಪೀಠಿಕೆ

ಅಧ್ಯಾಯ I

ಪೀಠಿಕೆ

1.1 ಭಾರತ ಸರ್ಕಾರವು ಗಣಿಗಾರಿಕೆ ಸಂಬಂಧಿತ ಕಾರ್ಯಾಚರಣೆಗಳಿಂದ ತೊಂದರೆಗೆ ಈಡಾಗಿರುವಂತಹ ಪ್ರದೇಶಗಳಲ್ಲಿನ ಜನತೆಯ ಯೋಗಕ್ಷೇಮವನ್ನು ಖಚಿತಪಡಿಸಿಕೊಳ್ಳುವ ಸಲುವಾಗಿ ಪ್ರಧಾನ ಮಂತ್ರಿ ಖನಿಜ ಕ್ಷೇತ್ರ ಕಲ್ಯಾಣ ಯೋಜನೆಯನ್ನು (ಪಿಎಂಕೆಕೆಕೆವೈ) ರೂಪಿಸಿತು (ಸೆಪ್ಟಂಬರ್ 2015). ಈ ಯೋಜನೆಯು ಗಣಿಗಾರಿಕೆ ಗುತ್ತಿಗೆ ಹಿಡುವಳಿದಾರರುಗಳಿಂದ ಗಣಿಗಳು ಮತ್ತು ಖನಿಜಗಳು (ಅಭಿವೃದ್ಧಿ ಮತ್ತು ನಿಯಂತ್ರಣ (ಎಂಎಂಡಿಆರ್) ಅಧಿನಿಯಮ, 1957ರ ಅನುಸಾರ ಜಿಲ್ಲಾ ಖನಿಜ ಪ್ರತಿಷ್ಠಾನ ಟ್ರಸ್ಟ್‌ಗೆ[1] ರಾಜಧನದ ಒಂದು ಶೇಕಡಾವಾರಿನಂತೆ ಪಾವತಿಸಬೇಕಾದಂತಹ ಕಾಣಿಕೆಗಳ ಮೂಲಕ ಸಂಗ್ರಹಿಸಲಾಗುವಂತಹ ಹಣಕಾಸನ್ನು ಉಪಯೋಗಿಸಿಕೊಳ್ಳುವ ಉದ್ದೇಶವನ್ನು ಹೊಂದಿದ್ದಿತು. ಪಿಎಂಕೆಕೆಕೆವೈ ಉದ್ದೇಶಗಳೆಂದರೆ: (ಎ) ಗಣಿಗಾರಿಕೆಯಿಂದ ತೊಂದರೆಗೆ ಈಡಾಗಿರುವ ಪ್ರದೇಶಗಳಲ್ಲಿ ವಿವಿಧ ಅಭಿವೃದ್ಧಿ ಮತ್ತು ಕಲ್ಯಾಣಕಾರಿ ಯೋಜನೆಗಳು/ಕಾರ್ಯಕ್ರಮಗಳನ್ನು ಕಾರ್ಯಗತಗೊಳಿಸುವುದು ಹಾಗೂ ಈ ಯೋಜನೆಗಳು/ಕಾರ್ಯಕ್ರಮಗಳು ರಾಜ್ಯ ಮತ್ತು ಕೇಂದ್ರ ಸರ್ಕಾರದ ಪ್ರಸಕ್ತ ಪ್ರಗತಿಯಲ್ಲಿರುವ ಯೋಜನೆಗಳು/ಕಾರ್ಯಕ್ರಮಗಳಿಗೆ ಪೂರಕವಾಗಿರುವುದು; (ಬಿ) ಗಣಿಗಾರಿಕೆ ಇರುವಂತಹ ಜಿಲ್ಲೆಗಳಲ್ಲಿ ಗಣಿಗಾರಿಕೆ ವೇಳೆಯಲ್ಲಿ ಹಾಗೂ ತದನಂತರದಲ್ಲಿ ಪರಿಸರದ ಮೇಲೆ, ಜನತೆಯ ಆರೋಗ್ಯ ಮತ್ತು ಸಾಮಾಜಿಕ–ಆರ್ಥಿಕತೆಯ ಮೇಲೆ ಪ್ರತಿಕೂಲ ಪ್ರಭಾವಗಳನ್ನು ಕನಿಷ್ಠ ಮಟ್ಟಕ್ಕೆ ತರುವುದು /ತಡೆಯುವುದು; ಹಾಗೂ (ಸಿ) ಗಣಿಗಾರಿಕೆ ಪ್ರದೇಶಗಳಲ್ಲಿ ತೊಂದರೆಗೆ ಈಡಾಗಿರುವ ಜನತೆಗಾಗಿ ದೀರ್ಘಾವಧಿ ಊರ್ಜಿತಗೊಳ್ಳಬಲ್ಲಂತಹ ಜೀವನೋಪಾಯಗಳನ್ನು ಖಚಿತಪಡಿಸಿಕೊಳ್ಳುವುದು.

ಯೋಜನೆಯನ್ನು ಕಾರ್ಯಗತಗೊಳಿಸುವ ಸಲುವಾಗಿ, ಭಾರತ ಸರ್ಕಾರವು ಗಣಿಗಳು ಮತ್ತು ಖನಿಜಗಳು (ಅಭಿವೃದ್ಧಿ ಮತ್ತು ನಿಯಂತ್ರಣ (ಎಂಎಂಡಿಆರ್) ಅಧಿನಿಯಮ, 1957ಕ್ಕೆ ತಿದ್ದುಪಡಿಯನ್ನು ತಂದಿತು (ಜನವರಿ 2015). ಈ ತಿದ್ದುಪಡಿಯು, ರಾಜ್ಯ ಸರ್ಕಾರಗಳು ಗಣಿಗಾರಿಕೆ ಸಂಬಂಧಿತ ಕಾರ್ಯಾಚರಣೆಗಳಿಂದ ತೊಂದರೆಗೆ ಈಡಾಗಿರುವಂತಹ ಎಲ್ಲಾ ಜಿಲ್ಲೆಗಳಲ್ಲಿ ಜಿಲ್ಲಾ ಖನಿಜ ಪ್ರತಿಷ್ಠಾನ (ಡಿಎಂಎಫ್) ಎಂಬುದಾಗಿ ಕರೆಯಲ್ಪಡುವಂತಹ ಒಂದು ಲಾಭದಾಯಕ ವ್ಯವಹಾರದ ಒಂದು ಧೋರಣೆಯನ್ನು ಹೊಂದಿರದ ಸಂಸ್ಥೆಯಾಗಿ ಒಂದು ಟ್ರಸ್ಟನ್ನು ಸ್ಥಾಪಿಸುವುದನ್ನು ಕಡ್ಡಾಯಗೊಳಿಸಿರುವುದು. ತಿದ್ದುಪಡಿಗೊಂಡಿರುವಂತಹ ಅಧಿನಿಯಮದ ಅನುಸಾರ, ಡಿಎಂಎಫ್‌ಗಳ ಸಂಯೋಜನೆ ಮತ್ತು ಕಾರ್ಯಚಟುವಟಿಕೆಗಳು ರಾಜ್ಯ ಸರ್ಕಾರವು ನಿರ್ದಿಷ್ಟಪಡಿಸಬಹುದಾದ ರೀತಿಯಲ್ಲಿ ಆಗಿರುತ್ತವೆ. ಮುಂದುವರೆದು, ಎಂಎಂಡಿಆರ್ ಅಧಿನಿಯಮ, 1957ರ ಪರಿಚ್ಛೇದ 20ಎ, ಇದರಿಂದ ಪ್ರದತ್ತವಾಗಿರುವಂತಹ ಅಧಿಕಾರವನ್ನು ಚಲಾಯಿಸುವ ಮೂಲಕ, ಭಾರತ ಸರ್ಕಾರವು ತನ್ನ ಸೆಪ್ಟಂಬರ್ 2015 ದಿನಾಂಕದ ಆದೇಶದ ಮೂಲಕ, ರಾಜ್ಯ ಸರ್ಕಾರಗಳು ತಾವು ಡಿಎಂಎಫ್‌ಗಳಿಗಾಗಿ ರೂಪಿಸಿರುವಂತಹ ನಿಯಮಗಳಿಗೆ ಪ್ರಧಾನ ಮಂತ್ರಿ ಖನಿಜ ಕ್ಷೇತ್ರ ಕಲ್ಯಾಣ ಯೋಜನೆಯನ್ನು (ಪಿಎಂಕೆಕೆಕೆವೈ) ಅಳವಡಿಸಿಕೊಳ್ಳುವಂತೆ ಹಾಗೂ ಡಿಎಂಎಫ್‌ಗಳಿಗೆ ಸಂಚಿತಗೊಳ್ಳುವಂತಹ ಹಣಕಾಸಿನಿಂದ ಯೋಜನೆಯನ್ನು ಕಾರ್ಯಗತಗೊಳಿಸುವಂತೆ ನಿರ್ದೇಶನವನ್ನು ನೀಡಿದ್ದಿತು.

ಗಣಿಗಳು ಮತ್ತು ಖನಿಜಗಳು ಅಭಿವೃದ್ಧಿ ಮತ್ತು ನಿಯಂತ್ರಣ (ಎಂಎಂಡಿಆರ್) ಅಧಿನಿಯಮ, 1957ರ ಪರಿಚ್ಛೇದ 9ಬಿ ಉಪ–ಪರಿಚ್ಛೇದಗಳು (5) ಮತ್ತು (6), ಇದರಿಂದ ಪ್ರದತ್ತವಾಗಿರುವಂತಹ ಅಧಿಕಾರವನ್ನು ಚಲಾಯಿಸುವ ಮೂಲಕ ಭಾರತ ಸರ್ಕಾರವು ಗಣಿಗಳು ಮತ್ತು ಖನಿಜಗಳು (ಜಿಲ್ಲಾ ಖನಿಜ ದತ್ತಿಸಂಸ್ಥೆಗಳಿಗೆ ಕಾಣಿಕೆ) ನಿಯಮಗಳು, 2015ನ್ನು ರೂಪಿಸಿತು (ಸೆಪ್ಟಂಬರ್ 2015). ಕರ್ನಾಟಕ ಸರ್ಕಾರವು ರಾಜ್ಯದಲ್ಲಿನ ಎಲ್ಲಾ ಜಿಲ್ಲೆಗಳಲ್ಲಿ ಡಿಎಂಎಫ್ ಸ್ಥಾಪಿಸಿ ಅಧಿಸೂಚನೆಯನ್ನು

[1] ರಾಜ್ಯ ಸರ್ಕಾರಗಳು ಜಿಲ್ಲಾ ಖನಿಜ ಪ್ರತಿಷ್ಠಾನ (ಡಿಎಂಎಫ್) ಎಂಬುದಾಗಿ ಕರೆಯಲ್ಪಡುವ ಒಂದು ಲಾಭದಾಯಕ ವ್ಯವಹಾರಗಳ ಧೋರಣೆಯನ್ನು ಹೊಂದಿರದ ಒಂದು ಟ್ರಸ್ಟನ್ನು ಗಣಿಗಾರಿಕೆ ಸಂಬಂಧಿತ ಕಾರ್ಯಾಚರಣೆಗಳಿಂದ ತೊಂದರೆಗೆ ಈಡಾಗಿರುವಂತಹ ಎಲ್ಲಾ ಜಿಲ್ಲೆಗಳಲ್ಲಿ ಸ್ಥಾಪಿಸುವುದನ್ನು ಕಡ್ಡಾಯಗೊಳಿಸಿರುವಂತಹ ಗಣಿಗಳು ಮತ್ತು ಖನಿಜಗಳು (ಅಭಿವೃದ್ಧಿ ಮತ್ತು ನಿಯಂತ್ರಣ (ಎಂಎಂಡಿಆರ್) ಅಧಿನಿಯಮ, 1957ಕ್ಕೆ ತಿದ್ದುಪಡಿಯೊಂದಿಗೆ.

ಹೊರಡಿಸಿತು (ನವಂಬರ್ 2015) ಹಾಗೂ ಜಿಲ್ಲಾ ಖನಿಜ ಪ್ರತಿಷ್ಠಾನ ನಿಯಮಗಳು, 2016ನ್ನು ರೂಪಿಸಿತು (ಜನವರಿ 2016). ಟ್ರಸ್ಟಿನ ಹೆಸರನ್ನು ಮಾರ್ಚ್ 2018ರಲ್ಲಿ ಜಿಲ್ಲಾ ಖನಿಜ ಪ್ರತಿಷ್ಠಾನ ಟ್ರಸ್ಟು (ಡಿಎಂಎಫ್‌ಟಿ) ಎಂಬುದಾಗಿ ಬದಲಾವಣೆ ಮಾಡಲಾಯಿತು. ಕರ್ನಾಟಕ ಸರ್ಕಾರವು ಕರ್ನಾಟಕ ಅಪ್ರಧಾನ ಖನಿಜ ರಿಯಾಯಿತಿ ನಿಯಮಗಳು, 1994ರ ನಿಯಮ 36–ಎ, ಇದಕ್ಕೆ ತಿದ್ದುಪಡಿಯೊಂದಿಗೆ (ಆಗಸ್ಟ್ 2016) ಅಪ್ರಧಾನ ಖನಿಜಗಳಿಗೆ ಸಂಬಂಧಿಸಿದಂತೆ ಡಿಎಂಎಫ್ ಕಾಣಿಕೆಯ ದರವನ್ನು ನಿರ್ದಿಷ್ಟಪಡಿಸಿರುವುದು.

1.2 ಲೆಕ್ಕಪರಿಶೋಧನೆಯ ಉದ್ದೇಶಗಳು

ಈ ಕೆಳಗಿನ ಅಂಶಗಳನ್ನು ಖಚಿತಪಡಿಸಿಕೊಳ್ಳುವ ಸಲುವಾಗಿ ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಯನ್ನು ನಡೆಸಲಾಯಿತು:

- ಯೋಜನೆಯನ್ನು ಡಿಎಂಎಫ್ ನಿಯಮಗಳ ಅನುಸಾರ ಹಾಗೂ ಪಿಎಂಕೆಕೆಕೆವೈ ಮಾರ್ಗಸೂಚಿಗಳ ಅನುಸಾರ ಕಾರ್ಯಗತಗೊಳಿಸುವ ಸಲುವಾಗಿ ಪರಿಣಾಮಕಾರಿತ್ವದಿಂದ ಕೂಡಿದ ಪೂರ್ವಭಾವಿ ಯೋಜನೆಗಳು ಮತ್ತು ಸಾಂಸ್ಥಿಕ ವ್ಯವಸ್ಥೆಗಳು ಇರುತ್ತವೆಯೆ.
- ಡಿಎಂಎಫ್‌ಟಿ ಅಡಿಯಲ್ಲಿನ ಸ್ವೀಕೃತಿಗಳ ನಿರ್ಧಾರಣೆ, ಪಾವತಿಗಾಗಿ ತಗಾದೆ ಹಾಗೂ ಸಂಗ್ರಹಣೆಯ ವ್ಯವಸ್ಥೆ ಹಾಗೂ ಹಣಕಾಸು ನಿರ್ವಹಣೆ ವಿಶ್ವಸನೀಯತೆಯಿಂದ ಮತ್ತು ಪರಿಣಾಮಕಾರಿತ್ವದಿಂದ ಕೂಡಿದ್ದವೆ.
- ಯೋಜನೆಯ ಕಾರ್ಯಗತಗೊಳಿಸುವಿಕೆಯ ಮೇಲ್ವಿಚಾರಣೆ ಮತ್ತು ಮೌಲ್ಯಮಾಪನವು ಸಮರ್ಪಕವಾಗಿ ಹಾಗೂ ಪರಿಣಾಮಕಾರಿತ್ವದಿಂದ ಕೂಡಿದ್ದವೆ; ಹಾಗೂ
- ಯೋಜನೆಯನ್ನು ಅಪೇಕ್ಷಿತ ಫಲಿತಾಂಶಗಳನ್ನು ಸಾಧಿಸುವ ಸಲುವಾಗಿ ಪರಿಣಾಮಕಾರಿತ್ವದಿಂದ ಕಾರ್ಯಗತೊಳಿಸಲಾಗಿದ್ದಿತೆ ಹಾಗೂ ತೊಂದರೆಗೆ ಈಡಾಗಿದ್ದಂತಹ ಪ್ರದೇಶದಲ್ಲಿ ಹಾಗೂ ಜನತೆಯ ಜೀವನದಲ್ಲಿ ಒಂದು ಸಕಾರಾತ್ಮಕ ಬದಲಾವಣೆಗಳನ್ನು ತರಲು ಸಾಧ್ಯವಾಗಿದ್ದಿತೆ.

1.3 ಲೆಕ್ಕಪರಿಶೋಧನೆಯ ಮಾನದಂಡ

ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಗಾಗಿ ಲೆಕ್ಕಪರಿಶೋಧನೆಯ ಮಾನದಂಡದ ಪ್ರಮುಖ ಮೂಲಗಳು ಈ ಕೆಳಗಿನವುಗಳನ್ನು ಒಳಗೊಂಡಿರುತ್ತವೆ.

- ಭಾರತ ಸರ್ಕಾರವು ನೀಡಿರುವ ಯೋಜನಾ ಮಾರ್ಗಸೂಚಿಗಳು;
- ಗಣಿಗಳು ಮತ್ತು ಖನಿಜಗಳು (ಅಭಿವೃದ್ಧಿ ಮತ್ತು ನಿಯಂತ್ರಣ) (ಎಂಎಂಡಿಆರ್) ಅಧಿನಿಯಮ, 1957 ಹಾಗೂ ಅವುಗಳ ಅನುವುಗಳಿಗೆ ಮಾಡಲಾಗಿರುವಂತಹ ತಿದ್ದುಪಡಿ;
- ಕರ್ನಾಟಕ ಅಪ್ರಧಾನ ಖನಿಜಗಳ ರಿಯಾಯಿತಿ ನಿಯಮಗಳು, 1994 ಹಾಗೂ ಅವುಗಳ ಅನುವುಗಳಿಗೆ ಮಾಡಲಾಗಿರುವಂತಹ ತಿದ್ದುಪಡಿ;
- ಜಿಲ್ಲಾ ಖನಿಜ ಪ್ರತಿಷ್ಠಾನ ಟ್ರಸ್ಟ್ ನಿಯಮಗಳು, 2016 ಹಾಗೂ ಅವುಗಳ ಅನುವುಗಳಿಗೆ ಮಾಡಲಾಗಿರುವಂತಹ ತಿದ್ದುಪಡಿಗಳು;
- ಯೋಜನೆಗೆ ಸಂಬಂಧಿಸಿದಂತೆ, ಭಾರತ ಸರ್ಕಾರ/ಕರ್ನಾಟಕ ಸರ್ಕಾರ ನೀಡಿರುವಂತಹ ಸೂಚನೆಗಳು/ಸುತ್ತೋಲೆಗಳು/ಆದೇಶಗಳು/ಕೈಪಿಡಿಗಳು/ಮಾರ್ಗಸೂಚಿಗಳು, ರಾಜ್ಯ ಮಟ್ಟದ ಅಧಿಕಾರದತ್ತ ಸಮಿತಿಯ, ನಿರ್ಣಯಗಳು ಇತ್ಯಾದಿಗಳು;
- ಕರ್ನಾಟಕ ಹಣಕಾಸು ಸಂಹಿತೆ, 1958; ಹಾಗೂ

- ಕರ್ನಾಟಕ ಸಾರ್ವಜನಿಕ ಖರೀದಿಗಳು ಮತ್ತು ಸೇವೆಗಳನ್ನು ಪಡೆದುಕೊಳ್ಳುವಲ್ಲಿ ಪಾರದರ್ಶಕತೆ ಅಧಿನಿಯಮ, 1999 ಹಾಗೂ ನಿಯಮಗಳು.

1.4 ಲೆಕ್ಕಪರಿಶೋಧನೆಯ ವ್ಯಾಪ್ತಿ ಮತ್ತು ವಿಧಾನ

ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಯನ್ನು 2015–16ರಿಂದ ಅಂದರೆ ಪಿಎಂಕೆಕೆಕೆವೈ ಪ್ರಾರಂಭಿಸಿದ ದಿನಾಂಕದಿಂದ (ಡಿಎಂಎಫ್‌ಟಿ ಒಳಗೊಂಡಂತೆ) 2022–23ರ ಅವಧಿಗೆ ನಡೆಸಲಾಯಿತು.

ಲೆಕ್ಕಪರಿಶೋಧನೆಯು, ರಾಜ್ಯ ಮಟ್ಟದ ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಕೋಶ (ಎಸ್‌ಎಲ್‌ಎಂಇಸಿ), ನಿರ್ದೇಶಕರ ಕಚೇರಿ, ಗಣಿಗಳು ಮತ್ತು ಭೂವಿಜ್ಞಾನ ಇಲಾಖೆ, ಎಲ್ಲಾ ಆಯ್ದ ಜಿಲ್ಲೆಗಳಲ್ಲಿನ ಉಪ–ನಿರ್ದೇಶಕರು. ಹಿರಿಯ ಭೂವಿಜ್ಞಾನಿಗಳು, ಬಳ್ಳಾರಿ ಮತ್ತು ವಿಜಯನಗರ ಜಿಲ್ಲೆಗಳಲ್ಲಿ ಜಿಲ್ಲಾಧಿಕಾರಿಗಳ ಕಚೇರಿಗಳಲ್ಲಿನ ಡಿಎಂಎಫ್ ಕೋಶಗಳು ನಿರ್ವಹಿಸಿದ್ದಂತಹ ದಾಖಲೆಗಳ ಪರಿಶೀಲನೆ ನಡೆಸಿತು. ಮುಂದುವರೆದು, ಆಯ್ದ ಕಾಮಗಾರಿಗಳನ್ನು ಭೌತಿಕವಾಗಿ ಇಲಾಖಾ ಸಿಬ್ಬಂದಿಯೊಂದಿಗೆ ಜಂಟಿ ಪರೀಕ್ಷಣೆ ಮಾಡಲಾಯಿತು. ಯೋಜನೆಯ ಪ್ರಯೋಜನಗಳ ಬಗ್ಗೆ ಫಲಾನುಭವಿಗಳ ಅನುಭವ ಮತ್ತು ಅರಿವುಗಳನ್ನು ಸೆರೆಹಿಡಿಯುವ ಸಲುವಾಗಿ ಒಂದು ಪ್ರಶ್ನಾವಳಿಯ ಸಹಾಯದಿಂದ ಫಲಾನುಭವಿಗಳ ಸಮೀಕ್ಷೆಯನ್ನು ನಡೆಸಲಾಯಿತು.

ಲೆಕ್ಕಪರಿಶೋಧನಾ ಮಾದರಿಯನ್ನು ಐಡಿಇಎ ತಂತ್ರಾಂಶ ಅನ್ವಯವನ್ನು ಉಪಯೋಗಿಸಿಕೊಂಡು ಶ್ರೇಣೀಕರಿಸಲ್ಪಟ್ಟಿರುವ ಮಾದರಿ ಆಯ್ಕೆ ಪದ್ಧತಿಯ (ಸ್ಟ್ರಾಟಿಫೈಡ್ ರಾಂಡಮ್ ಸ್ಯಾಂಪಲಿಂಗ್ ಮೆಥಡ್) ಮೂಲಕ ಪಡೆದುಕೊಳ್ಳಲಾಯಿತು. ಈ ಕೆಳಗಿನ ಕೋಷ್ಟಕವು ಮಾದರಿ ಆಯ್ಕೆ ವಿಧಾನವನ್ನು ತೋರಿಸುತ್ತದೆ:

ಕೋಷ್ಟಕ ಸಂಖ್ಯೆ 1.1: ಮಾದರಿ ಆಯ್ಕೆ ವಿವರಗಳು

ಕ್ರಮ ಸಂಖ್ಯೆ	ಪ್ರವರ್ಗ	ಮಾದರಿಯ ಗಾತ್ರ
1	ಜಿಲ್ಲೆಗಳು	31 ಜಿಲ್ಲೆಗಳ ಪೈಕಿ ಐದು[2]
2	ತಾಲ್ಲೂಕುಗಳು	ಅತ್ಯಧಿಕ ಸಂಖ್ಯೆಯ ಕಾಮಗಾರಿಗಳು/ಯೋಜನೆಗಳ ಆಧಾರದ ಮೇರೆಗೆ ಎರಡು ತಾಲ್ಲೂಕುಗಳು[3] ಹಾಗೂ 5 ಜಿಲ್ಲೆಗಳ ಪೈಕಿ ಪ್ರತಿಯೊಂದರಿಂದಲೂ ಮಾದರಿ ಆಯ್ಕೆ ಮೂಲಕ ಒಂದು ತಾಲ್ಲೂಕು[4]
3	ಪರೀಕ್ಷಾ–ಪರಿಶೀಲನೆಗಾಗಿ ಮತ್ತು ಜಂಟಿ ಭೌತಿಕ ಪರೀಕ್ಷಣೆಗಾಗಿ ಕಾಮಗಾರಿಗಳು	ಎಲ್ಲಾ ಐದು ಜಿಲ್ಲೆಗಳ ಆಯ್ಕೆ ಮಾಡಲಾದಂತಹ ತಾಲ್ಲೂಕುಗಳಲ್ಲಿ ಜಿಲ್ಲಾ ಖನಿಜ ಪ್ರತಿಷ್ಠಾನ ಟ್ರಸ್ಟ್ ಹಣಕಾಸಿನಿಂದ ಸೃಷ್ಟಿಸಲಾಗಿರುವಂತಹ 417 ಕಾಮಗಾರಿಗಳು (ಪೂರ್ಣಗೊಂಡಿರುವುದು/ಪ್ರಗತಿಯಲ್ಲಿರುವುದು)
4	ಫಲಾನುಭವಿಗಳ ಸಮೀಕ್ಷೆ	ಎಲ್ಲಾ ಐದು ಜಿಲ್ಲೆಗಳಲ್ಲಿ ಆಯ್ಕೆ ಮಾಡಲಾದಂತಹ ತಾಲ್ಲೂಕುಗಳಲ್ಲಿ 961 ಫಲಾನುಭವಿಗಳು'

ಜಿಲ್ಲಾವಾರು ಮಾದರಿ ಆಯ್ಕೆ ಮಾಡಲಾದ ಕಾಮಗಾರಿಗಳು (ಪರೀಕ್ಷಾ–ಪರಿಶೀಲನೆ ಮಾಡಲಾದ ಮತ್ತು ಜಂಟಿ–ಪರೀಕ್ಷಣೆ ಮಾಡಲಾದ) ಹಾಗೂ ನಡೆಸಲಾದಂತಹ ಫಲಾನುಭವಿಗಳ ಸಮೀಕ್ಷೆಯ ವಿವರಗಳನ್ನು ಈ ಕೆಳಗೆ ನೀಡಲಾಗಿರುವುದು:

[2] ಬಳ್ಳಾರಿ, ಚಿತ್ರದುರ್ಗ, ವಿಜಯನಗರ, ಬೆಂಗಳೂರು (ನಗರ) ಮತ್ತು ಗದಗ.

[3] ಬಳ್ಳಾರಿ, ಸಂಡೂರು, ಚಿತ್ರದುರ್ಗ, ಹೊಳಲ್ಕೆರೆ, ಹೊಸಪೇಟೆ, ಹರಪನಹಳ್ಳಿ, ಬೆಂಗಳೂರು (ದಕ್ಷಿಣ), ಆನೇಕಲ್ಲು. ರೋಣ ಮತ್ತು ಶಿರಹಟ್ಟಿ.

[4] ಸಿರಗುಪ್ಪ, ಹೊಸದುರ್ಗ, ಕೂಡ್ಲಿಗಿ, ಬೆಂಗಳೂರು (ಉತ್ತರ) ಮತ್ತು ಲಕ್ಷ್ಮೇಶ್ವರ.

ಕೋಷ್ಟಕ 1.2 ಪರೀಕ್ಷಾ–ಪರಿಶೀಲನೆಗಾಗಿ, ಜಂಟಿ–ಭೌತಿಕ ಪರೀಕ್ಷಣೆಗಾಗಿ ಹಾಗೂ ಫಲಾನುಭವಿಗಳ ಸಮೀಕ್ಷೆಗಾಗಿ ಮಾದರಿ ಆಯ್ಕೆ ಮಾಡಲಾದ ಕಾಮಗಾರಿಗಳ ವಿವರಗಳು

ಕ್ರಮ ಸಂಖ್ಯೆ	ಆಯ್ಕೆ ಮಾಡಲಾದ ಜಿಲ್ಲೆಗಳಿಗೆ ವಿವರಗಳು	ಬಳ್ಳಾರಿ	ಚಿತ್ರದುರ್ಗ	ಗದಗ	ಬೆಂಗಳೂರು (ನಗರ)	ವಿಜಯನಗರ	ಒಟ್ಟು
1	ಕಾರ್ಯಗತಗೊಳಿಸುವಿಕೆಗಾಗಿ ಕೈಗೆತ್ತಿಕೊಳ್ಳಲಾದ ಕಾಮಗಾರಿಗಳು	1,764	305	95	607	1420	4,191
2	ಅನುಮೋದಿತ ಕ್ರಿಯಾ ಯೋಜನೆಯ ಮೊತ್ತ (₹ ಕೋಟಿಗಳಲ್ಲಿ)	1,593.68	319.39	5.56	76.35	750.25	2,746.43
3	ಪೂರ್ಣಗೊಂಡಿರುವ ಕಾಮಗಾರಿಗಳು	989	91	46	374	715	2,215
4	ಪೂರ್ಣಗೊಂಡಿರುವ ಕಾಮಗಾರಿಗಳಿಗೆ ಅನುಮೋದಿತ ಕ್ರಿಯಾ ಯೋಜನೆ (₹ಕೋಟಿಗಳಲ್ಲಿ)	515.65	79.47	2.38	28.73	236.35	862.58
5	ಪ್ರಗತಿಯಲ್ಲಿರುವ ಕಾಮಗಾರಿಗಳು	169	168	20	70	303	730
6	ಪ್ರಗತಿಯಲ್ಲಿರುವ ಕಾಮಗಾರಿಗಳಿಗೆ ಅನುಮೋದಿತ ಕ್ರಿಯಾ ಯೋಜನೆ. (₹ಕೋಟಿಗಳಲ್ಲಿ)	657.17	192.67	2.23	18.82	415.08	1,285.97
7	ಇನ್ನೂ ಪ್ರಾರಂಭಗೊಳ್ಳಬೇಕಿರುವ ಕಾಮಗಾರಿಗಳು	185	37	29	141	183	575
8	ಇನ್ನೂ ಪ್ರಾರಂಭಗೊಳ್ಳಬೇಕಿರುವ ಕಾಮಗಾರಿಗಳಿಗೆ ಅನುಮೋದಿತ ಕ್ರಿಯಾ ಯೋಜನೆ. (₹ ಕೋಟಿಗಳಲ್ಲಿ)	358.50	47.27	0.95	24.38	94.06	525.16
9	ರದ್ದುಗೊಳಿಸಲಾಗಿರುವ ಕಾಮಗಾರಿಗಳು	421	9	0	22	219	671
10	ರದ್ದುಗೊಳಿಸಲಾಗಿರುವ ಕಾಮಗಾರಿಗಳಿಗೆ ಅನುಮೋದಿತ ಕ್ರಿಯಾ ಯೋಜನೆ (₹ ಕೋಟಿಗಳಲ್ಲಿ)	62.36	0	0	4.43	5.95	72.74
11	ಪರೀಕ್ಷಾ–ಪರಿಶೀಲನೆಗಾಗಿ ಮತ್ತು ಜಂಟಿ ಪರೀಕ್ಷಣೆಗಾಗಿ ಆಯ್ಕೆ ಮಾಡಲಾದ ಕಾಮಗಾರಿಗಳ ಸಂಖ್ಯೆ	129	75	32	81	100	417
12	ಪೂರ್ಣಗೊಂಡಿರುವುದು	91	30	25	77	72	295
13	ಅನುಮೋದಿತ ಕ್ರಿಯಾ ಯೋಜನೆ (₹ ಕೋಟಿಗಳಲ್ಲಿ)	92.26	41.57	1.14	16.15	52.79	203.91
14	ಪ್ರಗತಿಯಲ್ಲಿರುವ ಕಾಮಗಾರಿಗಳು	38	45	7	4	28	122
15	ಅನುಮೋದಿತ ಕ್ರಿಯಾ ಯೋಜನೆ (₹ ಕೋಟಿಗಳಲ್ಲಿ)	241.11	78.55	0.9	2.36	185.80	508.72
16	ಸಮೀಕ್ಷೆ ಮಾಡಲಾದ ಫಲಾನುಭವಿಗಳ ಸಂಖ್ಯೆ	261	455	80	77	88	961

ಮೂಲ : ಇಲಾಖೆಯು ಒದಗಿಸಿದ ಮಾಹಿತಿ

ಪ್ರವೇಶ ಮಟ್ಟದ ಸಭೆಯನ್ನು 22 ಜೂನ್ 2023ರಂದು ನಡೆಸಲಾಯಿತು ಹಾಗೂ ನಿರ್ಗಮನ ಮಟ್ಟದ ಸಭೆಯನ್ನು 19 ಮಾರ್ಚ್ 2024 ರಂದು ನಡೆಸಲಾಯಿತು. ಕರಡು ವರದಿಯನ್ನು ಸರ್ಕಾರಕ್ಕೆ 8 ಫೆಬ್ರವರಿ 2024ರಂದು ನೀಡಲಾಯಿತು ಹಾಗೂ ಸರ್ಕಾರದಿಂದ ಉತ್ತರಗಳನ್ನು 14 ಆಗಸ್ಟ್ 2024ರಂದು ಪಡೆಯಲಾಯಿತು. ಸರ್ಕಾರದ ಅಭಿಪ್ರಾಯಗಳನ್ನು ಎಲ್ಲೆಲ್ಲಿ ಅಗತ್ಯತೆಯಿದ್ದಿತೋ, ಅಂತಹ ಕಡೆಗಳಲ್ಲಿ ವರದಿಯಲ್ಲಿ ಸೂಕ್ತವಾಗಿ ಅಳವಡಿಸಿಕೊಳ್ಳಲಾಗಿರುವುದು.

1.5 ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಗಿರುವ ಅಂಶಗಳು

ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಗಿರುವ ಅಂಶಗಳನ್ನು ಈ ಕೆಳಗಿನ ಅಧ್ಯಾಯಗಳನ್ನು ಒಳಗೊಂಡಂತೆ ನಾಲ್ಕು ಭಾಗಗಳಲ್ಲಿ ಸಂಯೋಜಿಸಲಾಗಿರುವುದು, ಅವೆಂದರೆ

- **ಅಧ್ಯಾಯ – II**: ಕಾನೂನಾತ್ಮಕ ಚೌಕಟ್ಟು.
- **ಅಧ್ಯಾಯ – III**: ಡಿಎಂಎಫ್‌ಟಿ ಹಣಕಾಸಿನ ಸಂಗ್ರಹಣೆ.

- **ಅಧ್ಯಾಯ – IV:** ಡಿಎಂಎಫ್‌ಟಿಗಳಲ್ಲಿ ಲೆಕ್ಕವನ್ನಿಡುವಿಕೆಯ ಪರಿಗಣನೆ ಮತ್ತು ಉತ್ತರದಾಯಿತ್ವ ಮತ್ತು ಪಾರದರ್ಶಕತೆ ವ್ಯವಸ್ಥೆಗಳು.

- **ಅಧ್ಯಾಯ – V:** ಯೋಜನೆಗಳ ನಿರ್ವಹಣೆ.

1.6 ಕೃತಜ್ಞತೆಗಳು

ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಯನ್ನು ನಡೆಸುವಲ್ಲಿ ಅನುಕೂಲತೆಗಳನ್ನು ಕಲ್ಪಿಸಿಕೊಡುವ ಮೂಲಕ ಸಹಕಾರ ಮತ್ತು ಸಹಾಯಗಳನ್ನು ನೀಡಿದ ಗಣಿಗಳು ಮತ್ತು ಭೂವಿಜ್ಞಾನ ಇಲಾಖೆ, ಕರ್ನಾಟಕ ಸರ್ಕಾರ ಹಾಗೂ ಕಾರ್ಯಗತಗೊಳಿಸುವ ಸಂಸ್ಥೆಗಳಿಗೆ ಲೆಕ್ಕಪರಿಶೋಧನೆಯು ಈ ಮೂಲಕ ಕೃತಜ್ಞತೆಗಳನ್ನು ಸಲ್ಲಿಸುತ್ತಿರುವುದು.

ಅಧ್ಯಾಯ – II
ಕಾನೂನಾತ್ಮಕ ಚೌಕಟ್ಟು

ಅಧ್ಯಾಯ – II

ಕಾನೂನಾತ್ಮಕ ಚೌಕಟ್ಟು

ಡಿಎಂಎಫ್‌ಟಿ ನಿಯಮಗಳು ತೊಂದರೆಗೆ ಈಡಾದ ವ್ಯಕ್ತಿಗಳ ಕಡೆಯಿಂದ ಸಹಭಾಗಿಗಳು, ಕೈಗಾರಿಕೆಗಳು, ಗುತ್ತಿಗೆ ಹಿಡುವಳಿದಾರರು ಮತ್ತು ಜಿಲ್ಲೆಗಳ ಪರಿಸರವಾದಿ ಸಂಸ್ಥೆಗಳಿಂದ ನಾಮನಿರ್ದೇಶನಕ್ಕೆ ಅನುವು ಮಾಡಿರುತ್ತವೆ, ಆದರೆ, ಕೇವಲ ಐದು ಜಿಲ್ಲೆಗಳಲ್ಲಿ ಮಾತ್ರ ನಾಮನಿರ್ದೇಶನಗಳನ್ನು ಮಾಡಲಾಗಿದ್ದಿತು. ಭಾರತ ಸರ್ಕಾರದ ಗಣಿಗಳ ಮಂತ್ರಾಲಯವು ಡಿಎಂಎಫ್ ಆಡಳಿತ ಮಂಡಳಿ ಮತ್ತು ವ್ಯವಸ್ಥಾಪನಾ ಸಮಿತಿಗಳ ಸಂಯೋಜನೆಯನ್ನು ನಿಯಂತ್ರಿಸುವಂತಹ ನಿಯಮಗಳಲ್ಲಿ ಕೆಲವು ಮಾರ್ಪಾಡುಗಳನ್ನು ತತಕ್ಷಣದಿಂದ ಅಳವಡಿಸಿಕೊಳ್ಳುವಂತೆ ರಾಜ್ಯ ಸರ್ಕಾರಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ನಿರ್ದೇಶನ ನೀಡಿದ್ದಿತಾದರೂ, ಈ ನಿಟ್ಟಿನಲ್ಲಿ ಎರಡು ವರ್ಷಗಳೇ ಕಳೆದರೂ, ಕರ್ನಾಟಕ ಸರ್ಕಾರವು ಡಿಎಂಎಫ್‌ಟಿ ನಿಯಮಗಳು, 2016ಕ್ಕೆ ಯಾವುದೇ ಮಾರ್ಪಾಡುಗಳನ್ನು/ತಿದ್ದುಪಡಿಗಳನ್ನು ಮಾಡಿರುವುದಿಲ್ಲ. ಪರೀಕ್ಷಾ–ಪರಿಶೀಲನೆ ಮಾಡಲಾದ ಡಿಎಂಎಫ್‌ಟಿಗಳು ವಿಶೇಷ ತಜ್ಞ ಸಂಸ್ಥೆಯಿಂದ ಕಾರ್ಯಚಟುವಟಿಕೆಗಳನ್ನು ಕೈಗೊಳ್ಳುವ ಸಲುವಾಗಿ ಯಾವುದೇ ಪ್ರಧಾನ ಪೂರ್ವಭಾವಿ ಯೋಜನೆಗಳು ಅಥವಾ ಯಾವುದೇ ಸಮಗ್ರ ಪರಿಕಲ್ಪನೆಯ ದೂರದೃಷ್ಟಿಯುತ ಯೋಜನಾ ದಾಖಲೆಗಳನ್ನು (ವಿಷನ್ ಡಾಕ್ಯುಮೆಂಟ್ಸ್), ಪರಿಪ್ರೇಕ್ಷಣಾ ಯೋಜನೆಗಳನ್ನು ತಯಾರಿಸುವ ಸಲುವಾಗಿ ಯಾವುದೇ ಮೂಲ ಸಮೀಕ್ಷೆಗಳನ್ನು ತಯಾರಿಸಿರಲಿಲ್ಲ ಹಾಗೂ ಪರೀಕ್ಷಾ–ಪರಿಶೀಲನೆ ಮಾಡಲಾದಂತಹ ಡಿಎಂಎಫ್‌ಟಿಗಳು ತೊಂದರೆಗೆ ಈಡಾಗಿರುವಂತಹ ವ್ಯಕ್ತಿಗಳು/ಜನತೆಯ ಒಂದು ಪಟ್ಟಿಯನ್ನು ತಯಾರಿಸಿರಲಿಲ್ಲ.

2.1 ಸಾಂಸ್ಥಿಕ ರಚನೆ

ರಾಜ್ಯದ 31 ಜಿಲ್ಲೆಗಳಲ್ಲಿ 'ಜಿಲ್ಲಾ ಖನಿಜ ಪ್ರತಿಷ್ಠಾನ ಟ್ರಸ್ಟ್ (ಡಿಎಂಎಫ್‌ಟಿ) ಎಂಬ ಹೆಸರಿನ ಪ್ರತ್ಯೇಕ ಟ್ರಸ್ಟ್‌ಗಳನ್ನು ಸ್ಥಾಪಿಸಲಾಗಿದ್ದು, ಜಿಲ್ಲಾ ಉಸ್ತುವಾರಿ ಸಚಿವರ ಅಧ್ಯಕ್ಷತೆಯಲ್ಲಿ, ಜಿಲ್ಲೆಯನ್ನು ಪ್ರತಿನಿಧಿಸುವಂತಹ ಲೋಕಸಭೆಯ ಹಾಗೂ ವಿಧಾನ ಸಭೆಯ ಚುನಾಯಿತ ಸದಸ್ಯರುಗಳು ಟ್ರಸ್ಟಿಗಳಾಗಿ ಜಿಲ್ಲೆಯನ್ನು ಪ್ರತಿನಿಧಿಸುವ ಮೂಲಕ, ಜಿಲ್ಲೆಯ ಜಿಲ್ಲಾಧಿಕಾರಿಯವರು ಟ್ರಸ್ಟಿಯಾಗಿ ಹಾಗೂ ಸದಸ್ಯ ಕಾರ್ಯದರ್ಶಿಯಾಗಿ, ಜಿಲ್ಲಾ ಖನಿಜ ಪ್ರತಿಷ್ಠಾನ ಟ್ರಸ್ಟ್ ನಿಯಮಗಳು, 2016 ರ ನಿಯಮ 5 ರಲ್ಲಿ ಸೂಚಿಸಲಾದ ಇತರ ಟ್ರಸ್ಟಿಗಳೊಂದಿಗೆ ಕಾರ್ಯನಿರ್ವಹಿಸುತ್ತಾರೆ. ಡಿಎಂಎಫ್‌ಟಿಗಳ ಒಟ್ಟಾರೆ ವ್ಯವಸ್ಥಾಪನೆ ಮತ್ತು ಆಡಳಿತ ನಿರ್ವಹಣೆಗಾಗಿ, ಕರ್ನಾಟಕ ಸರ್ಕಾರವು ಗಣಿಗಳು ಮತ್ತು ಭೂವಿಜ್ಞಾನ ಇಲಾಖೆಯ (ಡಿಎಂಜಿ) ನಿರ್ದೇಶನಾಲಯದಲ್ಲಿ ಒಂದು ರಾಜ್ಯ ಮಟ್ಟದ ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಕೋಶವನ್ನು (ಎಂ&ಇ ಸೆಲ್) ರಚಿಸಿರುವುದು. ಡಿಎಂಜಿಯ ಜಿಲ್ಲಾ ಮಟ್ಟದ ಕಚೇರಿಗಳು ಉಪ–ನಿರ್ದೇಶಕರು/ಹಿರಿಯ ಭೂವಿಜ್ಞಾನಿಯವರ ನೇತೃತ್ವದಲ್ಲಿರುತ್ತವೆ ಹಾಗೂ ಅವರುಗಳು ಸಂಬಂಧಿತ ಡಿಎಂಎಫ್‌ಟಿಗಳ ಪದನಿಮಿತ್ತ ಸದಸ್ಯರು ಹಾಗೂ ಸಂಚಾಲಕರಾಗಿರುತ್ತಾರೆ.

ರೇಖಾಚಿತ್ರ ಸಂಖ್ಯೆ 2.1: ಡಿಎಂಎಫ್‌ಟಿಗಳಿಗೆ ಸಂಬಂಧಿಸಿದಂತೆ ಡಿಎಂಜಿ ಯ ಆರ್ಗನೋಗ್ರಾಮ್



2.2 ಯೋಜನೆಯ ಕಾರ್ಯಗತಗೊಳಿಸುವಿಕೆ

ಡಿಎಂಎಫ್‌ಟಿಗಳಿಗೆ ಕಾಣಿಕೆಗಳನ್ನು ಗಣಿಗಳು ಮತ್ತು ಭೂವಿಜ್ಞಾನ ಇಲಾಖೆಯು ಗಣಿಗಾರಿಕೆ ಗುತ್ತಿಗೆ ಹಿಡುವಳಿದಾರರುಗಳಿಂದ ಸಂಗ್ರಹಿಸುತ್ತದೆ ಹಾಗೂ ಡಿಎಂಎಫ್‌ಟಿಗಳಿಗೆ ವರ್ಗಾಯಿಸುತ್ತದೆ. ಪಿಎಂಕೆಕೆಕೆವೈ ಅಡಿಯಲ್ಲಿನ ಯೋಜನೆಗಳು ಮತ್ತು ಕಾರ್ಯಕ್ರಮಗಳನ್ನು ಕರ್ನಾಟಕ ಸರ್ಕಾರದ ವಿವಿಧ ಇಲಾಖೆಗಳು ಹಾಗೂ ಇತರೆ ಸಂಸ್ಥೆಗಳ[5] ಮೂಲಕ (ಕಾರ್ಯಗತಗೊಳಿಸುವ ಸಂಸ್ಥೆಗಳು) ಕಾರ್ಯಗತಗೊಳಿಸಲ್ಪಡುತ್ತವೆ. ಯೋಜನೆಯನ್ನು ಕಾರ್ಯಗತಗೊಳಿಸುವ ವೇಳೆಯಲ್ಲಿ ಅನುಸರಿಸಲಾಗುವ ಹಂತಾನುಹಂತದ ಕಾರ್ಯವಿಧಾನಗಳನ್ನು ಈ ಕೆಳಗೆ ವಿವರಿಸಲಾಗಿದೆ:

ರೇಖಾಚಿತ್ರ ಸಂಖ್ಯೆ 2.1: ಪಿಎಂಕೆಕೆಕೆವೈ ಕಾರ್ಯಚಟುವಟಿಕೆಗಳನ್ನು ಕಾರ್ಯಗತಗೊಳಿಸುವ ಸಲುವಾಗಿ ಕಾರ್ಯಗಳ ಹರಿವು



2.3 ಡಿಎಂಎಫ್‌ಟಿಗಳ ರಚನೆ

ಕರ್ನಾಟಕ ಸರ್ಕಾರವು ನೀಡಿದ ಅಧಿಸೂಚನೆಯ[6] ಮೂಲಕ ಪ್ರತಿಯೊಂದು ಜಿಲ್ಲೆಯಲ್ಲೂ ಡಿಎಂಎಫ್‌ಟಿಗಳನ್ನು ಸ್ಥಾಪಿಸಲಾಗಿದ್ದಿತು (ನವಂಬರ್ 2015). ಡಿಎಂಎಫ್‌ಟಿ ನಿಯಮಗಳು 2016ರ ನಿಯಮ 5 ಪ್ರತಿಯೊಂದು ಡಿಎಂಎಫ್‌ಟಿನಲ್ಲಿಯೂ ಕೂಡ ಜಿಲ್ಲಾ ಉಸ್ತುವಾರಿ ಸಚಿವರು ಅಧ್ಯಕ್ಷರಾಗಿರತಕ್ಕದ್ದು, ಜಿಲ್ಲೆಯ ಲೋಕಸಭೆಯ ಸದಸ್ಯರು, ವಿಧಾನ ಸಭೆಯ ಸದಸ್ಯರುಗಳು

[5] ನಗರ ಮತ್ತು ಗ್ರಾಮೀಣ ಸ್ಥಳೀಯ ಸಂಸ್ಥೆಗಳು, ಸಣ್ಣ ನೀರಾವರಿ, ಸಮಾಜ ಕಲ್ಯಾಣ, ವಯೋವೃದ್ಧರು ಹಾಗೂ ವಿಶೇಷ ಚೇತನರ ಕ್ಷೇಮಾಭಿವೃದ್ಧಿ, ಶಿಕ್ಷಣ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ಸಾಮಾಜಿಕ ಅರಣ್ಯವೂ ಒಳಗೊಂಡಂತೆ ಅರಣ್ಯ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ, ಕೌಶಲ್ಯ ಅಭಿವೃದ್ಧಿ, ಕರ್ನಾಟಕ ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ ನಿಯಮಿತ, ಹಿಂದುಳಿದ ವರ್ಗಗಳು, ಪೊಲೀಸು, ಲೋಕೋಪಯೋಗಿ, ಗ್ರಾಮೀಣ ವಸತಿ ಮತ್ತು ನಿರ್ಮಿತಿ ಕೇಂದ್ರ, ಕಶುಟೆಕ್ ಮುಂತಾದ ಬಾಹ್ಯ ಸಂಸ್ಥೆಗಳು.

[6] 12 ಜನವರಿ 2015ರಿಂದ ಜಾರಿಗೆ ಬಂದಂತೆ ಇರುವುದಾಗಿ ಭಾವಿಸಲ್ಪಟ್ಟಿರುವ. ಅಧಿಸೂಚನೆಯು ದತ್ತಿಸಂಸ್ಥೆಗಳ (ಫೌಂಡೇಷನ್ಸ್) ಸದಸ್ಯರುಗಳನ್ನು ನಿರ್ದಿಷ್ಟಪಡಿಸಿರುವುದಿಲ್ಲ, ಅವುಗಳನ್ನು ಡಿಎಂಎಫ್‌ಟಿ ನಿಯಮಗಳು, 2016ರಲ್ಲಿ (ಜನವರಿ 2016) ಮಾತ್ರ ನಿರ್ದಿಷ್ಟಪಡಿಸಲಾಗಿರುವುದು, ಅವುಗಳು ಕೂಡ 12 ಜನವರಿ 2015ರಿಂದ ಜಾರಿಗೆ ಬಂದಿರುವುದು.

ಸದಸ್ಯರುಗಳಾಗಿರತಕ್ಕದ್ದು ಹಾಗೂ ಜಿಲ್ಲೆಯ ಜಿಲ್ಲಾಧಿಕಾರಿಯವರು ಸದಸ್ಯ ಕಾರ್ಯದರ್ಶಿಯವರಾಗಿರತಕ್ಕದ್ದು, ಜಿಲ್ಲೆಯ ಉಪ ನಿರ್ದೇಶಕರು/ಹಿರಿಯ ಭೂವಿಜ್ಞಾನಿಯವರು ಸಮಿತಿಯ ಸಂಚಾಲಕರಾಗಿರತಕ್ಕದ್ದು ಹಾಗೂ ***ಅನುಬಂಧ–1ರಲ್ಲಿ*** ವಿವರಿಸಿರುವಂತೆ ಇತರೆ ಸದಸ್ಯರುಗಳು ಇರತಕ್ಕದ್ದು ಎಂಬುದಾಗಿ ನಿರ್ದಿಷ್ಟಪಡಿಸಿರುವುದು.

2.3.1 ಟ್ರಸ್ಟಿಗಳ ನಾಮನಿರ್ದೇಶನ

ಡಿಎಂಎಫ್‌ಟಿ ನಿಯಮಗಳು 2016 ರಾಜ್ಯ ಸರ್ಕಾರವು ಈ ಕೆಳಗೆ ವಿವರಿಸಿರುವಂತೆ ಎಂಟು ಜನ ಟ್ರಸ್ಟಿಗಳನ್ನು ನಾಮನಿರ್ದೇಶನ ಮಾಡಲು ಕೂಡ ಅನುವು ಮಾಡಿರುವುದು,

- ಸಂಬಂಧಿತ ಜಿಲ್ಲೆಯಲ್ಲಿ ಖನಿಜಗಳನ್ನು ಉಪಯೋಗಿಸಿಕೊಳ್ಳುವ ಕೈಗಾರಿಕೆಗಳಿಂದ ಇಬ್ಬರು;
- ಸಂಬಂಧಿತ ಜಿಲ್ಲೆಗೆ ಸೇರಿರುವ ಖನಿಜ ಅಥವಾ ಅಪ್ರಧಾನ ಖನಿಜ ರಿಯಾಯಿತಿಗಳನ್ನು ಹೊಂದಿರುವ ಪರವಾನಿಗೆ ಹಿಡುವಳಿದಾರರುಗಳಿಂದ ಇಬ್ಬರು;
- ಸಂಬಂಧಿತ ಜಿಲ್ಲೆಯಲ್ಲಿ ಒಂದು ಪ್ರಮುಖ ಸರ್ಕಾರೇತರ ಸಂಸ್ಥೆಯಿಂದ ಅಥವಾ ಪರಿಸರೀಯ ವಿಷಯಗಳಿಗೆ ಸಂಬಂಧಿಸಿದಂತೆ ಕಾರ್ಯನಿರ್ವಹಿಸುತ್ತಿರುವಂತಹ ಸಂಸ್ಥೆಯಿಂದ ಒಬ್ಬರು;
- ತೊಂದರೆಗೆ ಈಡಾಗಿರುವ ಪ್ರದೇಶದಿಂದ ತೊಂದರೆಗೆ ಈಡಾಗಿರುವ ವ್ಯಕ್ತಿಗಳ ಸಮುದಾಯದಿಂದ ಅಧಿಸೂಚನೆಯ ಮೂಲಕ ಮೂವರು.

31 ಜಿಲ್ಲೆಗಳ ಪೈಕಿ ಕೇವಲ ಐದು ಜಿಲ್ಲೆಗಳಲ್ಲಿ[7] ಟ್ರಸ್ಟಿಗಳನ್ನು ನಾಮನಿರ್ದೇಶನ ಮಾಡಲಾಗಿದ್ದಿತು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ರಾಜ್ಯ ಸರ್ಕಾರವು ತೀವ್ರತರವಾದಂತಹ ರೀತಿಯಲ್ಲಿ ಗಣಿಗಾರಿಕೆ ಚಟುವಟಿಕೆಗಳನ್ನು ಹೊಂದಿರುವಂತಹ ಬಳ್ಳಾರಿ ಮತ್ತು ವಿಜಯನಗರ ಜಿಲ್ಲೆಗಳನ್ನು ಒಳಗೊಂಡಂತೆ ಉಳಿದ 26 ಜಿಲ್ಲೆಗಳಿಗೆ ಅಂತಹ ಯಾವುದೇ ಸದಸ್ಯರುಗಳನ್ನು ನಾಮನಿರ್ದೇಶನ ಮಾಡಿರಲಿಲ್ಲ. ಈ ಪ್ರಾತಿನಿಧ್ಯತ್ವದ ಸಹಭಾಗಿಗಳನ್ನು ನಾಮನಿರ್ದೇಶನ ಮಾಡುವಲ್ಲಿನ ವಿಫಲತೆಯು ಯೋಜನೆಗಳನ್ನು ತಯಾರಿಸುವಲ್ಲಿನ ಪ್ರಕ್ರಿಯೆಯ ಭಾಗವಹಿಸುವಿಕೆ ಸ್ವರೂಪದಿಂದ ಅಪಕರ್ಷಿಸಿತು/ಕುಂಠಿತಗೊಳಿಸಿತು.

2.3.2 ಭಾರತ ಸರ್ಕಾರದ ನಿರ್ದೇಶನಗಳಿಗೆ ಬದ್ಧತೆಯಿಂದ ಕೂಡಿರದಿದ್ದುದು

ಆಡಳಿತ ಮಂಡಳಿ ಮತ್ತು ವ್ಯವಸ್ಥಾಪನಾ ಸಮಿತಿಗಳ ರಚನೆ

ಡಿಎಂಎಫ್‌ನ ಆಡಳಿತ ಮಂಡಳಿ ಮತ್ತು ವ್ಯವಸ್ಥಾಪಕ ಸಮಿತಿಯ ಸಂಯೋಜನೆಯು ರಾಜ್ಯದಿಂದ ರಾಜ್ಯಕ್ಕೆ ವ್ಯತ್ಯಯದಿಂದ ಕೂಡಿರುವುದನ್ನು ಗಮನಿಸಿದ ಭಾರತ ಸರ್ಕಾರದ ಗಣಿ ಸಚಿವಾಲಯವು, ಡಿಎಂಎಫ್‌ನ ಆಡಳಿತ ಮಂಡಳಿ ಮತ್ತು ವ್ಯವಸ್ಥಾಪಕ ಸಮಿತಿಯ ರಚನೆಯನ್ನು ನಿಯಂತ್ರಿಸುವುದಕ್ಕಾಗಿ ನಿಯಮಗಳಲ್ಲಿ ಕೆಲವು ಬದಲಾವಣೆಗಳನ್ನು ತಕ್ಷಣದಿಂದ ಜಾರಿಗೆ ಬರುವಂತೆ ಸೇರಿಸಲು ರಾಜ್ಯ ಸರ್ಕಾರಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ನಿರ್ದೇಶಿಸಿತು[8] (ಏಪ್ರಿಲ್ 2021).

ಕರ್ನಾಟಕ ರಾಜ್ಯದಲ್ಲಿ, ಡಿಎಂಎಫ್‌ಟಿ ನಿಯಮಗಳಲ್ಲಿ ಈ ಕೆಳಗಿನ ಬದಲಾವಣೆಗಳ ಅಗತ್ಯತೆಯಿದ್ದಿತು:

- ಆಡಳಿತ ಮಂಡಳಿ ಮತ್ತು ವ್ಯವಸ್ಥಾಪನಾ ಸಮಿತಿಯ ಅಧ್ಯಕ್ಷರು ಜಿಲ್ಲೆಯ ಜಿಲ್ಲಾಧಿಕಾರಿಯವರು ಆಗಿರತಕ್ಕದ್ದು. ಇತರೆ ಯಾವುದೇ ವ್ಯಕ್ತಿಯು ಈ ಸಮಿತಿಗಳ ಅಧ್ಯಕ್ಷರಾಗಿ ಕಾರ್ಯನಿರ್ವಹಿಸುವಂತಿರುವುದಿಲ್ಲ.

[7] ಚಿತ್ರದುರ್ಗ, ತುಮಕೂರು, ಚಿಕ್ಕಬಳ್ಳಾಪುರ, ಕಲಬುರಗಿ ಮತ್ತು ಉತ್ತರ ಕನ್ನಡ.

[8] ಗಣಿಗಳು ಮತ್ತು ಖನಿಜಗಳು (ಅಭಿವೃದ್ಧಿ ಮತ್ತು ನಿಯಂತ್ರಣ) ಅಧಿನಿಯಮ, 1957ರ ಪರಿಚ್ಛೇದ 9ಬಿ, ಇದರ ಉಪ–ಪರಿಚ್ಛೇದ (3)ರ ಅನುವುಗಳ ಅಡಿಯಲ್ಲಿ ಪ್ರದತ್ತವಾಗಿರುವಂತಹ ಅಧಿಕಾರಗಳನ್ನು ಚಲಾಯಿಸುವ ಮೂಲಕ.

- ಜಿಲ್ಲೆಯಿಂದ ಲೋಕ ಸಭೆಯ ಎಲ್ಲಾ ಸದಸ್ಯರುಗಳು ಜಿಲ್ಲೆಯ ಅಥವಾ ಲೋಕ ಸಭೆಯ ಚುನಾವಣಾ ಕ್ಷೇತ್ರವು ಒಂದಕ್ಕಿಂತ ಹೆಚ್ಚಿನ ಜಿಲ್ಲೆಗಳಲ್ಲಿ ಇರುವುದಾದಲ್ಲಿ ಅಂತಹ ಎಲ್ಲಾ ಜಿಲ್ಲೆಗಳ ಆಡಳಿತ ಮಂಡಳಿಯ ಸದಸ್ಯರಾಗಿರುವುದು.

- ಒಂದು ರಾಜ್ಯದ ರಾಜ್ಯ ಸಭೆಯ ಸದಸ್ಯರು, ಆತನ/ಆಕೆಯ ಆಯ್ಕೆ ಮಾಡಿಕೊಳ್ಳುವಂತಹ ಒಂದು ಜಿಲ್ಲೆಯ ಆಡಳಿತ ಮಂಡಳಿಯ ಸದಸ್ಯರಾಗಿರತಕ್ಕದ್ದು/ಸದಸ್ಯೆಯಾಗಿರತಕ್ಕದ್ದು.

ಮೇಲೆ ತಿಳಿಸಲಾಗಿರುವಂತಹ ಆದೇಶವನ್ನು ನೀಡಿದನಂತರ ನಡೆಸಲಾಗಿರುವಂತಹ ಜಿಲ್ಲಾ ಖನಿಜ ಪ್ರತಿಷ್ಠಾನದ ಆಡಳಿತ ಮಂಡಳಿ ಮತ್ತು ವ್ಯವಸ್ಥಾಪನಾ ಸಮಿತಿಗಳ ಯಾವುದೇ ಸಭೆಯನ್ನು ಮೇಲೆ ಕಡ್ಡಾಯಗೊಳಿಸಿರುವಂಥಾ ರೀತಿಯಲ್ಲಿ ರಚಿಸುವುದರೊಂದಿಗೆ ನಡೆಸತಕ್ಕದ್ದು ಎಂಬುದಾಗಿಯೂ ಕೂಡ ಭಾರತ ಸರ್ಕಾರದ ಆದೇಶವು ನಿರ್ದೇಶಿಸಿರುವುದು. ಆದಾಗ್ಯೂ, ಎರಡು ವರ್ಷಗಳು ಕಳೆದನಂತರವೂ ಕರ್ನಾಟಕ ಸರ್ಕಾರವು ಡಿಎಂಎಫ್‌ಟಿ ನಿಯಮಗಳು, 2016ಕ್ಕೆ ಯಾವುದೇ ತಿದ್ದುಪಡಿಯನ್ನು ತಂದಿರುವುದಿಲ್ಲ.

ಡಿಎಂಎಫ್‌ಟಿ ನಿಯಮಗಳು, 2016ಕ್ಕೆ ತಿದ್ದುಪಡಿ ತರುವ ಸಲುವಾಗಿ ಗಣಿಗಳು ಮತ್ತು ಭೂವಿಜ್ಞಾನ ಇಲಾಖೆಯು ಪ್ರಸ್ತಾವನೆಗಳನ್ನು ಸಲ್ಲಿಸಿರುವುದು (ಜೂನ್ 2021) ಹಾಗೂ ಕಾನೂನು ಇಲಾಖೆಯು ತಿದ್ದುಪಡಿಗಳಿಗೆ ಅನುಮೋದನೆ ನೀಡಿರುವುದು ಎಂಬುದಾಗಿ ಸರ್ಕಾರವು ಉತ್ತರಿಸಿರುವುದು (ಆಗಸ್ಟ್ 2024). ಆದಾಗ್ಯೂ, ತಿದ್ದುಪಡಿಗೆ ಅಧಿಸೂಚನೆಯನ್ನು ಇನ್ನೂ ನೀಡಿರುವುದಿಲ್ಲ ಹಾಗೂ ಜಿಲ್ಲೆಯ ಜಿಲ್ಲಾಧಿಕಾರಿಯವರ ಬದಲಾಗಿ ಡಿಎಂಎಫ್‌ಟಿ ಅಧ್ಯಕ್ಷರಾಗಿ ಜಿಲ್ಲಾ ಉಸ್ತುವಾರಿ ಮಂತ್ರಿಯವರು ಮುಂದುವರೆದುಕೊಂಡು ಹೋಗಿರುವರು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು.

2.3.3 ದೀರ್ಘಾವಧಿ ಪರಿಪ್ರೇಕ್ಷಣಾ ಯೋಜನೆ

ಅದೇ ರೀತಿಯಲ್ಲಿ, ಭಾರತ ಸರ್ಕಾರದ ಗಣಿಗಳ ಮಂತ್ರಾಲಯವು ಒಂದು ವ್ಯವಸ್ಥಿತವಾದಂತಹ ಮತ್ತು ಕಾಲಮಿತಿಯಿಂದ ಕೂಡಿದ ರೀತಿಯಲ್ಲಿ ತೊಂದರೆಗೆ ಈಡಾಗಿರುವಂತಹ ಎಲ್ಲಾ ಜನತೆ ಮತ್ತು ಪ್ರದೇಶಗಳನ್ನು ವ್ಯಾಪಿಸುವುದನ್ನು ದೃಷ್ಟಿಯಲ್ಲಿಟ್ಟುಕೊಂಡು ಒಂದು ದೀರ್ಘಾವಧಿಯಿಂದ ಕೂಡಿದಂತಹ ಪರಿಪ್ರೇಕ್ಷಣಾ ಯೋಜನೆಯನ್ನು ತಯಾರಿಸುವುದನ್ನು ಅಪೇಕ್ಷಿಸಿತು ಹಾಗೂ ಡಿಎಂಎಫ್ ನಿಯಮಗಳಿಗೆ ಈ ಕೆಳಗಿನ ಅಂಶಗಳನ್ನು ಅಳವಡಿಸಿಕೊಳ್ಳುವಂತೆ ರಾಜ್ಯ ಸರ್ಕಾರಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ನಿರ್ದೇಶಿಸಿತು (ಜೂನ್ 2022):

- ಪರಿಪ್ರೇಕ್ಷಣಾ ಯೋಜನೆಯನ್ನು ರೂಪಿಸುವ ಸಲುವಾಗಿ ಮೂಲ ಸಮೀಕ್ಷೆಗಳನ್ನು ವಿಶ್ವವಿದ್ಯಾನಿಲಯಗಳು /ಹೆಸರಾಂತ ಸಂಸ್ಥೆಗಳು/ಏಜನ್ಸಿಗಳ ಮೂಲಕ ನಡೆಸುವುದು. ಗ್ರಾಮ ಸಭೆಗಳು/ಸ್ಥಳೀಯ ಸಂಸ್ಥೆಗಳು ಅಗತ್ಯತೆಗಳ ನಿರ್ಧಾರಣಾ ವರದಿಗಳನ್ನು ತಯಾರಿಸುವಲ್ಲಿ ಸಹಾಯ ಮಾಡುವುದು. ಡಿಎಂಎಫ್‌ಗಳು ಯಾವುದೇ ಇಲಾಖೆಗಳು ಕೈಗೊಂಡಿರುವಂತಹ ಮೂಲ ಸಮೀಕ್ಷೆಗಳು ಲಭ್ಯವಿದ್ದಲ್ಲಿ, ಅವುಗಳನ್ನು ಕೂಡ ಉಪಯೋಗಿಸಿಕೊಳ್ಳುವುದು. ಸಮೀಕ್ಷೆಗಳ ಉಲ್ಲೇಖ ಮತ್ತು ಕಂಡುಬಂದಿರುವಂತಹ ಪ್ರಮುಖ ಅಂಶಗಳನ್ನು ಜಿಲ್ಲೆಗಾಗಿ ಪಿಎಂಕೆಕೆಕೆವೈ ಅಡಿಯಲ್ಲಿ ಪರಿಪ್ರೇಕ್ಷಣ ಯೋಜನೆಗಳಲ್ಲಿ ಸೇರಿಸತಕ್ಕದ್ದು.

- ಮೂಲ ಸಮೀಕ್ಷೆಗಳ ಮೂಲಕ ಅಥವಾ ಅಂತಹುದೇ ಇತರೆ ಯಾವುದೇ ಸಮೀಕ್ಷೆ / ನಿರ್ಧಾರಣೆಗಳ ಮೂಲಕ ಗುರುತಿಸಲ್ಪಟ್ಟಿರುವಂತಹ ಅಂಶಗಳು ಮತ್ತು ಅಂತರಗಳ ಆಧಾರದ ಮೇರೆಗೆ, ಡಿಎಂಎಫ್‌ಗಳು ಐದು ವರ್ಷಗಳ ಅವಧಿಗೆ ಕಾರ್ಯೋಪಾಯಗಳನ್ನು ತಯಾರಿಸತಕ್ಕದ್ದು ಹಾಗೂ ಅದನ್ನು ಪರಿಪ್ರೇಕ್ಷಣ ಯೋಜನೆಯಲ್ಲಿ ಸೇರಿಸತಕ್ಕದ್ದು. ಐದು ವರ್ಷಗಳ ಪರಿಪ್ರೇಕ್ಷಣಾ ಯೋಜನೆಯನ್ನು ಡಿಎಂಎಫ್‌ಗಳು ಪ್ರಸ್ತುತ ಲಭ್ಯವಿರುವಂತಹ ಉಳಿಕೆ ಹಣಕಾಸು ಹಾಗೂ ಐದು ವರ್ಷಗಳ ಅವಧಿಯಾದ್ಯಂತ ಸಂಚಿತಗೊಳ್ಳುವ ಸಂಭಾವ್ಯತೆಯಿರುವಂತಹ ಹಣಕಾಸನ್ನು ಪರಿಗಣಿಸುವ ಮೂಲಕ ತಯಾರಿಸತಕ್ಕದ್ದು. ಐದು ವರ್ಷಗಳ ಪರಿಪ್ರೇಕ್ಷಣಾ ಯೋಜನೆಯನ್ನು ವರ್ಷವಾರು ಕ್ರಿಯಾ ಯೋಜನೆಗಳ ಭಾಗಗಳನ್ನಾಗಿ ಪ್ರತ್ಯೇಕಿಸತಕ್ಕದ್ದು.

ಆದಾಗ್ಯೂ, ಭಾರತ ಸರ್ಕಾರದಿಂದ ಅಂತಹ ನಿರ್ದೇಶನಗಳನ್ನು ಸ್ವೀಕರಿಸಿದನಂತರ ಒಂದು ವರ್ಷ ಕಳೆದರೂ ಕರ್ನಾಟಕ ಸರ್ಕಾರವು ಡಿಎಂಎಫ್‌ಟಿ ನಿಯಮಗಳು, 2016ಕ್ಕೆ ತಿದ್ದುಪಡಿಗಳನ್ನು ಮಾಡಲಿಲ್ಲ. ತತ್ಪರಿಣಾಮವಾಗಿ, ಪರೀಕ್ಷಾ-ಪರಿಶೀಲನೆ ಮಾಡಲಾದ ಜಿಲ್ಲೆಗಳಲ್ಲಿ ಯಾವುದೇ ಮೂಲ ಸಮೀಕ್ಷೆಗಳನ್ನು ಅಥವಾ ದೀರ್ಘಾವಧಿ ಪರಿಪ್ರೇಕ್ಷಣಾ ಯೋಜನೆಗಳನ್ನು ತಯಾರಿಸಿರಲಿಲ್ಲ.

ಡಿಎಂಎಫ್‌ಟಿ ನಿಯಮಗಳು, 2016ಕ್ಕೆ ತಿದ್ದುಪಡಿಗಳನ್ನು ಮಾಡುವ ಸಲುವಾಗಿ ಪ್ರಸ್ತಾವನೆಗಳನ್ನು ಸಲ್ಲಿಸಲಾಗಿದ್ದಿತು (ಆಗಸ್ಟ್ 2022) ಹಾಗೂ ಅಂತಹ ತಿದ್ದುಪಡಿಗಳಿಗೆ ಕಾನೂನು ಇಲಾಖೆಯು ತನ್ನ ಅನುಮೋದನೆಯನ್ನು ನೀಡಿರುವುದು ಎಂಬುದಾಗಿ ಸರ್ಕಾರವು ಉತ್ತರಿಸಿತು (ಆಗಸ್ಟ್ 2024). ಆದಾಗ್ಯೂ, ಈ ತಿದ್ದುಪಡಿಗಳಿಗೆ ಅಧಿಸೂಚನೆಯನ್ನು ಇನ್ನೂ ಹೊರಡಿಸಬೇಕಾಗಿರುವುದು (ಜನವರಿ 2025) ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು.

2.4 ವಾರ್ಷಿಕ ಪೂರ್ವಭಾವಿ ಯೋಜನೆಗಳ ತಯಾರಿಸುವಿಕೆ

ಡಿಎಂಎಫ್‌ಟಿ ನಿಯಮಗಳು, 2016ರ ನಿಯಮ 7 ಮುಂಬರುವಂತಹ ಹಣಕಾಸು ಸಾಲಿನಲ್ಲಿ ಕಾರ್ಯಗತಗೊಳಿಸುವ ಸಲುವಾಗಿ ಪ್ರತೀ ವರ್ಷ ಜನವರಿಯ ವೇಳೆಗೆ ವಾರ್ಷಿಕ ಪೂರ್ವಭಾವಿ ಯೋಜನೆಯನ್ನು ಕಾರ್ಯಗತಗೊಳಿಸುವ ಸಲುವಾಗಿ ವಾರ್ಷಿಕ ಪೂರ್ವಭಾವಿ ಯೋಜನೆ ಹಾಗೂ ವಾರ್ಷಿಕ ಆಯವ್ಯಯ ತಯಾರಿಕೆಯನ್ನು ಕಡ್ಡಾಯಗೊಳಿಸಿರುವುದು. ಡಿಎಂಎಫ್‌ಟಿ ನಿಯಮಗಳು, 2016ರ ನಿಯಮ 15(3) ಪ್ರತಿಷ್ಠಾನ ಟ್ರಸ್ಟ್‌ನ ಕಾರ್ಯಚಟುವಟಿಕೆಗಳಿಗಾಗಿ ಒಂದು ತಜ್ಞ ಸಂಸ್ಥೆಯ ಮೂಲಕ ಪ್ರಧಾನ ಪೂರ್ವಭಾವಿ ಯೋಜನೆ ಅಥವಾ ಅಂತರ್ದೃಷ್ಟಿ ದಾಖಲೆಗಳನ್ನು ತಯಾರಿಸುವುದನ್ನು ನಿರ್ದಿಷ್ಟಪಡಿಸಿರುತ್ತದೆ.

ಭಾರತ ಸರ್ಕಾರದ ಗಣಿಗಳ ಮಂತ್ರಾಲಯವು ಪರಿಪ್ರೇಕ್ಷಣಾ ಯೋಜನೆಯನ್ನು ರೂಪಿಸುವ ಸಲುವಾಗಿ ವಿಶ್ವವಿದ್ಯಾನಿಲಯಗಳು/ಹೆಸರಾಂತ ಸಂಸ್ಥೆಗಳು/ಏಜನ್ಸಿಗಳ ಮೂಲಕ ಮೂಲ ಸಮೀಕ್ಷೆಗಳನ್ನು ನಡೆಸುವ ಸಲುವಾಗಿ ಡಿಎಂಎಫ್‌ಟಿ ನಿಯಮಗಳು, 2016ಕ್ಕೆ ತಿದ್ದುಪಡಿಗಳನ್ನು ಅಳವಡಿಸಿಕೊಳ್ಳುವಂತೆ ರಾಜ್ಯ ಸರ್ಕಾರಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ನಿರ್ದೇಶನಗಳನ್ನು ನೀಡಿದ್ದಿತು (ಜೂನ್ 2022). ಮೂಲ ಸಮೀಕ್ಷೆಯ ಮೂಲಕ ಅಥವಾ ಅಂತಹ ಇತರೆ ಯಾವುದೇ ಸಮೀಕ್ಷೆ / ನಿರ್ಧಾರಣೆಯ ಮೂಲಕ ಗುರುತಿಸಲಾದಂತಹ ಅಂಶಗಳು ಮತ್ತು ಅಂತರಗಳ ಆಧಾರದ ಮೇರೆಗೆ, ಡಿಎಂಎಫ್ ಐದು ವರ್ಷಗಳ ಅವಧಿಗೆ ಒಂದು ಕಾರ್ಯೋಪಾಯವನ್ನು ತಯಾರಿಸತಕ್ಕದ್ದು ಹಾಗೂ ಅದನ್ನು ಪರಿಪ್ರೇಕ್ಷಣಾ ಯೋಜನೆಯಲ್ಲಿ ಸೇರಿಸಕ್ಕದ್ದು. ಐದು-ವರ್ಷಗಳ ಪರಿಪ್ರೇಕ್ಷಣಾ ಯೋಜನೆಯನ್ನು ಪ್ರಸಕ್ತ ಲಭ್ಯವಿರುವಂತಹ ಹಣಕಾಸಿನ ಶಿಲ್ಕು ಹಾಗೂ ಐದು ವರ್ಷಗಳ ಅವಧಿಯಾದ್ಯಂತ ಡಿಎಂಎಫ್ ಸಂಚಿತಗೊಳ್ಳಬಹುದಾದಂತಹ/ಕ್ರೋಡೀಕೃತಗೊಳ್ಳಬಹುದಾದಂತಹ ಹಣಕಾಸನ್ನು ಪರಿಗಣಿಸುವ ಮೂಲಕ ತಯಾರಿಸತಕ್ಕದ್ದು. ಐದು-ವರ್ಷಗಳ ಪರಿಪ್ರೇಕ್ಷಣಾ ಯೋಜನೆಯನ್ನು ವರ್ಷವಾರು ಕ್ರಿಯಾ ಯೋಜನೆಗಳನ್ನಾಗಿ ವರ್ಗೀಕರಿಸತಕ್ಕದ್ದು.

ಲೆಕ್ಕಪರಿಶೋಧನೆಯು ಈ ಕೆಳಗಿನ ಅಂಶಗಳನ್ನು ಗಮನಿಸಿತು:

- ಡಿಎಂಎಫ್‌ಟಿಗಳು ಕಾರ್ಯಕ್ರಮಗಳ ಪಟ್ಟಿಯನ್ನು ಒಳಗೊಂಡಿರುವಂತಹ ವಾರ್ಷಿಕ ಕ್ರಿಯಾ ಯೋಜನೆಗಳನ್ನು ತಯಾರಿಸಿದ್ದವು, ಆದರೆ ಪರಿಪ್ರೇಕ್ಷಣಾ ಯೋಜನೆಗಳನ್ನು ತಯಾರಿಸುವ ಸಲುವಾಗಿ ಯಾವುದೇ ಮೂಲ ಸಮೀಕ್ಷೆಯನ್ನು ತಯಾರಿಸಿರಲಿಲ್ಲ, ಇದರ ತತ್ಪರಿಣಾಮವಾಗಿ ತೊಂದರೆಗೆ ಈಡಾಗಿದ್ದಂತಹ ಪ್ರದೇಶಗಳ ಅಗತ್ಯತೆಗಳನ್ನು ಸಮಗ್ರವಾಗಿ ಗುರುತಿಸಿರಲಿಲ್ಲ ಮತ್ತು ಕ್ರಿಯಾ ಯೋಜನೆಗಳು ಏಕಾಂಗಿಯಾದಂತಹ ಮತ್ತು ತಾರ್ಕಿಕವಲ್ಲದ ಕಾಮಗಾರಿಗಳನ್ನು ಒಳಗೊಂಡಿದ್ದವು. ತೊಂದರೆಗೆ ಈಡಾದಂತಹ ಪ್ರದೇಶಗಳ ಅಗತ್ಯತೆಗಳನ್ನು ವಿಶ್ಲೇಷಿಸದೆಯೇ ಕೈಗೆತ್ತಿಕೊಳ್ಳಲಾಗಿದ್ದಂತಹ ಕಾಮಗಾರಿಗಳ ದೃಷ್ಟಾಂತಗಳನ್ನು ***ಕಂಡಿಕೆ 5.5.1 ಮತ್ತು 5.8.1ರಲ್ಲಿ ವಿವರಿಸಲಾಗಿರುವುದು.***

- ಡಿಎಂಎಫ್‌ಟಿ ನಿಯಮಗಳು, 2016ರ ನಿಯಮ 7 ವಾರ್ಷಿಕ ಕ್ರಿಯಾ ಯೋಜನೆಯನ್ನು ತಯಾರಿಸುವುದನ್ನು ಮಾತ್ರ ನಿರ್ದಿಷ್ಟಪಡಿಸಿರುವುದು. ಈ ನಿಟ್ಟಿನಲ್ಲಿ ಅಧೀನ ಇಲಾಖೆಗಳು

ತೊಡಗಿಸಿಕೊಳ್ಳುವಿಕೆ, ನಾಮನಿರ್ದೇಶಿತ ಟ್ರಸ್ಟಿಯ ಪಾತ್ರ, ಶೀರ್ಷಿಕೆವಾರು ಕಾಮಗಾರಿಗಳಿಗೆ ಆದ್ಯತೆ ನೀಡಬೇಕಾಗಿರುವುದನ್ನು ಪರಿಗಣಿಸುವುದು, ಭಾರತ ಸರ್ಕಾರದ ಮತ್ತು ಕರ್ನಾಟಕ ಸರ್ಕಾರದ ಪ್ರಸ್ತುತ ಪ್ರಗತಿಯಲ್ಲಿರುವ ಯೋಜನೆಗಳು / ಕಾರ್ಯಕ್ರಮಗಳಿಗೆ ಪೂರಕವಾಗಿ ಯೋಜನೆಗಳು/ಕಾರ್ಯಕ್ರಮಗಳು, ಇವೇ ಮುಂತಾದ ಸವಿವರ ನಿರ್ದೇಶನಗಳು ಮತ್ತು ಮಾರ್ಗಸೂಚಿಗಳನ್ನು ಕರ್ನಾಟಕ ಸರ್ಕಾರವು ನಿರ್ದಿಷ್ಟಪಡಿಸಿರಲಿಲ್ಲ.

ಮೂಲ ಸಮೀಕ್ಷೆಯನ್ನು ನಡೆಸಿ ಐದು ವರ್ಷಗಳ ಅವಧಿಗೆ ಪರಿಪ್ರೇಕ್ಷಣಾ ಯೋಜನೆಯನ್ನು ತಯಾರಿಸುವ ಸಲುವಾಗಿ ಸಂಬಂಧಿತ ಜಿಲ್ಲಾಧಿಕಾರಿಯವರಿಗೆ ಮತ್ತು ಉಪ–ನಿರ್ದೇಶಕರುಗಳಿಗೆ/ಹಿರಿಯ ಭೂವಿಜ್ಞಾನಿಗಳಿಗೆ ಒಂದು ಸುತ್ತೋಲೆಯನ್ನು ಜಾರಿಗೊಳಿಸಲಾಗಿದ್ದಿತು (ಡಿಸೆಂಬರ್ 2023) ಎಂಬುದಾಗಿ ಸರ್ಕಾರವು ಉತ್ತರಿಸಿತು (ಆಗಸ್ಟ್ 2024). ಆದಾಗ್ಯೂ, ಲೆಕ್ಕಪರಿಶೋಧನೆಯು ಈ ಅಂಶದ ಬಗ್ಗೆ ಸ್ಪಷ್ಟಪಡಿಸಿದನಂತರವಷ್ಟೇ ಈ ಸುತ್ತೋಲೆಯನ್ನು ಜಾರಿಗೊಳಿಸಕೊಡಲಾಗಿದ್ದಿತು ಹಾಗೂ ಅನುಸರಿಸಬೇಕಾದಂತಹ ವಿಧಾನಗಳ ಬಗ್ಗೆ ಸವಿವರ ನಿರ್ದೇಶನಗಳನ್ನು ಒಳಗೊಂಡಿರಲಿಲ್ಲ.

2.5 ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ತೊಂದರೆಗೆ ಈಡಾಗಿರುವ ಪ್ರದೇಶಗಳು

ಡಿಎಂಎಫ್‌ಟಿ ಗಣಿಗಾರಿಕೆ ಸಂಬಂಧಿತ ಕಾರ್ಯಾಚರಣೆಗಳಿಂದ ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ತೊಂದರೆಗೆ ಈಡಾಗಿರುವಂತಹ ಪ್ರದೇಶಗಳ ಇಂದಿನದಿನದನ್ನಾಗಿ ಮಾಡಲಾದಂತಹ (ಅಪ್‌ಡೇಟೆಡ್) ಪಟ್ಟಿಯನ್ನು ತಯಾರಿಸತಕ್ಕದ್ದು ಹಾಗೂ ನಿರ್ವಹಿಸತಕ್ಕದ್ದು ಎಂಬುದಾಗಿ ಡಿಎಂಎಫ್‌ಟಿ ನಿಯಮಗಳು, 2016ರ ನಿಯಮ 21 (ಸಿ) ನಿರ್ದಿಷ್ಟಪಡಿಸಿರುವುದು. ಯೋಜನೆಯ ಮಾರ್ಗಸೂಚಿಗಳ ಅನುಸಾರ, ಪ್ರತ್ಯಕ್ಷವಾಗಿ ತೊಂದರೆಗೆ ಈಡಾಗಿರುವಂತಹ ಪ್ರದೇಶಗಳು ಎಂದರೆ ನೇರವಾಗಿ ಗಣಿಗಾರಿಕೆ ಸಂಬಂಧಿತ ಕಾರ್ಯಚರಣೆಗಳು ನಡೆಯುತ್ತಿರುವ ಸ್ಥಳ ಹಾಗೂ ಗಣಿಗಳು ಇರುವಂತಹ ಹಳ್ಳಿಗಳನ್ನು ಒಳಗೊಂಡಿರುತ್ತವೆ. ಗಣಿಗಾರಿಕೆಯಿಂದ ಸ್ಥಳಾಂತರಗೊಂಡಿರುವ ಕುಟುಂಬಗಳು ವಾಸಿಸುತ್ತಿರುವಂತಹ ಹಳ್ಳಿಗಳು, ತಮ್ಮ ಆರ್ಥಿಕ ಅಗತ್ಯತೆಗಳನ್ನು ಪೂರೈಸಿಕೊಳ್ಳುವ ಸಲುವಾಗಿ ಗಣಿಗಾರಿಕೆ ಪ್ರದೇಶಗಳನ್ನು ಗಮನಾರ್ಹವಾದ ರೀತಿಯಲ್ಲಿ ಅವಲಂಬಿಸಿರುವಂತಹ ಹಾಗೂ ಬಳಕೆ ಹಾಗೂ ಅನುಕೂಲತೆಗಳ ಹಕ್ಕನ್ನು ಅಥವಾ ಸಾಂಪ್ರದಾಯಿಕ ಹಕ್ಕುಗಳನ್ನು ಹೊಂದಿರುವಂತಹ ಗ್ರಾಮಗಳು, ಉದಾಹರಣೆಗೆ ದನಕರುಗಳು ಮೇಯುವ ಹುಲ್ಲುಗಾವಲು, ಅರಣ್ಯ ಉತ್ಪನ್ನಗಳ ಸಂಗ್ರಹಣೆ, ಇತ್ಯಾದಿಗಳನ್ನು ಒಳಗೊಂಡಿರುತ್ತದೆ. ಅಲ್ಲದೆಯೇ, ರಾಜ್ಯ ಸರ್ಕಾರವು ನಿರ್ದಿಷ್ಟಪಡಿಸಬಹುದಾದಂತಹ ರೀತಿಯಲ್ಲಿ ಗಣಿಯಿಂದ ಒಂದು ನಿರ್ದಿಷ್ಟವಾದಂತಹ ವ್ಯಾಪ್ತಿಯೊಳಗಿನ ಪ್ರದೇಶವನ್ನು ಒಳಗೊಂಡಿರುತ್ತದೆ. ಪರೋಕ್ಷವಾಗಿ ತೊಂದರೆಗೆ ಈಡಾಗಿರುವಂತಹ ಪ್ರದೇಶಗಳು ಎಂದರೆ, ಗಣಿಗಾರಿಕೆ ಸಂಬಂಧಿತ ಕಾರ್ಯಾಚರಣೆಗಳ ಕಾರಣ ಸಾಮಾಜಿಕ, ಆರ್ಥಿಕ ಮತ್ತು ಪರಿಸರೀಯ ಪರಿಣಾಮಗಳಾದ ನೀರು, ಮಣ್ಣು ಮತ್ತು ಗಾಳಿಯ ಗುಣಮಟ್ಟ ಕ್ಷೀಣಿಸುವುದು, ಗಣಿಗಾರಿಕೆ ಮತ್ತು ಖನಿಜಗಳ ಸಾಗಣೆಯಿಂದ ಉಂಟಾಗುವ ದಟ್ಟಣೆ ಮತ್ತು ಮಾಲಿನ್ಯ ಇತ್ಯಾದಿಗಳಿಂದಾಗಿ ಸ್ಥಳೀಯ ಜನಸಂಖ್ಯೆಯು ಪ್ರತಿಕೂಲ ಪರಿಣಾಮ ಬೀರಿದ ಪ್ರದೇಶಗಳಾಗಿವೆ.

ಕರ್ನಾಟಕ ಸರ್ಕಾರವು ದಿನಾಂಕ 20 ಜನವರಿ 2020ರ ಅಧಿಸೂಚನೆ ಮೂಲಕ ಈ ಕೆಳಗೆ ವಿವರಿಸಿರುವಂತೆ ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ತೊಂದರೆಗೆ ಈಡಾಗಿರುವಂತಹ ಪ್ರದೇಶಗಳನ್ನು ಗುರುತಿಸುವ ಸಲುವಾಗಿ ಸೂಚನೆಗಳನ್ನು ನೀಡಿದ್ದಿತು:

ಕೋಷ್ಟಕ ಸಂಖ್ಯೆ 2.1: ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ತೊಂದರೆಗೆ ಈಡಾಗಿರುವಂತಹ ಪ್ರದೇಶಗಳನ್ನು ಗುರುತಿಸುವ ಸಲುವಾಗಿನ ನಿರ್ದೇಶನಗಳು

ಕ್ರಮ ಸಂಖ್ಯೆ	ವಾರ್ಷಿಕ ಡಿಎಂಎಫ್ ಸಂಗ್ರಹಣೆ	ಜಿಲ್ಲೆ	ಪ್ರತ್ಯಕ್ಷವಾಗಿ ತೊಂದರೆಗೆ ಈಡಾಗಿರುವ ಪ್ರದೇಶಗಳಿಗೆ ಹಂಚಿಕೆ ಮಾಡಬೇಕಾದ ಶೇಕಡಾವಾರು ಹಣಕಾಸು	ಪ್ರತ್ಯಕ್ಷವಾಗಿ ತೊಂದರೆಗೆ ಈಡಾಗಿರುವ ಪ್ರದೇಶಗಳಿಗೆ ಗಣಿಗಾರಿಕೆ ಪ್ರದೇಶದಿಂದ ದೂರ		ಪರೋಕ್ಷವಾಗಿ ತೊಂದರೆಗೆ ಈಡಾಗಿರುವ ಪ್ರದೇಶಗಳಿಗೆ ಹಂಚಿಕೆ ಮಾಡಬೇಕಾದ ಶೇಕಡಾವಾರು ಹಣಕಾಸು	ಪರೋಕ್ಷವಾಗಿ ತೊಂದರೆಗೆ ಈಡಾಗಿರುವ ಪ್ರದೇಶಗಳ ಎಲ್ಲೆ
				ಪ್ರಧಾನ ಖನಿಜಗಳು	ಅಪ್ರಧಾನ ಖನಿಜಗಳು		
1	100 ಕೋಟಿಗೂ ಅಧಿಕ	ಬಳ್ಳಾರಿ	30	10 ಕಿಮೀ	5 ಕಿಮೀ	70	ಜಿಲ್ಲೆಯ ಉಳಿದ ಪ್ರದೇಶಗಳು
2	50ರಿಂದ 100 ಕೋಟಿ	ಕಲಬುರಗಿ	40	10 ಕಿಮೀ	5 ಕಿಮೀ	60	–ಅದೇ–
3	20ರಿಂದ 50 ಕೋಟಿ	ಚಿತ್ರದುರ್ಗ	50	10 ಕಿಮೀ	5 ಕಿಮೀ	50	–ಅದೇ–
4	20 ಕೋಟಿಗೂ ಕಡಿಮೆ	ಉಳಿದ 27 ಜಿಲ್ಲೆಗಳು	60	10 ಕಿಮೀ	5 ಕಿಮೀ	40	–ಅದೇ–

ಮೂಲ: ಲೆಕ್ಕಪರಿಶೋಧನೆಯು ಕ್ರೋಡೀಕರಿಸಿದಂತಹ ಮಾಹಿತಿ

- ಪ್ರತಿಯೊಂದು ಗಣಿ ಅಥವಾ ಕಲ್ಲು ಗಣಿಯಿಂದ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ತೊಂದರೆಗೆ ಈಡಾದಂತಹ ಪ್ರದೇಶಗಳು ಅಥವಾ ಗ್ರಾಮಗಳನ್ನು ಪ್ರತ್ಯೇಕವಾಗಿ ಗುರುತಿಸುವ ಬದಲಾಗಿ, ಅಧಿಸೂಚನೆಯು ಸಂಪೂರ್ಣ ಜಿಲ್ಲೆ/ರಾಜ್ಯವನ್ನು ಕೇವಲ ಗಣಿ/ಕಲ್ಲುಗಣಿಯಿಂದ ದೂರದ ಆಧಾರದ ಮೇರೆಗೆ ಗಣಿಗಾರಿಕೆ ಚಟುವಟಿಕೆಗಳಿಂದ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ತೊಂದರೆಗೆ ಈಡಾಗಿರುವುದು ಎಂಬುದಾಗಿ ವರ್ಗೀಕರಿಸಿರುವುದು.

- ಕಾಣಿಕೆಗಳ ಮೂಲಕ ಸಂಗ್ರಹಿಸಬಹುದಾದ ಹಣಕಾಸು ಸೀಮಿತವಾಗಿರುವುದರಿಂದ ಹಾಗೂ ಬಹಳಷ್ಟು ಜಿಲ್ಲೆಗಳಲ್ಲಿ ಅತ್ಯಂತ ಕನಿಷ್ಠ ಮಟ್ಟದಲ್ಲಿ ಇರುವುದರಿಂದ (***ಅನುಬಂಧ –2ನ್ನು* ಗಮನಿಸುವುದು**) ಸಂಪೂರ್ಣ ರಾಜ್ಯವನ್ನು ಗಣಿಗಾರಿಕೆ ಕಾರ್ಯಾಚರಣೆಗಳಿಂದ ತೊಂದರೆಗೆ ಈಡಾಗಿರುವುದಾಗಿ ವರ್ಗೀಕರಿಸುವುದು ಗಣಿಗಾರಿಕೆ ಚಟುವಟಿಕೆಗಳಿಂದ ತೊಂದರೆಗೆ ಈಡಾಗಿರುವಂತಹ ಪ್ರದೇಶಗಳು ಮತ್ತು/ಜನತೆಯ ಸಮಸ್ಯೆಗಳನ್ನು ಬಗೆಹರಿಸದಿರುವಲ್ಲಿ ಪರಿಣಮಿಸಬಹುದು.

ಜಿಲ್ಲೆಯ ಸರ್ವಾಂಗೀಣ ಅಭಿವೃದ್ಧಿಗಾಗಿ ಸಂಪೂರ್ಣ ಜಿಲ್ಲೆಯನ್ನು ಗಣಿಗಾರಿಕೆ ಚಟುವಟಿಕೆಗಳಿಂದ ತೊಂದರೆಗೆ ಈಡಾಗಿರುವುದಾಗಿ ವರ್ಗೀಕರಿಸಿ ಅಧಿಸೂಚನೆಯನ್ನು ನೀಡಲಾಯಿತು ಹಾಗೂ ಗಣಿಗಾರಿಕೆಯಿಂದ ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ತೊಂದರೆಗೆ ಈಡಾಗಿರುವ ಪ್ರದೇಶಗಳ ಸೀಮಿತಗಳನ್ನು ನಿರ್ದಿಷ್ಟವಾಗಿ ತಿಳಿಸುವ ಮೂಲಕ ಒಂದು ಅಧಿಸೂಚನೆಯನ್ನು ಹೊರಡಿಸಲಾಗುವುದು ಎಂಬುದಾಗಿ ಸರ್ಕಾರವು ಉತ್ತರಿಸಿತು (ಆಗಸ್ಟ್ 2024). ಆದಾಗ್ಯೂ, ದೂರದ ಮಿತಿಗಳನ್ನು ಪರಿಷ್ಕರಿಸಿರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು.

2.6 ತೊಂದರೆಗೆ ಈಡಾಗಿರುವ ಜನತೆಯನ್ನು ಗುರುತಿಸುವಿಕೆ

ಪಿಎಂಕೆಕೆಕೆವೈ ಉದ್ದೇಶಗಳಲ್ಲಿ ಒಂದು ಎಂದರೆ ಗಣಿಗಾರಿಕೆ ಪ್ರದೇಶಗಳಲ್ಲಿನ ತೊಂದರೆಗೆ ಈಡಾಗಿರುವಂತಹ ಜನತೆಗೆ ಒಂದು ದೀರ್ಘಾವಧಿಯಲ್ಲಿ ಊರ್ಜಿತಗೊಳ್ಳಬಲ್ಲಂತಹ ಜೀವನೋಪಾಯಗಳನ್ನು ಖಚಿತಪಡಿಸುವುದಾಗಿದ್ದಿತು. ತೊಂದರೆಗೆ ಈಡಾಗಿರುವಂತಹ ವ್ಯಕ್ತಿಗಳು ಅಂದರೆ ಗಣಿಗಾರಿಕೆಯಿಂದ ತೊಂದರೆಗೆ ಈಡಾಗಿರುವ ವ್ಯಕ್ತಿಗಳು ಗಣಿಗಾರಿಕೆ ಮಾಡಲಾಗಿರುವ ಭೂಮಿಯ ಮೇಲೆ ಕಾನೂನಾತ್ಮಕ ಮತ್ತು ವೃತ್ತಿಪರ ಹಕ್ಕುಗಳನ್ನು ಹೊಂದಿದ್ದಂತಹ ಹಾಗೂ ಅಲ್ಲದೆಯೇ ಬಳಕೆ ಹಾಗೂ ಅನುಕೂಲತೆಗಳ ಹಕ್ಕನ್ನು ಅಥವಾ ಸಾಂಪ್ರದಾಯಿಕ ಹಕ್ಕುಗಳನ್ನು ಹೊಂದಿರುವಂತಹ ಜನತೆ ಆಗಿರುತ್ತಾರೆ. ಡಿಎಂಎಫ್‌ಟಿ ನಿಯಮಗಳ, ನಿಯಮ 21ರ ಅನುಸಾರ, ಡಿಎಂಎಫ್‌ಟಿಗಳು ಸ್ಥಳೀಯ ಸಂಸ್ಥೆಗಳ ಚುನಾಯಿತ ಪ್ರತಿನಿಧಿಗಳೊಂದಿಗೆ ಸಮಾಲೋಚಿಸುವ ಮೂಲಕ

ತೊಂದರೆಗೆ ಈಡಾಗಿರುವಂತಹ ಜನತೆಯ ಒಂದು ಪಟ್ಟಿಯನ್ನು ತಯಾರಿಸತಕ್ಕದ್ದು ಮತ್ತು ನಿರ್ವಹಿಸತಕ್ಕದ್ದು.

ಪರೀಕ್ಷಾ–ಪರಿಶೀಲನೆ ಮಾಡಲಾದಂತಹ ಡಿಎಂಎಫ್‌ಟಿಗಳು ತೊಂದರೆಗೆ ಈಡಾಗಿದ್ದಂತಹ ವ್ಯಕ್ತಿಗಳು/ಜನತೆಯ ಪಟ್ಟಿಯನ್ನು ತಯಾರಿಸಿರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಅಂತಹ ಪಟ್ಟಿಯ ಅನುಪಸ್ಥಿತಿಯಲ್ಲಿ, ಯೋಜನೆಗಳು ನಿರ್ದಿಷ್ಟವಾದಂತಹ ಫಲಾನುಭವಿಗಳು ಹಾಗೂ ಅದರಲ್ಲೂ ನಿರ್ದಿಷ್ಟವಾಗಿ ಗಣಿಗಾರಿಕೆಯಿಂದ ನೇರವಾಗಿ ತೊಂದರೆಗೆ ಈಡಾದವರುಗಳನ್ನು ಯಾವ ರೀತಿಯಲ್ಲಿ ಯೋಜಿಸಿದ್ದವು ಮತ್ತು ಗುರಿಯಾಗಿಸಿಕೊಂಡಿದ್ದವು ಎಂಬುದನ್ನು ಖಚಿತಪಡಿಸಿಕೊಳ್ಳಲು ಲೆಕ್ಕಪರಿಶೋಧನೆಗೆ ಸಾಧ್ಯವಾಗಲಿಲ್ಲ.

ಪಿಎಂಕೆಕೆಕೆವೈ ಮಾರ್ಗಸೂಚಿಗಳು, 2024ರ ಅನುಸಾರ ತೊಂದರೆಗೆ ಈಡಾಗಿರುವಂತಹ ಜನತೆಯ ಒಂದು ಪಟ್ಟಿಯನ್ನು ತಯಾರಿಸಲು ಹಾಗೂ ನಿರ್ವಹಿಸಲು ಹಾಗೂ ಜನತೆಗೆ ವ್ಯಕ್ತಿಗತವಾಗಿ ಯೋಜನೆಗಳನ್ನು ರೂಪಿಸಲು ಕ್ರಮಗಳನ್ನು ಕೈಗೊಳ್ಳುವುದಾಗಿ ಸರ್ಕಾರವು ಉತ್ತರಿಸಿತು (ಆಗಸ್ಟ್ 2024).

ಶಿಫಾರಸುಗಳು:

1. **ಪಿಎಂಕೆಕೆಕೆವೈ ಉದ್ದೇಶಗಳನ್ನು ಪೂರೈಸುವ ರೀತಿಯಲ್ಲಿ ಡಿಎಂಎಫ್‌ಟಿಗಳು ಪರಿಪ್ರೇಕ್ಷಣ ಮತ್ತು ವಾರ್ಷಿಕ ಪೂರ್ವಭಾವಿ ಯೋಜನೆಗಳನ್ನು ರೂಪಿಸುವ ಸಲುವಾಗಿ ಭಾರತ ಸರ್ಕಾರವು ಸವಿವರ ನಿರ್ದೇಶನಗಳನ್ನು / ಮಾರ್ಗಸೂಚಿಗಳನ್ನು ಒಳಗೊಂಡಂತೆ ಡಿಎಂಎಫ್‌ಟಿ ನಿಯಮಗಳಿಗೆ ತಿದ್ದುಪಡಿ ತರಲು ಕ್ರಮವನ್ನು ಕೈಗೊಳ್ಳಬೇಕು ಎಂಬುದಾಗಿ ಲೆಕ್ಕಪರಿಶೋಧನೆಯು ಶಿಫಾರಸು ಮಾಡುತ್ತಿರುವುದು.**
2. **ಸರ್ಕಾರವು ಮಾಹಿತಿ, ಶಿಕ್ಷಣ ಸಂವಹನ ಹಾಗೂ ಪ್ರಸಾರ ಕಾರ್ಯಚಟುವಟಿಕೆಗಳ ಮೂಲಕ ಯೋಜನೆಯ ಬಗ್ಗೆ ಅರಿವನ್ನು ಹೆಚ್ಚಳಗೊಳಿಸುವ ಸಲುವಾಗಿ ಕ್ರಮವನ್ನು ತೆಗೆದುಕೊಳ್ಳತಕ್ಕದ್ದು ಹಾಗೂ ಗಣಿಗಾರಿಕೆಯಿಂದ ನೇರವಾಗಿ ಭಾಧಿತರಾದ ಜನರನ್ನು ಗುರಿಯಾಗಿರಿಸಿದ ಯೋಜನೆಗಳ ಪೂರ್ವಭಾವಿಯಾಗಿ ಯೋಜಿಸುವುದನ್ನು ಸಕ್ರಿಯಗೊಳಿಸಲು ಸರ್ಕಾರವು ಡಿಎಂಎಫ್‌ಟಿಗಳು ಭಾಧಿತರಾದ ವ್ಯಕಿಗಳ ಪಟ್ಟಿಯನ್ನು ತಯಾರಿಸಬೇಕೆಂದು ಸೂಕ್ತ ನಿರ್ದೇಶನಗಳನ್ನು ನೀಡಬೇಕು.**

ಅಧ್ಯಾಯ – III

ಡಿಎಂಎಫ್‌ಟಿ ಹಣಕಾಸಿನ ಸಂಗ್ರಹಣೆ

ಅಧ್ಯಾಯ III

ಡಿಎಂಎಫ್‌ಟಿ ಹಣಕಾಸಿನ ಸಂಗ್ರಹಣೆ

ಡಿಎಂಎಫ್‌ಟಿಗಳ ಹಣಕಾಸಿನ ಪ್ರಮುಖ ಮೂಲವು ಗಣಿಗಳು ಮತ್ತು ಕಲ್ಲು ಗಣಿಗಳ ಗಣಿಗಾರಿಕೆ ಗುತ್ತಿಗೆ ಹಿಡುವಳಿದಾರರುಗಳು ನಿರ್ದಿಷ್ಟ ದರಗಳಲ್ಲಿ ನೀಡುವಂತಹ ಕಾಣಿಕೆಗಳಾಗಿರುತ್ತವೆ. ಈ ಹಣಕಾಸಿಗೆ ಬಾಕಿ ಇರುವ ಮೊತ್ತವನ್ನು ಸಂಗ್ರಹಿಸುವುದನ್ನು ಖಚಿತಪಡಿಸಿಕೊಳ್ಳಲು ಯಾವುದೇ ನಿಯಂತ್ರಣ ವ್ಯವಸ್ಥೆ ಜಾರಿಯಲ್ಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಕಾಮಗಾರಿಗಳಿಗಾಗಿ ಉಪಯೋಗಿಸಲಾದಂತಹ ಅಪ್ರಧಾನ ಖನಿಜಗಳು, ಕಾಮಗಾರಿಯನ್ನು ಕಾರ್ಯಗತಳಿಸುವ ಇಲಾಖಾ ಸಂಸ್ಥೆಗಳು ಮೂಲದಲ್ಲಿಯೇ ಕಡಿದುಕೊಳ್ಳಲಾದಂತಹ ರಾಜಧನ ಮತ್ತು ಡಿಎಂಎಫ್ ಕಾಣಿಕೆ ಮುಂತಾದ ವಿವರಗಳನ್ನು ಸೂಚಿಸುವಂತಹ ಸಲ್ಲಿಕೆಗಳನ್ನು ಪಡೆದುಕೊಳ್ಳುವ ವ್ಯವಸ್ಥೆಯು ಇರಲಿಲ್ಲ. ಡಿಎಂಎಫ್‌ಟಿಗಳು ಒದಗಿಸಿರುವಂತಹ ಹಣಕಾಸಿನ ಮೇಲೆ ಕಾರ್ಯಗತಗೊಳಿಸುವ ಸಂಸ್ಥೆಗಳು ಸ್ವೀಕರಿಸಿರುವಂತಹ ಬಡ್ಡಿ ಮೊತ್ತಗಳು ಡಿಎಂಎಫ್‌ಟಿ, ಬಳ್ಳಾರಿ, ಇವರಿಗೆ ವರ್ಗಾವಣೆ ಮಾಡದೆಯೇ ಕಾರ್ಯಗತಗೊಳಿಸುವ ಸಂಸ್ಥೆಗಳಲ್ಲಿ ಉಳಿದುಕೊಂಡಿದ್ದಿತು.

3.1 ಹಣಕಾಸು ನಿರ್ವಹಣೆ

ಡಿಎಂಎಫ್‌ಟಿಗಳ ಹಣಕಾಸಿನ ಪ್ರಮುಖ ಮೂಲವು ಗಣಿಗಳು ಮತ್ತು ಕಲ್ಲು ಗಣಿಗಳ ಗಣಿಗಾರಿಕೆ ಗುತ್ತಿಗೆ ಹಿಡುವಳಿದಾರರುಗಳು ಭಾರತ ಸರ್ಕಾರವು[9] ಪ್ರಧಾನ ಖನಿಜಗಳಿಗೆ ನಿರ್ದಿಷ್ಟ ದರಗಳಲ್ಲಿ (17 ಸೆಪ್ಟಂಬರ್ 2015) ಹಾಗೂ ಕರ್ನಾಟಕ ಸರ್ಕಾರವು[10] ಅಪ್ರಧಾನ ಖನಿಜಗಳಿಗೆ ನಿರ್ದಿಷ್ಟಪಡಿಸಿರುವಂತಹ ದರಗಳಲ್ಲಿ (12 ಆಗಸ್ಟ್ 2016) ನೀಡುವಂತಹ ಕೊಡುಗೆಗಳಾಗಿರುತ್ತವೆ. ಗಣಿಗಳು ಮತ್ತು ಭೂವಿಜ್ಞಾನ ಇಲಾಖೆಯು ಖನಿಜ ರವಾನೆ ಪರವಾನಿಗೆಗಳನ್ನು ನೀಡುವ ಮೊದಲು ಪ್ರಧಾನ / ಅಪ್ರಧಾನ ಖನಿಜಗಳ ಮೇಲೆ ರಾಜಧನ ಸಂಗ್ರಹಣೆಯ ವೇಳೆಯಲ್ಲಿ ಡಿಎಂಎಫ್‌ಟಿ ಹಣಕಾಸನ್ನು ಸಂಗ್ರಹಿಸುತ್ತಿದ್ದಿತು ಹಾಗೂ ಬ್ಯಾಂಕಿನಲ್ಲಿ ನಿರ್ವಹಿಸಲಾಗಿದ್ದಂತಹ ಟ್ರಸ್ಟ್ ಖಾತೆಗೆ ಜಮೆ ಮಾಡುತ್ತಿದ್ದಿತು.

ಮಾರ್ಚ್ 2023ರಲ್ಲಿದ್ದಂತೆ ರಾಜ್ಯದಲ್ಲಿ ವರ್ಷವಾರು ಡಿಎಂಎಫ್‌ಟಿ ಹಣಕಾಸಿಗೆ ಕೊಡುಗೆಯ ಸಂಗ್ರಹಣೆಯು ಈ ಕೆಳಗಿನಂತಿರುವುದು:

ಕೋಷ್ಟಕ ಸಂಖ್ಯೆ 3.1: ಮಾರ್ಚ್ 2023ರಲ್ಲಿದ್ದಂತೆ ರಾಜಧನ ಸಂಗ್ರಹಣೆ, ಸಂಗ್ರಹಿಸಲಾಗಿರುವಂತಹ ಡಿಎಂಎಫ್ ಹಣಕಾಸು ಹಾಗೂ ಖರ್ಚು ಮಾಡಲಾಗಿರುವ ಸ್ಥಿತಿಗತಿಗಳು

(₹ ಕೋಟಿಗಳಲ್ಲಿ)

ಕ್ರಮ ಸಂಖ್ಯೆ	ಹಣಕಾಸು ಸಾಲು	ರಾಜಧನ ಸಂಗ್ರಹಣೆ	ಡಿಎಂಎಫ್ ಸಂಗ್ರಹಣೆ	ವೆಚ್ಚ
1	2015–16	1,911.81	0.20*	0.00
2	2016–17	2,228.68	328.38	0.00
3	2017–18	2,590.25	603.22	19.86
4	2018–19	2,647.98	505.80	64.29
5	2019–20	3,057.15	490.59	302.21

[9] 12 ಜನವರಿ 2015ರಂದು ಅಥವಾ ಅದರ ನಂತರದಲ್ಲಿ ನೀಡಲಾಗಿರುವ ಗಣಿಗಾರಿಕೆ ಗುತ್ತಿಗೆ ಸಹಿತ ಪರಿಪ್ರೇಕ್ಷಣಾ ಗಣಿಗಾರಿಕೆ ಗುತ್ತಿಗೆಗಳಿಗೆ ಸಂಬಂಧಿಸಿದಂತೆ ಪಾವತಿಸಲಾಗಿರುವಂತಹ ರಾಜಧನದ ಶೇಕಡಾ 10ರಷ್ಟು, ಹಾಗೂ 12 ಜನವರಿ 2015ಕ್ಕೆ ಮುಂಚಿತವಾಗಿ ನೀಡಲಾಗಿರುವ ಗಣಿಗಾರಿಕೆ ಗುತ್ತಿಗೆಗಳಿಗೆ ಸಂಬಂಧಿಸಿದಂತೆ ಪಾವತಿಸಲಾಗಿರುವ ರಾಜಧನದ ಶೇಕಡ 30, ಯಾವುದು ಅನ್ವಯವೋ ಅದು.

[10] ಹರಾಜಿನ ಮೂಲಕ ನೀಡಲಾಗಿರುವಂತಹ ಸಾಧಾರಣ ಮರಳು ಗಣಿಗಾರಿಕೆಯನ್ನು ಹೊರತುಪಡಿಸಿದಂತೆ ಕಲ್ಲುಗಣಿ ಗುತ್ತಿಗೆಗಳಿಗೆ ಸಂಬಂಧಿಸಿದಂತೆ ರಾಜಧನದ ಶೇಕಡಾ 10 ಹಾಗೂ ಹರಾಜು ಮಾಡದೆಯೇ ನೀಡಲಾಗಿರುವ ಗುತ್ತಿಗೆಗಳಿಗೆ ಸಂಬಂಧಿಸಿದಂತೆ ರಾಜಧನದ ಶೇಕಡಾ 30 ಹಾಗೂ ಸಾಮಾನ್ಯ ಮರಳಿಗೆ ಸಂಬಂಧಿಸಿದಂತೆ ರಾಜಧನದ ಶೇಕಡಾ 10.

ಕ್ರಮ ಸಂಖ್ಯೆ	ಹಣಕಾಸು ಸಾಲು	ರಾಜಧನ ಸಂಗ್ರಹಣೆ	ಡಿಎಂಎಫ್ ಸಂಗ್ರಹಣೆ	ವೆಚ್ಚ
6	2020–21	3,047.45	556.61	514.07
7	2021–22	4,218.77	824.91	463.53
8	2022–23	4,073.77	693.80	462.50
	ಒಟ್ಟು	**23,775.86**	**4,003.51**	**1,826.46**[11]

(ಮೂಲ: ನಿರ್ದೇಶಕರು, ಗಣಿಗಳು ಮತ್ತು ಭೂವಿಜ್ಞಾನ ಇಲಾಖೆ, ಬೆಂಗಳೂರು, ಇವರು ಒದಗಿಸಿದ ಮಾಹಿತಿಯಂತೆ)

*** ಡಿಎಂಎಫ್ ಸಂಗ್ರಹಣೆ ಪ್ರಧಾನ ಖನಿಜಗಳಿಗೆ 17 ಸೆಂಬರ್ 2015ರಿಂದ ಹಾಗೂ ಅಪ್ರಧಾನ ಖನಿಜಗಳಿಂದ 12 ಆಗಸ್ಟ್ 2016ರಿಂದ.**

2015–16ರಿಂದ 2022–23ರವರೆಗಿನ ಅವಧಿಗೆ ಜಿಲ್ಲಾವಾರು ಡಿಎಂಎಫ್‌ಟಿ ಹಣಕಾಸು ಸಂಗ್ರಹಣೆಯ ವಿವರಗಳನ್ನು ***ಅನುಬಂಧ –2ರಲ್ಲಿ*** ನೀಡಲಾಗಿದೆ.

ರೇಖಾಚಿತ್ರ ಸಂಖ್ಯೆ 3.1 : 2015–16ರಿಂದ 2022–23ರ ಅವಧಿಗೆ ಡಿಎಂಎಫ್‌ಟಿ ಹಣಕಾಸು ಸಂಗ್ರಹಣೆಯನ್ನು ತೋರಿಸಿರುವುದು.



31 ಜಿಲ್ಲೆಗಳ ಪೈಕಿ, ಶೇಕಡಾ 83ರಷ್ಟು ಹಣಕಾಸು ನಾಲ್ಕು ಜಿಲ್ಲೆಗಳಲ್ಲಿ ಅವೆಂದರೆ ಬಳ್ಳಾರಿ, ವಿಜಯನಗರ, ಕಲಬುರಗಿ ಮತ್ತು ಚಿತ್ರದುರ್ಗದಲ್ಲಿ ಸಂಗ್ರಹವಾಗಿದ್ದಿತು. ಮುಂದುವರೆದು, ಮಾರ್ಚ್ 2023ರಲ್ಲಿದ್ದಂತೆ ಅನುಮೋದಿತ ಕ್ರಿಯಾ ಯೋಜನೆ, ಖರ್ಚು ಮಾಡಲಾಗಿರುವ ಮೊತ್ತ ಹಾಗೂ ಕಾಮಗಾರಿಗಳ ವಿವರಗಳಿಗೆ ಸಂಬಂಧಿಸಿದಂತೆ ಜಿಲ್ಲಾವಾರು ವಿವರಗಳನ್ನು ***ಅನುಬಂಧ – 3ರಲ್ಲಿ*** ನೀಡಲಾಗಿರುವುದು. ₹ 2,822.78 ಕೋಟಿಯಷ್ಟು ಅನುಮೋದಿತ ವೆಚ್ಚದೊಂದಿಗೆ ಕೈಗೆತ್ತಿಕೊಳ್ಳಲಾದಂತಹ 4,191 ಕಾಮಗಾರಿಗಳ ಪೈಕಿ 31 ಮಾರ್ಚ್ 2023ರಲ್ಲಿದ್ದಂತೆ ₹ 862.58 ಕೋಟಿ ಮೊತ್ತದ 2,215 ಕಾಮಗಾರಿಗಳು ಪೂರ್ಣಗೊಂಡಿದ್ದವು.

3.2 ಹಣಕಾಸು ವೆಚ್ಚ

ಪಿಎಂಕೆಕೆಕೆವೈ ಅಡಿಯಲ್ಲಿ ಡಿಎಂಎಫ್‌ಟಿಗಳು ಮಾರ್ಚ್ 2023ರಲ್ಲಿದ್ದಂತೆ 10,865 ಯೋಜನೆಗಳಿಗೆ ಅನುಮೋದನೆ ನೀಡಿದ್ದವು ಹಾಗೂ ₹ 3,902.00 ಕೋಟಿ ಮೊತ್ತವನ್ನು ಹಂಚಿಕೆ ಮಾಡಿದ್ದವು. ಡಿಎಂಎಫ್ ಹಣಕಾಸಿನ ಸಂಗ್ರಹಣೆ ಹಾಗೂ ಅದಕ್ಕೆ ಪರಸ್ಪರ ಅಭಿಮುಖವಾಗಿ ಅನುಮೋದನೆಗೊಂಡಿರುವ ಯೋಜನೆಗಳು, ಹಂಚಿಕೆ ಮಾಡಲಾಗಿರುವ ಹಣಕಾಸು ಹಾಗೂ ಖರ್ಚು ಮಾಡಲಾಗಿರುವ ಹಣಕಾಸಿನ ಸ್ಥಿತಿಗತಿಗಳ ವಿವರಗಳನ್ನು ಈ ಕೆಳಗಿನ ರೇಖಾಚಿತ್ರದಲ್ಲಿ ತೋರಿಸಲಾಗಿರುವುದು:

[11] 2019–20ರಿಂದ 2022–23ರ ಅವಧಿಯಲ್ಲಿ ಭರಿಸಲಾಗಿದ್ದಂತಹ ₹ 204.72 ಕೋಟಿ ಮೊತ್ತದಷ್ಟು ಕೋವಿಡ್–19ಕ್ಕೆ ಸಂಬಂಧಿತ ವೆಚ್ಚವನ್ನು ಒಳಗೊಂಡಿರುತ್ತದೆ.

ರೇಖಾಚಿತ್ರ ಸಂಖ್ಯೆ 3.2: ಮಾರ್ಚ್ 2023ರವರೆವಿಗೆ ಡಿಎಂಎಫ್ ಹಣಕಾಸಿನ ಸ್ಥಿತಿಗತಿಯನ್ನು ತೋರಿಸುತ್ತಿರುವುದು.



3.3 ಲೆಕ್ಕಪರಿಶೋಧನೆಯು ಆಯ್ಕೆ ಮಾಡಿಕೊಳ್ಳಲಾಗಿದ್ದಂತಹ ಜಿಲ್ಲೆಗಳಲ್ಲಿ 2015–16ರಿಂದ 2022–23ರವರೆಗೆ ಸಂಗ್ರಹಿಸಲಾಗಿದ್ದಂತಹ ಡಿಎಂಎಫ್‌ಟಿ ಹಣಕಾಸಿನ ಜಿಲ್ಲಾವಾರು ಸಂಗ್ರಹಣೆ ಹಾಗೂ ಅದನ್ನು ಉಪಯೋಗಿಸಿಕೊಂಡಿರುವ ಮೊತ್ತದ ವಿವರಗಳನ್ನು ಈ ಕೆಳಗಿನ ಕೋಷ್ಟಕದಲ್ಲಿ ತೋರಿಸಲಾಗಿರುವುದು:

ಕೋಷ್ಟಕ ಸಂಖ್ಯೆ 3.2: ಆಯ್ದ ಜಿಲ್ಲೆಗಳಲ್ಲಿ ಸಂಗ್ರಹಿಸಿದ ಮತ್ತು ಬಳಸಲಾದ ಡಿಎಂಎಫ್‌ಟಿ ಹಣಕಾಸಿನ ಜಿಲ್ಲಾವಾರು ಮೊತ್ತವನ್ನು ತೋರಿಸುವುದು.

(₹ ಕೋಟಿಗಳಲ್ಲಿ)

ಕ್ರಮ ಸಂಖ್ಯೆ	ಜಿಲ್ಲೆ	ಡಿಎಂಎಫ್‌ಟಿ ಸಂಗ್ರಹಣೆ	ಯೋಜನೆಗಳ ಸಂಖ್ಯೆ	ಮಂಜೂರಾತಿ ಗೊಂಡಿರುವ ವೆಚ್ಚ	ಉಪಯೋಗಿಸಿ ಕೊಳ್ಳಲಾಗಿರುವ ಡಿಎಂಎಫ್‌ಟಿ	ಉಪಯೋಗಿಸಿ ಕೊಳ್ಳಲಾಗಿರುವ ಶೇಕಡಾವಾರು ಮೊತ್ತ
1	ಬಳ್ಳಾರಿ	1,912.55	1,764	1593.68	629.62	39.51
2	ವಿಜಯನಗರ	463.21	1,420	750.25	333.79	44.49
3	ಚಿತ್ರದುರ್ಗ	422.49	305	319.39	254.52	79.69
4	ಬೆಂಗಳೂರು ನಗರ	51.52	607	76.35	42.74	55.98
5	ಗದಗ	9.73	95	5.56	4.30	77.34
	ಒಟ್ಟು	**2,859.50**	**4,191**	**2,745.23**	**1,264.97**	**46.08**

ಮೂಲ: ಇಲಾಖೆಯು ಒದಗಿಸಿರುವ ಮಾಹಿತಿಯಂತೆ

ಮಂಜೂರಾತಿಗೊಂಡಿದ್ದಂತಹ ₹ 2,745.23 ಕೋಟಿಗೆ ಪ್ರತಿಯಾಗಿ ₹ 1,264.97 ಕೋಟಿ ಮೊತ್ತವನ್ನು ಉಪಯೋಗಿಸಿಕೊಳ್ಳಲಾಗಿದ್ದಿತು, ಇದು ಶೇಕಡಾ 46.08ರಷ್ಟು ಪ್ರತಿನಿಧಿಸುತ್ತಿದ್ದಿತು. 2015–16ರಿಂದ 2022–23 ಸಾಲುಗಳಲ್ಲಿ ಹಣಕಾಸಿನ ಶೇಕಡಾವಾರು ಬಳಕೆಯು ಬಳ್ಳಾರಿಯಲ್ಲಿನ ಶೇಕಡಾ 39.51ರಿಂದ ಚಿತ್ರದುರ್ಗದಲ್ಲಿ ಶೇಕಡಾ 79.69ರಷ್ಟು ಆಗಿದ್ದಿತು.

ಶೇಕಡಾ 85ರಷ್ಟು ಹಣಕಾಸನ್ನು ಪಿಎಂಕೆಕೆಕೆವೈ ಅಡಿಯಲ್ಲಿನ ಯೋಜನೆಗಳು ಮತ್ತು ಕಾರ್ಯಕ್ರಮಗಳನ್ನು ಕಾರ್ಯಗತಗೊಳಿಸುವಿಕೆಗಾಗಿ ಮೀಸಲಿರಿಸತಕ್ಕದ್ದು, ಶೇಕಡಾ ಹತ್ತನ್ನು ತೊಂದರೆಗೆ ಈಡಾಗಿರುವ ಪ್ರದೇಶಗಳಲ್ಲಿ ಗಣಿಗಾರಿಕೆ ಚಟುವಟಿಕೆಗಳು ಮುಕ್ತಾಯಗೊಂಡನಂತರ ದತ್ತಿ ಉದ್ದೇಶಗಳ ಕಡೆಗೆ, ಶೇಕಡಾ ನಾಲ್ಕನ್ನು ಡಿಎಂಎಫ್‌ಟಿ ಆಡಳಿತಾತ್ಮಕ ವೆಚ್ಚಗಳ ಕಡೆಗೆ ಹಾಗೂ ಶೇಕಡಾ ಒಂದನ್ನು ರಾಜ್ಯ ಮಟ್ಟದ ಮೇಲ್ವಿಚಾರಣಾ ಸಮಿತಿ, ರಾಜ್ಯ ಮಟ್ಟದ ಅಧಿಕಾರಯುಕ್ತ ಸಮಿತಿ ಹಾಗೂ ರಾಜ್ಯ ಮಟ್ಟದ ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಕೋಶ ಹಾಗೂ ಗಣಿಗಳು ಮತ್ತು ಭೂವಿಜ್ಞಾನ ನಿರ್ದೇಶನಾಲಯದಲ್ಲಿ ಇತರೆ ಆಡಳಿತಾತ್ಮಕ ವೆಚ್ಚಗಳ ಕಡೆಗೆ ಭರಿಸತಕ್ಕದ್ದು ಎಂಬುದಾಗಿ ಡಿಎಂಎಫ್‌ಟಿ ನಿಯಮಗಳು, 2016ರ ನಿಯಮ 18 ನಿರ್ದಿಷ್ಟಪಡಿಸಿರುವುದು.

3.4 ಡಿಎಂಎಫ್ ಮೌಲ್ಯಮಾಪನ, ಬೇಡಿಕೆ ಮತ್ತು ಕೊಡುಗೆಗಳ ಸಂಗ್ರಹ

ಗುತ್ತಿಗೆ ಹಿಡುವಳಿದಾರರುಗಳಿಂದ ಡಿಎಂಎಫ್ ಮೌಲ್ಯಮಾಪನ, ಬೇಡಿಕೆ ಮತ್ತು ಕೊಡುಗೆಗಳ ಸಂಗ್ರಹಣೆಗೆ ಗಣಿಗಳು ಮತ್ತು ಭೂವಿಜ್ಞಾನ ಇಲಾಖೆಯು ಜವಾಬ್ದಾರಿಯುತವಾಗಿದ್ದಿತು. ಇಲಾಖೆಯು

ನೀಡಲಾಗಿರುವ ಗುತ್ತಿಗೆಗಳ ಮಾಹಿತಿ, ನೀಡಲಾಗಿರುವ ರವಾನೆ ಪರವಾನಗಿಗಳು, ಸಂಗ್ರಹಿಸಲಾಗಿರುವ ರಾಜಧನ ಹಾಗೂ ಡಿಎಂಎಫ್ ಸಂಬಂಧಿತ ಕೊಡುಗೆಗಳ ಮಾಹಿತಿಯನ್ನು ಸಮಗ್ರ ಗುತ್ತಿಗೆ ನಿರ್ವಹಣಾ ವ್ಯವಸ್ಥೆಯಲ್ಲಿ (ಇಂಟಗ್ರೇಟೆಡ್ ಲೀಸ್ ಮ್ಯಾನೇಜ್‌ಮೆಂಟ್ ಸಿಸ್ಟಮ್)[12] ನಿರ್ವಹಿಸುವುದು. ಗುತ್ತಿಗೆ ಹಿಡುವಳಿದಾರರುಗಳು ಖನಿಜಗಳ ಸಾಗಾಣಿಕೆಗಾಗಿ ಪರವಾನಿಗೆಗಳನ್ನು ಪಡೆಯುವ ವೇಳೆಯಲ್ಲಿ ರಾಜಧನ ಮತ್ತು ಡಿಎಂಎಫ್ ಕೊಡುಗೆಗಳನ್ನು ಪ್ರತ್ಯೇಕವಾಗಿ ಪಾವತಿಸುವರು. ರಾಜಧನವನ್ನು ಖಜಾನೆಗೆ ಪಾವತಿಸಲಾಗುತ್ತಿದ್ದಿತು ಹಾಗೂ ಡಿಎಂಎಫ್ ಕೊಡುಗೆಯನ್ನು ಸಂಬಂಧಿತ ಡಿಎಂಎಫ್‌ಟಿಯ ಬ್ಯಾಂಕ್ ಖಾತೆಗೆ ಪಾವತಿಸಲಾಗುತ್ತಿದ್ದಿತು.

ಇಲಾಖೆಯು ಗುತ್ತಿಗೆ ಹಿಡುವಳಿದಾರರುಗಳಿಂದ ರಾಜಧನ ಮತ್ತು ಇತರೆ ಬಾಕಿಗಳಿಗೆ ಸಂಬಂಧಿಸಿದಂತೆ ಬೇಡಿಕೆ, ಸಂಗ್ರಹ ಮತ್ತು ಬಾಕಿ (ಡಿಸಿಬಿ) ತ:ಖ್ತೆಯನ್ನು ತಯಾರಿಸುವುದು. ಒಂದು ಸಮರ್ಪಕವಾದಂತಹ ಲೆಕ್ಕವನ್ನಿಡುವಿಕೆ ವ್ಯವಸ್ಥೆಯ ಅಗತ್ಯತೆಯಿದ್ದಿತು, ಅದರಲ್ಲಿ ಸಂಗ್ರಹಿಸಬೇಕಿರುವ ಡಿಎಂಎಫ್ ಬಾಕಿಗಳು ಹಾಗೂ ಅದಕ್ಕೆ ಪ್ರತಿಯಾಗಿ ವಾಸ್ತವಿಕವಾಗಿ ಸಂಗ್ರಹಿಸಲಾಗಿರುವುದನ್ನು ಯಾಥಾರ್ಥತೆಯಿಂದ ಕೂಡಿದಂತೆ ಲೆಕ್ಕಹಾಕಬೇಕಿದ್ದಿತು ಹಾಗೂ ದಾಖಲಿಸಬೇಕಿದ್ದಿತು. ಸೂಕ್ತವೆಂದರೆ, ಬೇಡಿಕೆ, ಸಂಗ್ರಹ ಮತ್ತು ಬಾಕಿ ತ:ಖ್ತೆಯು ಡಿಎಂಎಫ್ ಪಾವತಿಸಬೇಕಿರುವ ಕೊಡುಗೆಗಳ ಕಾರಣದಿಂದಾಗಿ ಗುತ್ತಿಗೆ ಹಿಡುವಳಿದಾರರುಗಳಿಂದ ವಸೂಲಾತಿಗೆ ಸಂಚಿತಗೊಂಡಿರುವ ಮೊತ್ತ ಹಾಗೂ ಸಂಗ್ರಹಣೆಗಳನ್ನು ಕೂಡ ಒಳಗೊಂಡಿರತಕ್ಕದ್ದು. ಆದಾಗ್ಯೂ, ಬೇಡಿಕೆ, ಸಂಗ್ರಹ ಮತ್ತು ಬಾಕಿ ತ:ಖ್ತೆಯು ಡಿಎಂಎಫ್ ಪಾವತಿಸಬೇಕಿರುವ ಕೊಡುಗೆಗಳ ಗುತ್ತಿಗೆ ಹಿಡುವಳಿದಾರರುಗಳಿಂದ ವಸೂಲಾತಿಗಾಗಿ ಸಂಚಿತಗೊಂಡಿರುವ ಮೊತ್ತ ಹಾಗೂ ಸಂಗ್ರಹಣೆಗಳ ವಿವರಗಳನ್ನು ಒಳಗೊಂಡಿರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಅಂತಹ ಮಾಹಿತಿಯ ಅನುಪಸ್ಥಿತಿಯಲ್ಲಿ, ಗುತ್ತಿಗೆ ಹಿಡುವಳಿದಾರರುಗಳಿಂದ ಡಿಎಂಎಫ್‌ಟಿಯ ಬಾಕಿ ಮತ್ತು ಸಂಗ್ರಹಣೆಗಳ ನಿಖರತೆಯನ್ನು ಇಲಾಖೆ ಹೇಗೆ ಪರಿಶೀಲಿಸಿದೆ ಎಂಬುದನ್ನು ಲೆಕ್ಕಪರಿಶೋಧನೆಯು ಖಚಿತಪಡಿಸಿಕೊಳ್ಳಲಾಗಲಿಲ್ಲ.

ಡಿಎಂಎಫ್ ಪಾವತಿಸಬೇಕಿರುವ ಕೊಡುಗೆಗಳ ವಿವರಗಳನ್ನು ಒಳಗೊಂಡಂತೆ ಬೇಡಿಕೆ, ಸಂಗ್ರಹ ಮತ್ತು ಬಾಕಿ (ಡಿಸಿಬಿ) ತ:ಖ್ತೆಯನ್ನು ಇನ್ನು ಮುಂದೆ ತಯಾರಿಸಲಾಗುವುದು ಎಂಬುದಾಗಿ ಸರ್ಕಾರವು ತಿಳಿಸಿತು (ಆಗಸ್ಟ್ 2024).

ಶಿಫಾರಸು:

3. ಸಮಗ್ರತೆ ಮತ್ತು ನಿಖರತೆಯನ್ನು ಖಚಿತಪಡಿಸಿಕೊಳ್ಳಲು ಡಿಎಂಎಫ್ ಬಾಕಿಗಳು ಮತ್ತು ಸಂಗ್ರಹಗಳನ್ನು ಬೇಡಿಕೆ, ಸಂಗ್ರಹ ಮತ್ತು ಬಾಕಿ ತ:ಖ್ತೆಯಲ್ಲಿಯೂ ಪ್ರತಿಬಿಂಬಿಸಬೇಕು.

3.5 ಕಾಮಗಾರಿಗಳನ್ನು ಕಾರ್ಯಗತಗೊಳಿಸುವ ಇಲಾಖೆಗಳು/ಸಂಸ್ಥೆಗಳು (WEDAs) ಡಿಎಂಎಫ್ ಕೊಡುಗೆಯನ್ನು ಕಡಿತಗೊಳಿಸದಿರುವುದು

ಎಲ್ಲಾ ಸರ್ಕಾರಿ ಇಲಾಖಾ ಕಾಮಗಾರಿಗಳಿಗೆ ಅಗತ್ಯವಿರುವಂತಹ ಅಪ್ರಧಾನ ಖನಿಜಗಳಿಗಾಗಿ ಕರ್ನಾಟಕ ಅಪ್ರಧಾನ ಖನಿಜ ರಿಯಾಯಿತಿ ನಿಯಮಗಳ ನಿಯಮ 3ಬಿ ಅಡಿಯಲ್ಲಿ ವಿಶೇಷ ಅನುವುಗಳನ್ನು ಮಾಡಲಾಗಿರುವುದು, ಇದು ಪ್ರಮುಖ ಮೂಲಸೌಕರ್ಯ ಯೋಜನೆಗಳನ್ನು ಕಾರ್ಯಗತಗೊಳಿಸುವಂತಹ ಸಂಬಂಧಿತ ಸರ್ಕಾರಿ ಇಲಾಖೆ/ನಿಗಮ/ಪ್ರಾಧಿಕಾರವು ರಾಜಧನ ಮತ್ತು ಡಿಎಂಎಫ್ ಕೊಡುಗೆಗಳನ್ನು ಗುತ್ತಿಗೆದಾರರುಗಳ ಕಾಮಗಾರಿ ಬಿಲ್ಲುಗಳಿಂದ ಮೂಲದಲ್ಲಿಯೇ ಕಡಿದುಕೊಳ್ಳುವ ಷರತ್ತಿನೊಂದಿಗೆ, ಅಪ್ರಧಾನ ಖನಿಜಗಳ ತಮ್ಮ ಅಗತ್ಯತೆ ಹಾಗೂ ಅವುಗಳ ಸಾಗಾಣಿಕೆಗಾಗಿ ರಾಜಧನ ವಿನಾಯಿತಿ ಹೊಂದಿರುವ ಖನಿಜ ರವಾನೆ ಪರವಾನಿಗೆಯೊಂದಿಗೆ (ಎಮ್‌ಡಿಪಿ) ಗಣಿಗಾರಿಕೆ ಗುತ್ತಿಗೆಯನ್ನು ಅಥವಾ ಪರವಾನಿಗೆಗಳನ್ನು ಪಡೆಯಬಹುದು ಎಂಬುದಾಗಿ ತಿಳಿಸುತ್ತವೆ. ಇದಲ್ಲದೆ, ಡಿಸೆಂಬರ್ 2019ರ ಸುತ್ತೋಲೆಯ ಪ್ರಕಾರ, ಗುತ್ತಿಗೆದಾರರು ಕಾಮಗಾರಿಗಳು/ಯೋಜನೆಗಳಲ್ಲಿ ಬಳಸಲಾದ ಖನಿಜಗಳಿಗೆ ಎಮ್‌ಡಿಪಿ ಸಲ್ಲಿಸದಿದ್ದರೆ, ರಾಜಧನದ ಮೇಲೆ ಶೇಕಡ 30ರಷ್ಟು ಡಿಎಂಎಫ್ ಕೊಡುಗೆಗಳ ಕಡೆಗೆ ವಸೂಲಾತಿ ಮಾಡುವಂತೆ ನಿರ್ದೇಶಕರು,

[12] ಖನಿಜ ಸಾಗಣೆಗಾಗಿ ಪರವಾನಗಿಗಳ ನೀಡುವಿಕೆ, ಗುತ್ತಿಗೆ ಹಿಡುವಳಿದಾರರು ನಿಯತಕಾಲಿಕವಾಗಿ ಸಲ್ಲಿಕೆಗಳನ್ನು ಸಲ್ಲಿಸುವಿಕೆ ಪ್ರಕ್ರಿಯೆಗಳನ್ನು ಸ್ವಯಂಚಾಲಿತಗೊಳಿಸುವ ಸಲುವಾಗಿ ಒಂದು ಜಾಲ–ಆಧಾರಿತ ತಂತ್ರಾಂಶ ಅನ್ವಯವಾಗಿರುವಂತಹ ಸಮಗ್ರ ಗುತ್ತಿಗೆ ನಿರ್ವಹಣಾ ವ್ಯವಸ್ಥೆ (ಇಂಟೆಗ್ರೇಟೆಡ್ ಲೀಸ್ ಮ್ಯಾನೇಜ್‌ಮೆಂತ್ ಸಿಸ್ಟಮ್).

ಗಣಿಗಳು ಮತ್ತು ಭೂವಿಜ್ಞಾನ ಇಲಾಖೆ, ಇವರು, ಕಾಮಗಾರಿಗಳನ್ನು ಕಾರ್ಯಗತಗೊಳಿಸುವ ಇಲಾಖೆಗಳು/ಪ್ರಾಧಿಕಾರಗಳಿಗೆ ನಿರ್ದೇಶಿಸಿರುವರು.

ಪರೀಕ್ಷಾ-ಪರಿಶೀಲನೆ ಮಾಡಲಾದ ಐದು ಜಿಲ್ಲೆಗಳಲ್ಲಿ 2020-21ರಿಂದ 2022-23ರ ಅವಧಿಯಲ್ಲಿ ಕಾಮಗಾರಿಗಳನ್ನು ಕಾರ್ಯಗತಗೊಳಿಸುವ ಇಲಾಖೆಗಳು/ಪ್ರಾಧಿಕಾರಗಳು ರಾಜಧನದ ಕಡೆಗೆ ₹ 393.27 ಕೋಟಿ[13] ಮೊತ್ತವನ್ನು ಪಾವತಿಸಿದ್ದವು. ಮುಂದುವರೆದು, ₹ 388.31 ಕೋಟಿ[14] ಮೊತ್ತದಷ್ಟು ರಾಜಧನವನ್ನು ಖಜಾನೆ ವರ್ಗಾವಣೆ ರಸೀದಿ (ಟಿಟಿಆರ್)[15] ಮೂಲಕ ವಸೂಲಾತಿ ಮಾಡಿರುವುದಾಗಿ ಪರೀಕ್ಷಾ-ಪರಿಶೀಲನೆ ಮಾಡಲಾದ ಮೂರು ಜಿಲ್ಲೆಗಳಲ್ಲಿ ತೋರಿಸಲಾಗಿದ್ದಿತು. ಆ ರೀತಿಯಲ್ಲಿ ಸಂಗ್ರಹಿಸಲಾದ ರಾಜಧನದಿಂದ ಸ್ವೀಕರಿಸಬೇಕಿದ್ದಂತಹ ಡಿಎಂಎಫ್ ₹ 78.15 ಕೋಟಿ (ರಾಜಧನದ ಶೇಕಡಾ 10ರ ದರದಲ್ಲಿ ಲೆಕ್ಕಹಾಕಿದಲ್ಲಿ) ಹಾಗೂ ₹ 234.47 ಕೋಟಿ (ರಾಜಧನದ ಶೇಕಡಾ 30ರ ದರದಲ್ಲಿ ಲೆಕ್ಕಹಾಕಿದಲ್ಲಿ) ವ್ಯಾಪ್ತಿಯಲ್ಲಿರುತ್ತದೆ.

ಆದಾಗ್ಯೂ, ಇಲಾಖೆಯಾಗಲೀ ಅಥವಾ ಡಿಎಂಎಫ್‌ಟಿಗಳಾಗಲೀ, ಡಿಎಂಎಫ್ ಕೊಡುಗೆಗಳನ್ನು ಕಾಮಗಾರಿಗಳನ್ನು ಕಾರ್ಯಗತಗೊಳಿಸುವ ಇಲಾಖೆಗಳು/ಪ್ರಾಧಿಕಾರಗಳು ಮೂಲದಲ್ಲಿಯೇ ಕಡಿದುಕೊಂಡಿದ್ದವೇ ಹಾಗೂ ಪಾವತಿಸಿದ್ದವೇ ಎಂಬುದರ ಬಗ್ಗೆ ಖಚಿತಪಡಿಸಿಕೊಳ್ಳಲು ಸಾಧ್ಯವಾಗಲಿಲ್ಲ. ಕಾಮಗಾರಿಗಳನ್ನು ಕಾರ್ಯಗತಗೊಳಿಸುವ ಇಲಾಖೆಗಳು/ಪ್ರಾಧಿಕಾರಗಳು ಉಪಯೋಗಿಸಲಾದ ಅಪ್ರಧಾನ ಖನಿಜಗಳು ಕಡಿತಗೊಳಿಸಲಾದ ರಾಜಧನ ಮತ್ತು (ಡಿಎಂಎಫ್‌ಗಳ) ವಿವರಗಳನ್ನೊಳಗೊಂಡ ಸಲ್ಲಿಕೆಗಳನ್ನು ಪಡೆಯುವ ವ್ಯವಸ್ಥೆಯಿರಲಿಲ್ಲ.

ರಾಜಧನದ ಮೇಲೆ ಡಿಎಂಎಫ್ ಕೊಡುಗೆಗಳನ್ನು ವಸೂಲಾತಿ ಮಾಡದಿರುವ ಬಗ್ಗೆ ತಿಳಿಸುವ (ನವೆಂಬರ್ 2023) ಮೂಲಕ (ಚಿತ್ರದುರ್ಗ ಜಿಲ್ಲೆಯಲ್ಲಿ) ಕಾಮಗಾರಿಗಳನ್ನು ಕಾರ್ಯಗತಗೊಳಿಸುವ ಇಲಾಖೆಗಳು/ಪ್ರಾಧಿಕಾರಗಳಿಂದ ಡಿಎಂಎಫ್ ಕೊಡುಗೆಗಳನ್ನು ವಸೂಲಾತಿ ಮಾಡಲು ಕ್ರಮವನ್ನು ಕೈಗೊಳ್ಳಲಾಗಿರುವುದು ಎಂಬುದಾಗಿ ಸರ್ಕಾರವು ಉತ್ತರಿಸಿತು (ಆಗಸ್ಟ್ 2024). ಮುಂದುವರೆದು, ಡಿಎಂಎಫ್ ಕೊಡುಗೆಗಳ ಸಂಗ್ರಹಣೆಯನ್ನು ಮೇಲ್ವಿಚಾರಣೆ ಮಾಡುವ ಸಲುವಾಗಿ ಒಂದು ತಂಡವನ್ನು (ಗದಗ್ ಜಿಲ್ಲೆಯಲ್ಲಿ) ರಚಿಸುವಂತೆ ಒಂದು ಸುತ್ತೋಲೆಯನ್ನು (ನವಂಬರ್ 2023) ನೀಡಲಾಗಿರುವುದು ಎಂಬುದಾಗಿಯೂ ತಿಳಿಸಿತು. ಆದಾಗ್ಯೂ, ಉಳಿದ ಮೂರು ಜಿಲ್ಲೆಗಳಿಗೆ ಸಂಬಂಧಿಸಿದಂತೆ ಯಾವುದೇ ನಿರ್ದಿಷ್ಟ ನಿರ್ದೇಶನಗಳನ್ನು ನೀಡಿರಲಿಲ್ಲ. ಈ ನಿಟ್ಟಿನಲ್ಲಿ ಎಲ್ಲಾ ಜಿಲ್ಲೆಗಳಲ್ಲಿಯೂ ಕ್ರಮಗಳನ್ನು ಕೈಗೊಳ್ಳುವುದನ್ನು ಸರ್ಕಾರವು ಖಚಿತಪಡಿಸಿಕೊಳ್ಳುವ ಅಗತ್ಯತೆಯಿರುವುದು.

ಶಿಫಾರಸು:

4. **ಬಾಕಿಗಳನ್ನು ಕಡಿತಗೊಳಿಸಿ ಸರಿಯಾಗಿ ರವಾನಿಸಲಾಗಿದೆಯೆ ಎಂದು ಖಚಿತಪಡಿಸಿಕೊಳ್ಳಲು, ರಾಜಧನ, ದಂಡ, ಹಾಗೂ ಡಿಎಂಎಫ್‌ಗೆ ನೀಡಿದ ಕೊಡುಗೆಯ ವಿವರಗಳನ್ನು ಸೂಚಿಸುವ ಕಾಮಗಾರಿಗಳನ್ನು ಕಾರ್ಯಗತಗೊಳಿಸುವ ಇಲಾಖೆಗಳು, ಪ್ರಾಧಿಕಾರಗಳಿಂದ ಸಲ್ಲಿಕೆಗಳನ್ನು ಪಡೆದುಕೊಳ್ಳುವಂತಹ ಒಂದು ಸಮರ್ಪಕವಾದಂತಹ ವ್ಯವಸ್ಥೆಯನ್ನು ರೂಪಿಸತಕ್ಕದ್ದು.**

ಶಿಫಾರಸನ್ನು ಒಪ್ಪಿಕೊಳ್ಳುವ ವೇಳೆಯಲ್ಲಿ, ಸರ್ಕಾರದ ಕಾಮಗಾರಿಗಳನ್ನು ಕಾರ್ಯಗತಗೊಳಿಸುವ ಇಲಾಖೆಗಳಿಂದ ಡಿಎಂಎಫ್ ಕೊಡುಗೆಗಳ ಸಂಗ್ರಹಣೆಯನ್ನು ಮೇಲ್ವಿಚಾರಣೆ ಮಾಡುವ ಸಲುವಾಗಿ ಒಂದು ಸೂಕ್ತವಾದಂತಹ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸಲಾಗುವುದು ಎಂಬುದಾಗಿ ಸರ್ಕಾರವು ಉತ್ತರಿಸಿತು (ಆಗಸ್ಟ್ 2024).

[13] ಬಳ್ಳಾರಿ – ₹ 32.45 ಕೋಟಿ, ಬೆಂಗಳೂರು (ನಗರ) – ₹ 251.04 ಕೋಟಿ, ಚಿತ್ರದುರ್ಗ – ₹ 75.55 ಕೋಟಿ, ವಿಜಯನಗರ – ₹ 15.92 ಕೋಟಿ ಮತ್ತು ಗದಗ – ₹ 20.31 ಕೋಟಿ

[14] ಬೆಂಗಳೂರು (ನಗರ) - ₹ 319.85 ಕೋಟಿ, ಚಿತ್ರದುರ್ಗ - ₹ 31.79 ಕೋಟಿ ಮತ್ತು ಗದಗ - ₹ 36.67 ಕೋಟಿ.

[15] ಟಿಟಿಆರ್ – ಖಜಾನೆಯಿಂದ / ಬ್ಯಾಂಕಿನಿಂದ ಹಣಕಾಸನ್ನು ಹೊರಸೆಳೆಯುವ ಮತ್ತು ವಿತರಣೆ ಮಾಡುವ ಅಧಿಕಾರಿಯವರು ತಮ್ಮ ಲೆಕ್ಕ ಸೇವಾ ಶೀರ್ಷಿಕೆಯಿಂದ ಇತರೆ ಯಾವುದೇ ಲೆಕ್ಕ ಶೀರ್ಷಿಕೆಗೆ ಮೊತ್ತವನ್ನು ವರ್ಗಾವಣೆ ಮಾಡುವ ಸಂದರ್ಭದಲ್ಲಿ ಉಪಯೋಗಿಸುವರು.

3.6 ಅಕ್ರಮವಾಗಿ ಸಾಗಿಸಲಾದ ಖನಿಜಗಳ ಮೇಲೆ ಡಿಎಂಎಫ್ ಸಂಗ್ರಹಿಸದಿರುವುದು

ಕಲ್ಲುಗಣಿ ಗುತ್ತಿಗೆ ಹಿಡುವಳಿದಾರರುಗಳು ಅಥವಾ ಪರವಾನಿಗೆದಾರರುಗಳು ಹೊರತೆಗೆಯಲಾದಂತಹ ಅಥವಾ ಉಪಯೋಗಿಸಲಾದಂತಹ ಖನಿಜಗಳ ಮೇಲೆ ರಾಜಧನದ ಒಂದು ಶೇಕಡಾವಾರಿನಂತೆ ರಾಜಧನ ಮತ್ತು ಡಿಎಂಎಫ್ ಕೊಡುಗೆಗಳನ್ನು ಪಾವತಿಸುವ ಅಗತ್ಯತೆಯಿರುತ್ತದೆ ಎಂಬುದಾಗಿ ಕರ್ನಾಟಕ ಅಪ್ರಧಾನ ಖನಿಜ ರಿಯಾಯಿತಿ ನಿಯಮ, 1994 ನಿಯಮಗಳು 36, 36ಎ, 42 ಮತ್ತು 44 ನಿರ್ದಿಷ್ಟಪಡಿಸಿರುತ್ತವೆ. ಗಣಿಯಿಂದ ಖನಿಜಗಳನ್ನು ಸಾಗಾಣಿಕೆ ಮಾಡುವ ಸಲುವಾಗಿ ರಾಜಧನ ಪಾವತಿಯನ್ನು ಮಾಡಿದನಂತರದಲ್ಲಿ ಎಂಡಿಪಿ ಪಡೆದುಕೊಳ್ಳಬೇಕಿದ್ದಿತು. ಎಂಡಿಪಿ ಇಲ್ಲದೆಯೇ ಖನಿಜಗಳ ಸಾಗಣೆಗೆ ಮೊದಲ ಬಾರಿಗೆ ರವಾನಿಸಲಾದ ಖನಿಜದ ಮೇಲೆ ಪಾವತಿಸಬೇಕಾದ ರಾಜಧನದ ಐದು ಪಟ್ಟು ದಂಡವನ್ನು ವಿಧಿಸಲಾಗುತ್ತದೆ ಮತ್ತು ಪುನರಾವರ್ತಿತ ಅಪರಾಧಗಳು ಗುತ್ತಿಗೆಯನ್ನು ಅಂತ್ಯಗೊಳಿಸುವಲ್ಲಿ ಪರಿಣಮಿಸಬಹುದು.

2018–19ರಿಂದ 2021–22[16], ಸಾಲುಗಳಿಗೆ ಪರೀಕ್ಷಾ-ಪರಿಶೀಲನೆ ಮಾಡಲಾದಂಥ ಜಿಲ್ಲೆಗಳಲ್ಲಿ ಇಲಾಖೆಯು ನಿರ್ವಹಿಸಲಾಗಿದ್ದಂತಹ ಬೇಡಿಕೆ, ಸಂಗ್ರಹ ಮತ್ತು ಬಾಕಿ (ಡಿಸಿಬಿ) ತ:ಖ್ತೆಯನ್ನು ಪರಿಶೀಲಿಸಲಾಗಿ, ಇಲಾಖೆಯು ಪರವಾನಿಗೆದಾರರುಗಳು ಖನಿಜ ರವಾನೆ ಪರವಾನಿಗಳಿಲ್ಲದೆಯೇ ಅಪ್ರಧಾನ ಖನಿಜಗಳ ರವಾನೆ ಮಾಡಿರುವುದಕ್ಕಾಗಿ ₹ 516.60 ಕೋಟಿ ಮೊತ್ತದ ದಂಡವನ್ನು ವಿಧಿಸಲಾಗಿದ್ದಿತು ಎಂಬುದನ್ನು ಗಮನಿಸಲಾಯಿತು. ಆದಾಗ್ಯೂ, ಪರವಾನಗಿ ಹೊಂದಿರುವವರಿಂದ ಹೊರತೆಗೆಯಲಾಗಿದ್ದಂತಹ ಖನಿಜಗಳ ಮೇಲೆ ರಾಜಧನ ಮತ್ತು ಡಿಎಂಎಫ್ ಕೊಡುಗೆಗಳನ್ನು ₹ 14.16 ಕೋಟಿಯಷ್ಟು ಮೊತ್ತ ಪಾವತಿಸುವಂತೆ ಕೋರಲಾಗಿರಲಿಲ್ಲ. ವಿಧಿಸಲಾಗಿದ್ದ ದಂಡ, ರಾಜಧನವನ್ನು ವಿಧಿಸದಿದ್ದುದು ಮತ್ತು ಡಿಎಂಎಫ್‌ಗೆ ಸಂಬಂಧಿಸಿದಂತೆ ವಿಧಿಸದಿದ್ದಂತಹ ಕೊಡುಗೆ, ಇವುಗಳ ವಿವರಗಳನ್ನು ಈ ಕೆಳಗೆ ಕೋಷ್ಟಕದ ರೂಪದಲ್ಲಿ ನೀಡಲಾಗಿರುವುದು.

ಕೋಷ್ಟಕ ಸಂಖ್ಯೆ 3.3: ವಿಧಿಸಲಾದ ದಂಡ, ರಾಜಧನ ಮತ್ತು ಡಿಎಂಎಫ್ ಅನ್ನು ಸಂಗ್ರಹಿಸದಿರುವ ವಿವರಗಳನ್ನು ತೋರಿಸುವ ತ:ಖ್ತೆ

(₹ ಕೋಟಿಗಳಲ್ಲಿ)

ಕ್ರಮ ಸಂ	ಜಿಲ್ಲೆ	ವಿಧಿಸಲಾಗಿದ್ದ ದಂಡ	ಸಂಗ್ರಹಿಸದಿದ್ದಂತಹ ರಾಜಧನ	ಡಿಎಂಎಫ್ ಸಂಗ್ರಹಿಸದಿದ್ದುದು
1	ಬಳ್ಳಾರಿ	19.67	3.93	1.18
2	ಬೆಂಗಳೂರು ನಗರ	24.27	4.87	1.29
3	ಚಿತ್ರದುರ್ಗ	313.11	62.62	10.19
4	ಗದಗ	22.05	4.31	0.46
5	ವಿಜಯನಗರ	137.50	5.93	1.04
	ಒಟ್ಟು	**516.60**	**81.66**	**14.16**

ಮೂಲ: ಇಲಾಖೆಯು ಒದಗಿಸಿದ ಮಾಹಿತಿಯಂತೆ

ಕರ್ನಾಟಕ ಅಪ್ರಧಾನ ಖನಿಜ ರಿಯಾಯಿತಿ ನಿಯಮಗಳು, 1994ರ ನಿಯಮ 44 (4) ಕಾನೂನುಬಾಹಿರ ಗಣಿಗಾರಿಕೆ ಹಾಗೂ ಸಾಗಾಣಿಕೆಗಾಗಿ ರಾಜಧನದ ಐದು ಪಟ್ಟು ದಂಡ ವಸೂಲಾತಿಯನ್ನು ನಿರ್ದಿಷ್ಟಪಡಿಸಿರುತ್ತದೆಯೇ ಹೊರತು ಡಿಎಂಎಫ್ ಕೊಡುಗೆಗಳ ಸಂಗ್ರಹಣೆಗೆ ಅನುವು ಮಾಡಿರುವುದಿಲ್ಲ ಎಂಬುದಾಗಿ ಸರ್ಕಾರವು ಉತ್ತರಿಸಿತು (ಆಗಸ್ಟ್ 2024). ಪಾವತಿಸಬೇಕಿರುವ ರಾಜಧನದ ಒಂದು ಶೇಕಡಾವಾರಿನಂತೆ ಡಿಎಂಎಫ್ ಕೊಡುಗೆಗಳನ್ನು ಸಂಗ್ರಹಿಸಬೇಕಿದ್ದಿತಾದ್ದರಿಂದ ಹಾಗೂ ಖನಿಜಗಳನ್ನು ಹೊರತೆಗೆದಾಗ ಅಥವಾ ಉಪಯೋಗಿಸಿದಾಗ ರಾಜಧನವನ್ನು ಪಾವತಿಸಬೇಕಿದ್ದಿತಾದ್ದರಿಂದ (ನಿಯಮ 36) ಉತ್ತರವು ಒಪ್ಪುವಂತಿಲ್ಲ. ಈ ರೀತಿಯಾಗಿ, ಇಲಾಖೆಯು ಖನಿಜಗಳ ಅಕ್ರಮ ಗಣಿಗಾರಿಕೆಗಾಗಿ ಹಾಗೂ ಅವುಗಳ ಸಾಗಾಣಿಕೆಗಾಗಿ ದಂಡವನ್ನು ವಿಧಿಸುವ ವೇಳೆಯಲ್ಲಿ ರಾಜಧನವನ್ನು ಪಾವತಿಸುವಂತೆ ಒತ್ತಾಯಿಸಲಿಲ್ಲ/ಸಂಗ್ರಹಿಸಲಿಲ್ಲ ಹಾಗೂ ಇದರ ತತ್ಪರಿಣಾಮವಾಗಿ ಅದರ ಮೇಲಿನ ಡಿಎಂಎಫ್ ಕೊಡುಗೆಗಳನ್ನು ವಸೂಲಾತಿ ಮಾಡಿರಲಿಲ್ಲ.

[16] 2022–23 ಸಾಲಿಗೆ ಬೇಡಿಕೆ, ಸಂಗ್ರಹ ಮತ್ತು ಬಾಕಿ (ಡಿಸಿಬಿ) ತ:ಖ್ತೆಯನ್ನು ಕ್ಷೇತ್ರ ಲೆಕ್ಕಪರಿಶೋಧನೆಯನ್ನು ಮಾಡುವ ವೇಳೆಯಲ್ಲಿ (ಅಕ್ಟೋಬರ್ 2023) ತಯಾರಿಸಲಾಗುತಿತ್ತು.

ಅಧ್ಯಾಯ – IV

ಡಿಎಂಎಫ್‌ಟಿಗಳಲ್ಲಿ ಲೆಕ್ಕವನ್ನಿಡುವಿಕೆಯಲ್ಲಿನ ನಿರ್ವಹಣೆ, ಹೊಣೆಗಾರಿಕೆ ಮತ್ತು ಪಾರದರ್ಶಕತೆ ವ್ಯವಸ್ಥೆ

ಅಧ್ಯಾಯ IV

ಡಿಎಂಎಫ್‌ಟಿಗಳಲ್ಲಿ ಲೆಕ್ಕವನ್ನಿಡುವಿಕೆಯಲ್ಲಿನ ನಿರ್ವಹಣೆ, ಹೊಣೆಗಾರಿಕೆ ಮತ್ತು ಪಾರದರ್ಶಕತೆ ವ್ಯವಸ್ಥೆ

ಡಿಎಂಎಫ್‌ಟಿ ಕೊಡುಗೆಗಳನ್ನು ಚಾಲ್ತಿಯಲ್ಲಿದ್ದಂತಹ ಬಡ್ಡಿ ದರಗಳನ್ನು ಕಡೆಗಣಿಸಿದಂತೆ ಖಜಾನೆಯಲ್ಲಿನ ವೈಯಕ್ತಿಕ ಠೇವಣಿ ಖಾತೆಗಳಲ್ಲಿ (ಪರ್ಸನಲ್ ಡೆಪಾಸಿಟ್ ಅಕೌಂಟ್ಸ್) ನಿರುಪಯುಕ್ತವಾಗಿ ಇಡಲಾಗಿದ್ದಿತು. ಡಿಎಂಎಫ್‌ಟಿ, ಬಳ್ಳಾರಿ, ಇದು ಒದಗಿಸಿದ್ದಂತಹ ಹಣಕಾಸಿನ ಮೇಲೆ ಸಂಚಿತಗೊಂಡಿದ್ದಂತಹ ಬಡ್ಡಿಯನ್ನು ಕಾರ್ಯಗತಗೊಳಿಸುವ ಸಂಸ್ಥೆಗಳು ಪಾವತಿಸಿರದ ದೃಷ್ಟಾಂತವಿದ್ದಿತು. ದತ್ತಿ ನಿಧಿ ಅಥವಾ ಹಣಕಾಸನ್ನು ನಿಶ್ಚಿತ ಅವಧಿ ಠೇವಣಿಗಳಲ್ಲಿ ಸಮಯೋಚಿತವಾಗಿ ಹೂಡಿಕೆ ಮಾಡುವಲ್ಲಿ ಡಿಎಂಎಫ್‌ಟಿ, ಬಳ್ಳಾರಿ, ಇದರ ಉದಾಸೀನತೆಯು ಗಳಿಸಬಹುದಾಗಿದ್ದಂತಹ ಬಡ್ಡಿಯು ನಷ್ಟವಾಗುವಲ್ಲಿ ಪರಿಣಮಿಸಿದ್ದಿತು.

ರಾಜ್ಯ ಮಟ್ಟದ ಮೇಲ್ವಿಚಾರಣಾ ಸಮಿತಿಯ ರಚನೆಯ ದಿನಾಂಕದಿಂದಲೂ ಅದರ ಸಭೆಗಳನ್ನು ನಡೆಸಿರುವುದಿಲ್ಲ. ಡಿಎಂಎಫ್‌ಟಿಗಳು ಹಾಗೂ ವ್ಯವಸ್ಥಾಪನಾ ಸಮಿತಿಗಳ ಕಡೆಯಿಂದ ಯೋಜನೆಗಳು ಮತ್ತು ಕಾರ್ಯಕ್ರಮಗಳ ಪ್ರಗತಿಯನ್ನು ಮೇಲ್ವಿಚಾರಣೆ ಮಾಡುವ ಸಲುವಾಗಿ ಮತ್ತು ಸಮೀಕ್ಷಿಸುವ ಸಲುವಾಗಿ ಒಂದು ವರ್ಷದಲ್ಲಿ ಕಡ್ಡಾಯವಾಗಿ ನಡೆಸಬೇಕಿದ್ದಂತಹ ಕನಿಷ್ಠ ಪಕ್ಷ ಮೂರು ಸಭೆಗಳಿಗೆ ಪ್ರತಿಯಾಗಿ ಮುಖ್ಯ ಕಾರ್ಯದರ್ಶಿಯವರ ನೇತೃತ್ವದಲ್ಲಿರುವಂತಹ ರಾಜ್ಯ ಮಟ್ಟದ ಅಧಿಕಾರಯುಕ್ತ ಸಮಿತಿಯ ನಾಲ್ಕು ಸಭೆಗಳನ್ನು ಮಾತ್ರ ನಡೆಸಲಾಗಿದ್ದಿತು. ಪರೀಕ್ಷಾ–ಪರಿಶೀಲನೆ ಮಾಡಲಾದ ಜಿಲ್ಲೆಗಳಲ್ಲಿ, ಪ್ರತಿಷ್ಠಾನ ಟ್ರಸ್ಟುಗಳು ಹಾಗೂ ವ್ಯವಸ್ಥಾಪನಾ ಸಮಿತಿಗಳು ನಿರ್ದಿಷ್ಟ ಸಂಖ್ಯೆಯ ಸಭೆಗಳನ್ನು ನಡೆಸಿರಲಿಲ್ಲ. ಆದ್ದರಿಂದ, ಡಿಎಂಎಫ್‌ಟಿ ಕಾರ್ಯಚಟುವಟಿಕೆಗಳ ಮೇಲ್ವಿಚಾರಣೆಯಲ್ಲಿ ಕೊರತೆಗಳಿರುವುದನ್ನು ಲೆಕ್ಕಪರಿಶೋಧನೆಯು ಗಮನಿಸಿತು.

4.1 *ಡಿಎಂಎಫ್‌ಟಿ ಕೊಡುಗೆಗಳನ್ನು ಖಜಾನೆಯಲ್ಲಿನ ವೈಯಕ್ತಿಕ ಠೇವಣಿ ಖಾತೆಗಳಲ್ಲಿ ನಿರುಪಯುಕ್ತವಾಗಿ ಇಡಲಾಗಿದ್ದುದು*

ಕರ್ನಾಟಕ ಸರ್ಕಾರದ ನಿರ್ದೇಶನಗಳ ಅನುಸಾರ (ಜನವರಿ 2016) ಸಂಗ್ರಹಿಸಲಾದಂತಹ ಡಿಎಂಎಫ್ ಕೊಡುಗೆಗಳನ್ನು ಜಿಲ್ಲಾ ಖಜಾನೆಯಲ್ಲಿನ ವೈಯಕ್ತಿಕ ಠೇವಣಿ ಖಾತೆಗಳಲ್ಲಿ ಠೇವಣಿ ಇಡಬೇಕಿದ್ದಿತು. ಡಿಎಂಎಫ್‌ಟಿ ನಿಯಮಗಳಿಗೆ ಮಾಡಲಾದ ತಿದ್ದುಪಡಿಯ (ಮಾರ್ಚ್ 2018) ಪರಿಣಾಮವಾಗಿ ಪ್ರತಿಯೊಂದು ಡಿಎಂಎಫ್‌ಟಿ ಯಾವುದೇ ರಾಷ್ಟ್ರೀಕೃತ ಬ್ಯಾಂಕಿನಲ್ಲಿ ಪ್ರತ್ಯೇಕ ಬ್ಯಾಂಕು ಖಾತೆ ನಿರ್ವಹಿಸಲು ಅನುವು ಮಾಡಲಾಗಿದ್ದಿತು. ಮುಂದುವರೆದು, ಖಜಾನೆಯಲ್ಲಿನ ವೈಯಕ್ತಿಕ ಠೇವಣಿ ಖಾತೆಗಳಲ್ಲಿ ಇರುವಂತಹ ಡಿಎಂಎಫ್ ಕೊಡುಗೆಗಳನ್ನು ಬ್ಯಾಂಕು ಖಾತೆಗಳಿಗೆ ವರ್ಗಾಯಿಸಿದನಂತರ ಖಜಾನೆಯಲ್ಲಿನ ವೈಯಕ್ತಿಕ ಠೇವಣಿ ಖಾತೆಗಳನ್ನು ಮುಚ್ಚುವಂತೆ ಕರ್ನಾಟಕ ಸರ್ಕಾರವು ನಿರ್ದೇಶಿಸಿತು (ಜೂನ್ 2018).

ಪರೀಕ್ಷಾ–ಪರಿಶೀಲನೆ ಮಾಡಲಾದಂತಹ ಮೂರು ಜಿಲ್ಲೆಗಳಲ್ಲಿ ₹ 98.86 ಕೋಟಿ[17] ಮೊತ್ತವು ವೈಯಕ್ತಿಕ ಠೇವಣಿ ಖಾತೆಗಳಲ್ಲಿ ಜುಲೈ 2018ರಿಂದ ಮಾರ್ಚ್ 2023ರವರೆವಿಗೂ ಇನ್ನೂ ಇದ್ದಿತು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ರಾಜ್ಯಮಟ್ಟದ ಅಧಿಕಾರಯುಕ್ತ ಸಮಿತಿ (ಆಗಸ್ಟ್ 2021 ಹಾಗೂ ಮಾರ್ಚ್ 2022) ಖಜಾನೆಗಳಲ್ಲಿ ವೈಯಕ್ತಿಕ ಠೇವಣಿ ಖಾತೆಗಳಲ್ಲಿ ಇರಿಸಿರುವಂತಹ ಹಣಕಾಸನ್ನು ಸಂಬಂಧಿತ ಬ್ಯಾಂಕು ಖಾತೆಗಳಿಗೆ ವರ್ಗಾಯಿಸುವಂತೆ ಹಣಕಾಸು ಇಲಾಖೆಗೆ ನಿರ್ದೇಶಿಸಿದ್ದರು. ಆದರೆ, ಅದನ್ನು ಪಾಲಿಸದ ಕಾರಣ (ಮಾರ್ಚ್ 2023), ಡಿಎಂಎಫ್ ಉಳಿಕೆ ಮೊತ್ತಗಳ ಮೇಲೆ ₹ 14.09 ಕೋಟಿ[18] ಮೊತ್ತದ ಸಂಭಾವ್ಯ ನಷ್ಟ ಸಂಭವಿಸುವಲ್ಲಿ ಪರಿಣಮಿಸಿರುವುದು.

ಬಳ್ಳಾರಿ ಮತ್ತು ಗದಗ ಜಿಲ್ಲೆಗಳಿಗೆ ಸಂಬಂಧಿಸಿದಂತೆ ವೈಯಕ್ತಿಕ ಠೇವಣಿ ಖಾತೆಗಳಿಂದ ಬ್ಯಾಂಕು ಖಾತೆಗಳಿಗೆ ಹಣಕಾಸಿನ ವರ್ಗಾವಣೆಗೆ ಸೂಕ್ತ ಕ್ರಮಗಳನ್ನು ಕೈಗೊಳ್ಳಲಾಗುವುದು ಹಾಗೂ ಚಿತ್ರದುರ್ಗ

[17] ಬಳ್ಳಾರಿ (₹ 37.36 ಕೋಟಿ), ಚಿತ್ರದುರ್ಗ (₹ 59.41 ಕೋಟಿ) ಮತ್ತು ಗದಗ (₹ 2.09 ಕೋಟಿ).

[18] ಜುಲೈ 2018ರಿಂದ ಮಾರ್ಚ್ 2023ರ ನಡುವೆ 57 ತಿಂಗಳುಗಳಿಗೆ ಉಳಿತಾಯ ಖಾತೆಗಳಿಗೆ ಶೇಕಡ 3ರ ದರದಲ್ಲಿ ಲೆಕ್ಕಹಾಕಲಾಗಿರುವುದು.

ಜಿಲ್ಲೆಯಲ್ಲಿ ಖಜಾನೆ ಅಂಕಿಸಂಖ್ಯೆಗಳ ಅನುಸಾರ ಉಳಿಕೆ ಮೊತ್ತದಲ್ಲಿ ವ್ಯತ್ಯಾಸವಿದ್ದಿತು ಹಾಗೂ ಈ ನಿಟ್ಟಿನಲ್ಲಿ ಯಥಾರ್ಥತೆಯಿಂದ ಕೂಡಿದ ಮೊತ್ತವನ್ನು ಖಚಿತಪಡಿಸಿಕೊಳ್ಳುವ ಸಲುವಾಗಿ ಕ್ರಮವನ್ನು ತೆಗೆದುಕೊಳ್ಳಲಾಗುವುದು ಎಂಬುದಾಗಿ ಸರ್ಕಾರವು ಉತ್ತರಿಸಿತು (ಆಗಸ್ಟ್ 2024).

4.2 *ಡಿಎಂಎಫ್‌ಟಿ ಕೊಡುಗೆಗಳ ಮೇಲೆ ಬಡ್ಡಿ ಸಂಚಯಗಳು*

ಡಿಎಂಎಫ್‌ಟಿ ಕೊಡುಗೆಗಳನ್ನು ಯಾವುದೇ ರಾಷ್ಟ್ರೀಕೃತ ಬ್ಯಾಂಕು ಖಾತೆಗಳಲ್ಲಿ ಕಾರ್ಯಾಚರಣೆಗೊಳಿಸಬಹುದು ಎಂಬುದಾಗಿ ಡಿಎಂಎಫ್‌ಟಿ ನಿಯಮಗಳು, 2016ರ ನಿಯಮ 17 ಅನುವು ಮಾಡಿರುವುದು ಹಾಗೂ ನಿಯಮ 16 ಬ್ಯಾಂಕು ಖಾತೆಯ ಮೇಲೆ ಸಂಚಿತಗೊಂಡಿರುವಂತಹ ಬಡ್ಡಿಯ ಮೊತ್ತವೂ ಸಹ ಡಿಎಂಎಫ್‌ಟಿ ಕೊಡುಗೆಗಳ ಭಾಗಗಳಲ್ಲಿ ಒಂದು ಭಾಗ ಆಗಿರುತ್ತದೆ ಎಂಬುದಾಗಿ ಅನುವು ಮಾಡಿರುವುದು.

ಡಿಎಂಎಫ್‌ಟಿ ಗಣಿಗಾರಿಕೆಯಿಂದ ತೊಂದರೆಗೆ ಈಡಾಗಿರುವಂತಹ ಪ್ರದೇಶಗಳಲ್ಲಿ ವಿವಿಧ ಮೂಲಸೌಕರ್ಯ ಅಭಿವೃದ್ಧಿ ಹಾಗೂ ಕ್ಷೇಮಾಭಿವೃದ್ಧಿ ಅಥವಾ ಕಲ್ಯಾಣ ಯೋಜನೆಗಳು ಅಥವಾ ಕಾರ್ಯಕ್ರಮಗಳಿಗಾಗಿ ಅನುಷ್ಠಾನಗೊಳಿಸುವ ಸಂಸ್ಥೆಗಳಿಗೆ ಹಣಕಾಸನ್ನು ಒದಗಿಸುವುದು. ಮೇಲೆ ತಿಳಿಸಲಾಗಿರುವ ನಿಯಮದ ಅನುಸಾರ, ಡಿಎಂಎಫ್‌ಟಿ ಒದಗಿಸಿರುವ ಹಣಕಾಸಿನ ಮೇಲೆ ಸಂಚಿತಗೊಂಡಿರುವ ಬಡ್ಡಿಯನ್ನು ಯೋಜನೆಯು ಪೂರ್ಣಗೊಂಡನಂತರ ಡಿಎಂಎಫ್‌ಟಿಗೆ ವರ್ಗಾಯಿಸತಕ್ಕದ್ದು. ಬಳ್ಳಾರಿಯಲ್ಲಿ ಅನುಷ್ಠಾನಗೊಳಿಸುವ ಸಂಸ್ಥೆಗಳ ಬ್ಯಾಂಕ್ ಖಾತೆಗಳ ಪರೀಕ್ಷಾ ಪರಿಶೀಲನೆಯಲ್ಲಿ, ಕಾರ್ಯಪಾಲಕ ಇಂಜಿನಿಯರ್, ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ಆಯುಕ್ತರು, ನಗರಪಾಲಿಕೆ ಹಾಗೂ ಸಂಡೂರು ತಾಲ್ಲೂಕಿನ ಕುರಿಕೊಪ್ಪೆಯಲ್ಲಿರುವ ಬಳ್ಳಾರಿ ಕುರಿ ಅಭಿವೃದ್ಧಿ ಮತ್ತು ತರಬೇತಿ ಕೇಂದ್ರ, 117 ಕಾಮಗಾರಿಗಳಿಗಾಗಿ ಅನುಷ್ಠಾನ ಸಂಸ್ಥೆಗಳಲ್ಲಿ ಠೇವಣಿ ಇಡಲಾಗಿದ್ದಂತಹ ₹ 68.56 ಕೋಟಿ ಮೊತ್ತದಷ್ಟು ಡಿಎಂಎಫ್‌ಟಿ ಅನುದಾನದ ಮೇಲೆ ₹ 1.31 ಕೋಟಿ ಮೊತ್ತದಷ್ಟು ಬಡ್ಡಿಯು ಸಂಚಿತಗೊಂಡಿದ್ದಿತು ಎಂದು ಲೆಕ್ಕಪರಿಶೋಧನೆಯು ಗಮನಿಸಿತು. ಡಿಎಂಎಫ್‌ಟಿ ಅನುದಾನದ ಮೇಲೆ ಗಳಿಸಲಾದಂತಹ ಬಡ್ಡಿಯು ಕಾರ್ಯಗತಗೊಳಿಸುವ ಸಂಸ್ಥೆಗಳೊಂದಿಗೆ ಉಳಿದಿದ್ದಿತು ಹಾಗೂ ಡಿಎಂಎಫ್‌ಟಿ, ಬಳ್ಳಾರಿ, ಇವರಿಗೆ ವರ್ಗಾಯಿಸಿರಲಿಲ್ಲ. ಅನುಷ್ಠಾನ ಸಂಸ್ಥೆಗಳು ಆ ಕಾಮಗಾರಿಗಳನ್ನು ಕಾರ್ಯಗತಗೊಳಿಸಲು ಮುಂಗಡವಾಗಿ ಡಿಎಂಎಫ್‌ಟಿಗಳಿಂದ ಹಣವನ್ನು ಪಡೆದಿರುವುದರಿಂದ ಈ ಸಮಸ್ಯೆ ಎಲ್ಲಾ ಜಿಲ್ಲೆಗಳಲ್ಲಿ ಕಂಡುಬರುವ ಸಂಭಾವ್ಯತೆಯಿರುವುದು.[19].

ಅನುಷ್ಠಾನಗೊಳಿಸುವ ಸಂಸ್ಥೆಗಳು ಡಿಎಂಎಫ್‌ಟಿ ಬಳ್ಳಾರಿ, ಇವರ ಖಾತೆಗೆ ₹ 2.81 ಕೋಟಿ ಮೊತ್ತವನ್ನು ಪಾವತಿಸಿರುತ್ತವೆ ಎಂಬುದಾಗಿ ಸರ್ಕಾರವು ಉತ್ತರಿಸಿತು (ಆಗಸ್ಟ್ 2024). ಆದಾಗ್ಯೂ, ಬಡ್ಡಿಯ ವಸೂಲಾತಿ ಹಾಗೂ ಇತರೆ ವಿವರಗಳನ್ನು ಲೆಕ್ಕಪರಿಸೋಧನೆಯೊಂದಿಗೆ ಹಂಚಿಕೊಳ್ಳಲಿಲ್ಲ.

ಶಿಫಾರಸು:

5. ಡಿಎಂಎಫ್‌ಟಿ ಕೊಡುಗೆಗಳ ಮೇಲೆ ಸಂಚಿತಗೊಂಡಿರುವ ಬಡ್ಡಿಯನ್ನು ನಿಯತಕಾಲಿಕವಾಗಿ ಹಾಗೂ ಖರ್ಚಾಗದೆಯೇ ಉಳಿದಿರುವ ಮೊತ್ತವನ್ನು ಪ್ರತಿಯೊಂದು ಯೋಜನೆಯು ಪೂರ್ಣಗೊಂಡನಂತರ ವರ್ಗಾಯಿಸುವ ಸಲುವಾಗಿ ಕ್ರಮವನ್ನು ಕೈಗೊಳ್ಳತಕ್ಕದ್ದು.

4.3 ಡಿಎಂಎಫ್ ಅನುದಾನಗಳ ಮರುಪಾವತಿ ಮಾಡದಿರುವುದು

ಕರ್ನಾಟಕ ಸರ್ಕಾರವು ಬಳ್ಳಾರಿ ಜಿಲ್ಲೆಯ ಸಂಡೂರು ತಾಲ್ಲೂಕಿನ ತೋರಣಗಲ್ಲಿನಲ್ಲಿ ಕೋವಿಡ್–19 ಸಾಂಕ್ರಾಮಿಕ ರೋಗವು ಹರಡುವುದನ್ನು ತಡೆಯುವ ಸಲುವಾಗಿ ಮೆ. ಜಿಂದಾಲ್ ಸ್ಟೀಲ್ ವರ್ಕ್ಸ್ ಲಿಮಿಟೆಡ್, ಇವರು ನಿರ್ಮಿಸಿರುವ 1000 ಆಮ್ಲಜನಕಯುಕ್ತ ಹಾಸಿಗೆಗಳಿಗೆ ಆರು ತಿಂಗಳ ಕಾಲ ವೈದ್ಯಕೀಯ ಸಿಬ್ಬಂದಿ, ಔಷಧಿಗಳು ಮತ್ತು ವೈದ್ಯಕೀಯ ಉಪಕರಣಗಳಿಗಾಗಿ ₹ 14.94 ಕೋಟಿ ಮೊತ್ತವನ್ನು ಖರ್ಚು ಮಾಡುವ ಸಲುವಾಗಿ ಅನುಮೋದನೆ ನೀಡಿದ್ದಿತು (ಮೇ 2021).

[19] ಲೆಕ್ಕಪರಿಶೋಧನೆಯು ಪರೀಕ್ಷಾ–ಪರಿಶೀಲನೆ ಮಾಡಲಾದ ಇತರೆ ಜಿಲ್ಲೆಗಳು ಅವೆಂದರೆ ಚಿತ್ರದುರ್ಗ, ಗದಗ, ವಿಜಯಪುರ ಮತ್ತು ಬೆಂಗಳೂರು ನಗರ ಜಿಲ್ಲೆಗಳು ಮಾಹಿತಿಯನ್ನು ಲೆಕ್ಕಪರಿಶೋಧನೆಗೆ ಒದಗಿಸಲಿಲ್ಲ.

ತುರ್ತು ಸಂದರ್ಭಗಳ ಕಾರಣ, ಬಳ್ಳಾರಿಯ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಯವರು (ಡಿಎಚ್ & ಎಫ್‌ಡಬ್ಲ್ಯುಒ), ಇವರು ಡಿಎಂಎಫ್, ಬಳ್ಳಾರಿಯ, ಕೋವಿಡ್–19 ಗೆ ಹಂಚಿಕೆ ಮಾಡಲಾದ ಹಣಕಾಸಿನ ಪೈಕಿ ₹ 5.67 ಕೋಟಿ ಮೊತ್ತವನ್ನು ಖರ್ಚು ಮಾಡಿದ್ದರು. ಡಿಎಚ್ & ಎಫ್‌ಡಬ್ಲ್ಯುಒ ಈ ಹಣಕಾಸನ್ನು ವೈದ್ಯಕೀಯ ಸಿಬ್ಬಂದಿಯನ್ನು ಬಾಡಿಗೆ ಆಧಾರದ ಮೇರೆಗೆ ನೇಮಿಸಿಕೊಳ್ಳಲು ಉಪಯೋಗಿಸಿಕೊಂಡಿದ್ದರು.

ಮೇಲೆ ತಿಳಿಸಿದಂತೆ ಉಪಯೋಗಿಸಿಕೊಳ್ಳಲಾಗಿದ್ದ ಹಣಕಾಸನ್ನು ಕರ್ನಾಟಕ ಸರ್ಕಾರವು ಮರುಪಾವತಿಸಬಹುದಾದ್ದರಿಂದ, ಡಿಎಚ್ & ಎಫ್‌ಡಬ್ಲ್ಯುಒ ₹ 2.08 ಕೋಟಿ ಮೊತ್ತವನ್ನು ಮರುಪಾವತಿಸುವ ಸಲುವಾಗಿ ಪ್ರಸ್ತಾವನೆಯನ್ನು ಕರ್ನಾಟಕ ಸರ್ಕಾರದ ಪ್ರಧಾನ ಕಾರ್ಯದರ್ಶಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಇವರಿಗೆ ಕಳುಹಿಸಿಕೊಡುವಂತೆ ಜಿಲ್ಲಾಧಿಕಾರಿ, ಬಳ್ಳಾರಿ, ಇವರನ್ನು ಕೋರಿದರು (ಡಿಸೆಂಬರ್ 2021). ಅಂತೆಯೇ, ಅದನ್ನು ಜನವರಿ 2022ರಂದು ಕಳುಹಿಸಿಕೊಡಲಾಗಿದ್ದಿತು.

ಮರುಪಾವತಿಗಾಗಿ ಕೋರುವ ವೇಳೆಯಲ್ಲಿ, ಡಿಎಚ್ & ಎಫ್‌ಡಬ್ಲ್ಯುಒ, ಬಳ್ಳಾರಿ, ಇವರು ಗುಂಪು 'ಡಿ' ಸಿಬ್ಬಂದಿಗೆ ಪಾವತಿಸಲಾಗಿದ್ದಂತಹ ₹ 0.91 ಕೋಟಿ ವೇತನವನ್ನು ಪರಿಗಣಿಸಿರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಮುಂದುವರೆದು, ಈ ವಿಷಯದ ಬಗ್ಗೆ ಡಿಎಚ್ & ಎಫ್‌ಡಬ್ಲ್ಯುಒ, ಜೂನ್ 2022ರ ನಂತರದಲ್ಲಿ ಈ ಬಗ್ಗೆ ಯಾವುದೇ ಅನುಸರಣಾ ಕ್ರಮಗಳನ್ನು ತೆಗೆದುಕೊಂಡಿರಲಿಲ್ಲ. ಡಿಸೆಂಬರ್ 2023ರವರೆವಿಗೂ ₹ 2.08 ಕೋಟಿಯನ್ನು ಮರುಪಾವತಿ ಮಾಡಿರಲಿಲ್ಲ ಎಂಬುದನ್ನು ಕೂಡ ಲೆಕ್ಕಪರಿಶೋಧನೆಯು ಗಮನಿಸಿತು.

ಗುಂಪು 'ಡಿ' ವೇತನ ಸೇರಿದಂತೆ ₹ 3.30 ಕೋಟಿ ಮೊತ್ತದ ಮರುಪಾವತಿಗಾಗಿ ಸರ್ಕಾರಕ್ಕೆ ಹೊಸ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ ಎಂದು ಡಿಎಂಎಫ್‌ಟಿ ಬಳ್ಳಾರಿ ಇವರು ಉತ್ತರಿಸಿದರು (ನವಂಬರ್ 2023). ಲೆಕ್ಕಪರಿಶೋಧನೆಯಿಂದ ಗಮನಸೆಳೆದ ನಂತರವೇ ಡಿಎಂಎಫ್‌ಟಿ ಬಳ್ಳಾರಿ ತಮ್ಮ ಬೇಡಿಕೆಯನ್ನು ಮಂಡಿಸಿದ್ದರು.

4.4 *ದತ್ತಿ ಹಣಕಾಸಿನ ಹೂಡಿಕೆ*

ಡಿಎಂಎಫ್‌ಟಿ ಹಣಕಾಸಿನ ಶೇಕಡಾ 20ರಷ್ಟನ್ನು ಗಣಿಗಾರಿಕೆ ಚಟುವಟಿಕೆಗಳು ಮುಕ್ತಾಯಗೊಂಡನಂತರ ಗಣಿಗಾರಿಕೆ ಚಟುವಟಿಕೆಗಳಿಂದ ತೊಂದರೆಗೆ ಈಡಾಗಿರುವಂತಹ ಪ್ರದೇಶಗಳಲ್ಲಿ ದತ್ತಿ ಉದ್ದೇಶಗಳಿಗಾಗಿ ಮೀಸಲಿರಿಸತಕ್ಕದ್ದು ಎಂಬುದಾಗಿ ಡಿಎಂಎಫ್‌ಟಿ ನಿಯಮಗಳು, 2016ರ ನಿಯಮ 18(1) ನಿರ್ದಿಷ್ಟಪಡಿಸಿರುವುದು ಹಾಗೂ ತದನಂತರದಲ್ಲಿ ಅದನ್ನು ಹಣಕಾಸಿನ ಶೇಕಡಾ 10ಕ್ಕೆ ಪರಿಷ್ಕರಿಸಲಾಗಿದ್ದಿತು (8 ಮಾರ್ಚ್ 2018). ಕರ್ನಾಟಕ ಸರ್ಕಾರವು ತನ್ನ ಸುತ್ತೋಲೆಯ (15 ಜೂನ್ 2021) ಮೂಲಕ ದತ್ತಿ ಹಣಕಾಸನ್ನು ಕರ್ನಾಟಕ ಸರ್ಕಾರದ ಹಣಕಾಸು ಇಲಾಖೆಯು ನಿರ್ದಿಷ್ಟಪಡಿಸಿರುವ (ಮಾರ್ಚ್ 2020) ಕಾರ್ಯವಿಧಾನಗಳನ್ನು ಅನುಸರಿಸಿದನಂತರ ಒಂದು ರಾಷ್ಟ್ರೀಕೃತ ಬ್ಯಾಂಕಿನಲ್ಲಿ ಇಡತಕ್ಕದ್ದು ಎಂಬುದಾಗಿ ಸೂಚಿಸಿರುವುದು.

ಉಪ ನಿರ್ದೇಶಕರು, ಚಿತ್ರದುರ್ಗ ಹಾಗೂ ಹಿರಿಯ ಭೂವಿಜ್ಞಾನಿ, ಗದಗ, ಇವರುಗಳು ಮಾರ್ಚ್ 2023ರಲ್ಲಿದ್ದಂತೆ ಬ್ಯಾಂಕು ಉಳಿತಾಯ ಖಾತೆಯಲ್ಲಿ ಹಾಗೂ ಖಜಾನೆಯಲ್ಲಿ ವೈಯಕ್ತಿಕ ಠೇವಣಿ ಖಾತೆಯಲ್ಲಿ (ಬ್ಯಾಂಕು ಖಾತೆ ತೆರೆಯುವ ಮುಂಚಿನ ಅವಧಿಯಲ್ಲಿ) ₹ 48.39 ಕೋಟಿ[20] ದತ್ತಿ ಹಣಕಾಸಿನ್ನು ಕೂಡಿಟ್ಟಿದ್ದರು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಇದು 2016–2023ರ ಅವಧಿಯಲ್ಲಿ ₹ 1.83 ಕೋಟಿ[21] ಮೊತ್ತದಷ್ಟು ಬಡ್ಡಿ ನಷ್ಟವಾಗುವಲ್ಲಿ ಪರಿಣಮಿಸಿತು.

---

[20] ಚಿತ್ರದುರ್ಗ – ₹ 47.18 ಕೋಟಿ (ಮಾರ್ಚ್ 2023ರವರೆವಿಗೆ ಮಾತ್ರ) ಹಾಗೂ ಗದಗ – ₹ 1.21 ಕೋಟಿ.

[21] ಬ್ಯಾಂಕು ಉಳಿತಾಯ ಖಾತೆ ಮತ್ತು ನಿಶ್ಚಿತ ಅವಧಿ ಠೇವಣಿ ಖಾತೆ ನಡುವೆ ವರ್ಷ ಒಂದಕ್ಕೆ ಶೇಕಡಾ 3ರ ಕನಿಷ್ಠ ವ್ಯತ್ಯಾಸವನ್ನು ಪರಿಗಣಿಸಿದಂತೆ.

ಮುಂದುವರೆದು, ಡಿಎಂಎಫ್‌ಟಿ, ಬಳ್ಳಾರಿ, ಇವರು ₹ 209.63 ಕೋಟಿ (19 ಜುಲೈ 2022) ಹಾಗೂ ₹ 36.00 ಕೋಟಿ (01 ಫೆಬ್ರವರಿ 2023) ಮೊತ್ತಗಳನ್ನು ನಿಶ್ಚಿತ ಅವಧಿ ಠೇವಣಿಗಳಲ್ಲಿ ಹೂಡಿಕೆ ಮಾಡಿದ್ದರು. ಡಿಎಂಎಫ್‌ಟಿ, ಬಳ್ಳಾರಿ, ಇವರು, ಲಭ್ಯವಿದ್ದಂತಹ ₹ 252.62 ಕೋಟಿ ಮೊತ್ತದಷ್ಟು ದತ್ತಿ ನಿಧಿಯನ್ನು (2021–22ರ ಸಾಲಿಗೆ ಚಾರ್ಟರ್ಡ್ ಅಕೌಂಟೆಂಟ್‌ರವರ ವರದಿಯ ಅನುಸಾರ) ಕರ್ನಾಟಕ ಸರ್ಕಾರವು ನಿರ್ದೇಶನಗಳನ್ನು ನೀಡಿದ ದಿನಾಂಕದಿಂದ (15 ಜೂನ್ 2021) ನಿಶ್ಚಿತ ಅವಧಿ ಠೇವಣಿಗಳಲ್ಲಿ ಹೂಡಿಕೆ ಮಾಡಿದ್ದಲ್ಲಿ, ಡಿಎಂಎಫ್‌ಟಿ, ಬಳ್ಳಾರಿ, ಇವರು ₹ 7.58 ಕೋಟಿ[22] ಮೊತ್ತದಷ್ಟು ಬಡ್ಡಿಯನ್ನು ಗಳಿಸಬಹುದಿದ್ದಿತು.

ರಾಜ್ಯ ಮಟ್ಟದ ಅಧಿಕಾರಯುಕ್ತ ಸಮಿತಿ ಹಾಗೂ ಜಿಲ್ಲಾ ಮಟ್ಟದ ಸಮಿತಿಗಳು (ಆಡಳಿತ ಮಂಡಳಿ ಮತ್ತು ವ್ಯವಸ್ಥಾಪನಾ ಸಮಿತಿ) ಕೂಡ ಡಿಎಂಎಫ್‌ಟಿ ಹಣಕಾಸಿನ ಸಂಗ್ರಹಣೆ ಹಾಗೂ ಅವುಗಳಿಂದ ಮಾಡಲಾಗಿರುವಂತಹ ವೆಚ್ಚಗಳ ಹಾಗೂ ದತ್ತಿ ಹಣಕಾಸಿಗೆ ಹಂಚಿಕೆಯ ಬಗ್ಗೆ ಚರ್ಚಿಸಿದ್ದವು, ಆದರೆ ತಮ್ಮ ಸಭೆಗಳಲ್ಲಿ ದತ್ತಿ ಹಣಕಾಸಿನ ಹೂಡಿಕೆಯ ಬಗ್ಗೆ ಯಾವುದೇ ನಿರ್ದಿಷ್ಟ ನಿರ್ದೇಶನಗಳನ್ನು ನೀಡಿರಲಿಲ್ಲ ಎಂಬುದನ್ನು ಸಹ ಲೆಕ್ಕಪರಿಶೋಧನೆಯು ಗಮನಿಸಿತು.

ಸರ್ಕಾರದ ಆದೇಶಗಳ ಅನುಸಾರ ದತ್ತಿ ಹಣಕಾಸನ್ನು ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಠೇವಣಿ ಇಡುವಂತೆ ನಿರ್ದೇಶನಗಳನ್ನು ನೀಡಲಾಗಿದ್ದಿತು ಎಂಬುದಾಗಿ ಸರ್ಕಾರವು ಉತ್ತರಿಸಿತು (ಆಗಸ್ಟ್ 2024). ನಿಶ್ಚಿತ ಅವಧಿ ಠೇವಣಿಗಳಲ್ಲಿ ಹೂಡಿಕೆ ಮಾಡುವುದರ ಬಗ್ಗೆ ಸರ್ಕಾರದ ನಿರ್ದೇಶನಗಳಿಗೆ ಬದ್ಧತೆಯಿಂದ ಕೂಡಿರದಿದ್ದುದರ ಬಗ್ಗೆ ಉತ್ತರವು ಮೌನವಾಗಿದ್ದಿತು.

4.5 *ಡಿಎಂಎಫ್‌ಟಿ ಲೆಕ್ಕಪತ್ರಗಳು*

ಡಿಎಂಎಫ್‌ಟಿ ನಿಯಮಗಳು, 2016ರ ನಿಯಮ 24 ಡಿಎಂಎಫ್‌ಟಿ ಲೆಕ್ಕಪತ್ರಗಳನ್ನು ಪ್ರತೀ ವರ್ಷವೂ ಡಿಎಂಎಫ್‌ಟಿ ನೇಮಕ ಮಾಡಿರುವಂತಹ ಓರ್ವ ಚಾರ್ಟರ್ಡ್ ಅಕೌಂಟೆಂಟ್‌ರವರಿಂದ ಲೆಕ್ಕಪರಿಶೋಧನೆ ಮಾಡತಕ್ಕದ್ದು ಹಾಗೂ ಹಣಕಾಸು ಸಾಲು ಮುಕ್ತಾಯಗೊಂಡ ದಿನಾಂಕದಿಂದ ಮೂರು ತಿಂಗಳುಗಳ ಒಳಗೆ ಪೂರ್ಣಗೊಳಿಸತಕ್ಕದ್ದು ಎಂಬುದಾಗಿ ನಿರ್ದಿಷ್ಟಪಡಿಸಿರುವುದು.

ಪರೀಕ್ಷಾ–ಪರಿಶೀಲನೆ ಮಾಡಲಾದಂತಹ ಡಿಎಂಎಫ್‌ಟಿಗಳು ವಾರ್ಷಿಕ ಲೆಕ್ಕಪತ್ರಗಳನ್ನು ತಯಾರಿಸಿದ್ದವು ಹಾಗೂ ಅಂತಹ ವಾರ್ಷಿಕ ಲೆಕ್ಕಪತ್ರಗಳನ್ನು ಚಾರ್ಟರ್ಡ್ ಅಕೌಂಟೆಂಟ್‌ಗಳು ಲೆಕ್ಕಪರಿಶೋಧನೆ ಮಾಡಿದ್ದರು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಚಾರ್ಟರ್ಡ್ ಅಕೌಂಟೆಂಟ್‌ಗಳು ಆಸ್ತಿ–ಜವಾಬ್ದಾರಿ ತ:ಖ್ತೆ, ಆದಾಯ ಮತ್ತು ವೆಚ್ಚ ತ:ಖ್ತೆ ಹಾಗೂ ಸ್ವೀಕೃತಿಗಳು ಮತ್ತು ಪಾವತಿಗಳ ತ:ಖ್ತೆಗಳು ಆ ದಿನಾಂಕದಲ್ಲಿದ್ದಂತೆ ಒಂದು ಸತ್ಯಾಸತ್ಯತೆಯಿಂದ ಕೂಡಿದ ಹಾಗೂ ನ್ಯಾಯಸಮ್ಮತ ಅಭಿಪ್ರಾಯಗಳನ್ನು ವ್ಯಕ್ತಪಡಿಸುತ್ತವೆ ಎಂಬುದಾಗಿ ಪ್ರಮಾಣೀಕರಿಸುವರು. ಪ್ರಮಾಣಪತ್ರವನ್ನು ಡಿಎಂಎಫ್‌ಟಿಗಳ ವಾರ್ಷಿಕ ವರದಿಗೆ ಲಗತ್ತಿಸಲಾಗಿದ್ದಿತು.

4.6 *ಯೋಜನೆಗಳ ಅನುಷ್ಠಾನದ ಮೇಲ್ವಿಚಾರಣೆ*

ಪಿಎಂಕೆಕೆಕೆವೈ ಯೋಜನೆಯನ್ನು ಗಣಿಗಾರಿಕೆ ಸಂಬಂಧಿತ ಕಾರ್ಯಾಚರಣೆಗಳಿಂದ ತೊಂದರೆಗೆ ಈಡಾಗಿರುವ ಜನತೆಯ ಕ್ಷೇಮಾಭಿವೃದ್ಧಿಯನ್ನು ಖಚಿತಪಡಿಸಿಕೊಳ್ಳುವ ಸಲುವಾಗಿ ಪ್ರಾರಂಭಿಸಲಾಯಿತು. ಯೋಜನೆಯ ಉದ್ದೇಶಗಳು ಫಲಿಸಿದವು/ಸಾಧಿಸಲಾಯಿತು ಎಂಬುದನ್ನು ಖಚಿತಪಡಿಸಿಕೊಳ್ಳುವ ಸಲುವಾಗಿ ಯೋಜನೆಯ ಕಾರ್ಯಗತಗೊಳಿಸುವಿಕೆಯನ್ನು ಅವಿರತವಾಗಿ ಮೇಲ್ವಿಚಾರಣೆ ಮಾಡುವುದು ಅತ್ಯಗತ್ಯವಾಗಿದ್ದಿತು.

ಡಿಎಂಎಫ್‌ಟಿ ನಿಯಮಗಳು ಚಿಂತಿಸಿರುವಂತೆ, ರಾಜ್ಯ ಮಟ್ಟದಲ್ಲಿ ಯೋಜನೆಗಳು ಮತ್ತು ಕಾರ್ಯಕ್ರಮಗಳ ಕಾರ್ಯಗತಗೊಳಿಸುವಿಕೆಯನ್ನು ಸಮೀಕ್ಷಿಸುವ ಸಲುವಾಗಿ ಮತ್ತು ಮೇಲ್ವಿಚಾರಣೆ ಮಾಡುವ ಸಲುವಾಗಿ ಎರಡು ಸಮಿತಿಗಳನ್ನು ರಚಿಸಬೇಕಿರುವುದು. ಜಿಲ್ಲಾ ಮಟ್ಟದಲ್ಲಿ, ಎರಡು ಸಮಿತಿಗಳು, ಅವೆಂದರೆ ಡಿಎಂಎಫ್‌ಟಿ ಟ್ರಸ್ಟಿಗಳ ಆಡಳಿತ ಮಂಡಳಿ ಹಾಗೂ ಆಡಳಿತ ಮಂಡಳಿಯ

[22] 12 ತಿಂಗಳುಗಳಿಗೆ (₹ 252.62 ಕೋಟಿಯ ಶೇಕಡಾ 3).

ನಿರ್ಣಯಗಳನ್ನು ಕಾರ್ಯಗತಗೊಳಿಸುವ ಸಲುವಾಗಿ ಇರುವಂತಹ ಡಿಎಂಎಫ್‌ಟಿ ವ್ಯವಸ್ಥಾಪನಾ ಸಮಿತಿ.

ಡಿಎಂಎಫ್‌ಟಿ ನಿಯಮಗಳು, 2016ರ ಅನುಸಾರ ಸಮಿತಿಗಳ ಅನುಕ್ರಮ ಶ್ರೇಣಿಯ ಸಚಿತ್ರ ರೇಖಾಚಿತ್ರವು ಈ ಕೆಳಗಿನಂತಿದ್ದಿತು:

ರೇಖಾಚಿತ್ರ ಸಂಖ್ಯೆ:4.1: ಸಮಿತಿಗಳ ಅನುಕ್ರಮ ಶ್ರೇಣಿಯನ್ನು ತೋರಿಸುವ ರೇಖಾಚಿತ್ರ



4.6.1 ರಾಜ್ಯ ಮಟ್ಟದ ಮೇಲ್ವಿಚಾರಣಾ ಸಮಿತಿ

ಡಿಎಂಎಫ್‌ಟಿಗಳ ಯೋಜನೆಗಳು ಮತ್ತು ಕಾರ್ಯಕ್ರಮಗಳ ಕಾರ್ಯಗತಗೊಳಿಸುವಿಕೆಯನ್ನು ಮೇಲ್ವಿಚಾರಣೆ ಮಾಡುವ ಉದ್ದೇಶದೊಂದಿಗೆ ಹಾಗೂ ರಾಜ್ಯ ಮಟ್ಟದ ಅಧಿಕಾರಯುಕ್ತ ಸಮಿತಿಗಳ ಕಾರ್ಯಚಟುವಟಿಕೆಗಳನ್ನು ಸಮೀಕ್ಷಿಸುವ ಸಲುವಾಗಿ ಗೌರವಾನ್ವಿತ ಮುಖ್ಯ ಮಂತ್ರಿಯವರ ನೇತೃತ್ವದಲ್ಲಿರುವಂತಹ ಒಂದು ರಾಜ್ಯ ಮಟ್ಟದ ಮೇಲ್ವಿಚಾರಣಾ ಸಮಿತಿಯನ್ನು (ಎಸ್‌ಎಲ್‌ಎಸ್‌ಸಿ) ಮಾರ್ಚ್ 2018ರಲ್ಲಿ ರಚಿಸಲಾಯಿತು. ಡಿಎಂಎಫ್‌ಟಿ ನಿಯಮಗಳು, 2016ರ ನಿಯಮ 5ಎ ಅಡಿಯಲ್ಲಿ ಚಿಂತಿಸಿರುವಂತೆ, ಎಸ್‌ಎಲ್‌ಎಸ್‌ಸಿಯು ವರ್ಷದಲ್ಲಿ ಕನಿಷ್ಠ ಒಂದು ಸಲ ಸಭೆಯನ್ನು ಸೇರಬೇಕಿದ್ದಿತು.

ಎಸ್‌ಎಲ್‌ಎಸ್‌ಸಿಯು ಅದರ ರಚನೆಯ ದಿನಾಂಕದಿಂದ ಜೂನ್ 2023ರವರೆವಿಗೆ ಯಾವುದೇ ಸಭೆಗಳನ್ನು ನಡೆಸಿರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು.

4.6.2 ರಾಜ್ಯ ಮಟ್ಟದ ಅಧಿಕಾರಯುಕ್ತ ಸಮಿತಿ

ಡಿಎಂಎಫ್‌ಟಿ ನಿಯಮಗಳು, 2016ರ ನಿಯಮ 5ಬಿ ಅಡಿಯಲ್ಲಿನ ಅಗತ್ಯತೆಯಂತೆ, ಡಿಎಂಎಫ್‌ಟಿಗಳ ಯೋಜನೆಗಳು ಮತ್ತು ಕಾರ್ಯಕ್ರಮಗಳನ್ನು ಹಾಗೂ ವ್ಯವಸ್ಥಾಪನಾ ಸಮಿತಿಗಳ ಕಾರ್ಯವೈಖರಿಯನ್ನು ಮೇಲ್ವಿಚಾರಣೆಗಳನ್ನು ಮತ್ತು ಸಮೀಕ್ಷೆಗಳನ್ನು ಮಾಡಬೇಕಿದ್ದಂತಹ ಹಾಗೂ ಕರ್ನಾಟಕ ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ನೇತೃತ್ವದಲ್ಲಿರುವಂತಹ ರಾಜ್ಯ ಮಟ್ಟದ ಅಧಿಕಾರಯುಕ್ತ ಸಮಿತಿಯು (ಎಸ್‌ಎಲ್‌ಇಸಿ) ಒಂದು ವರ್ಷದಲ್ಲಿ ಕಡೆಯ ಪಕ್ಷ ಮೂರು ಸಲ ಸಭೆ ಸೇರಬೇಕಾದ ಅಗತ್ಯತೆಗೆ ಪ್ರತಿಯಾಗಿ 2018ರಿಂದ 2023ರ ಅವಧಿಯಲ್ಲಿ ಕೇವಲ ನಾಲ್ಕು[23] ಸಲ ಸಭೆ ಸೇರಿದ್ದಿತು.

15 ಸಭೆಗಳನ್ನು ನಡೆಸಬೇಕಿದ್ದಂತಹ ಅಗತ್ಯತೆಗೆ ಪ್ರತಿಯಾಗಿ ಸಮಿತಿಯ ರಚನೆಯ ದಿನಾಂಕದನಂತರ ಕೇವಲ ನಾಲ್ಕು ಸಭೆಗಳನ್ನು ಮಾತ್ರ ನಡೆಸಲಾಗಿದ್ದಿತು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು.

ನಡೆಸಲಾಗಿದ್ದಂತಹ ನಾಲ್ಕು ಎಸ್‌ಎಲ್‌ಇಸಿ ಸಭೆಗಳಲ್ಲಿ, ಸಂಗ್ರಹಣೆಯಾಗಿರುವಂತಹ ಡಿಎಂಎಫ್‌ಗೆ ತಕ್ಕಂತೆ ಕ್ರಿಯಾ ಯೋಜನೆ ತಯಾರಿಸುವುದು, ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ತೊಂದರೆಗೆ ಈಡಾಗಿರುವಂತಹ ಪ್ರದೇಶಗಳಿಗೆ ಇತಿಮಿತಿಗಳನ್ನು ನಿಗದಿಗೊಳಿಸುವುದು, ಉನ್ನತಮಟ್ಟದ ಆದ್ಯತೆಯ ಹಾಗೂ ಇತರೆ ಆದ್ಯತೆಯ ಪ್ರದೇಶಗಳಿಗೆ 60:40 ಅನುಪಾತದಲ್ಲಿ ಕ್ರಿಯಾ ಯೋಜನೆಯನ್ನು

[23] ಸಭೆಗಳನ್ನು 30 ನವಂಬರ್ 2019, 16 ಮೇ 2020, 27 ಆಗಸ್ಟ್ 2021 ಮತ್ತು 17 ಮಾರ್ಚ್ 2022ರಂದು ನಡೆಸಲಾಗಿದ್ದಿತು.

ಕಾರ್ಯಗತಗೊಳಿಸುವುದು, ಇಪಿಪಿಸಿ ಶೀರ್ಷಿಕೆ ಅಡಿಯಲ್ಲಿ ಪರಿಹಾರಕ ಅರಣ್ಯಗಳನ್ನು ಬೆಳೆಸುವಿಕೆ ಯೋಜನೆಯನ್ನು (ಅಫಾರೆಸ್ಟೇಷನ್) ಸೇರಿಸುವುದು, ಹಣಕಾಸಿನ ಶೇಕಡಾ 30ರಷ್ಟನ್ನು ಕೋವಿಡ್ 19ಕ್ಕಾಗಿ ಉಪಯೋಗಿಸಿವುದು, ಆಡಳಿತಾತ್ಮಕ ಅನುದಾನದ ಪೈಕಿ ಹಣಕಾಸನ್ನು ರಾಜ್ಯ ಮಟ್ಟದ ಮೇಲ್ವಿಚಾರಣೆ ಮತ್ತು ಉಸ್ತುವಾರಿಗಾಗಿ ಉಪಯೋಗಿಸುವುದು, ಕಾಮಗಾರಿಗಳನ್ನು ಕಾರ್ಯಗತಗೊಳಿಸುವ ಇಲಾಖೆಗಳು/ಸಂಸ್ಥೆಗಳಿಂದ ಡಿಎಂಎಫ್ ಕೊಡುಗೆಯನ್ನು ಸಂಗ್ರಹಿಸದಿರುವುದು, ಗಣಿಗಾರಿಕೆ ಚಟುವಟಿಕೆಗಳಿಂದ ತೊಂದರೆಗೆ ಈಡಾಗಿರುವ ಪ್ರದೇಶಗಳಲ್ಲಿ ಸಮೀಕ್ಷೆಗಳು, ಮುಂತಾದವುಗಳನ್ನು ನಡೆಸುವ ಸಲುವಾಗಿ ಪರಿಸರೀಯ ನಿರ್ವಹಣೆ ಮತ್ತು ಕಾರ್ಯನೀತಿ ಸಂಶೋಧನಾ ಸಂಸ್ಥೆಯ (ಇಎಂಪಿಆರ್‌ಐ) ಸೇವೆಗಳನ್ನು ಪಡೆದುಕೊಳ್ಳುವುದು, ಮುಂತಾದ ವಿಷಯಗಳ ಬಗ್ಗೆ ಚರ್ಚೆಗಳನ್ನು ನಡೆಸಲಾಗಿದ್ದಿತು. ಮುಂದುವರೆದು, ಪಿಎಂಕೆಕೆಕೆವೈ ಭೌತಿಕ ಹಾಗೂ ಹಣಕಾಸಿನ ಪ್ರಗತಿಗೆ ಸಂಬಂಧಿಸಿದಂತೆ, ಕೈಗೊಳ್ಳಲಾಗಿರುವಂತಹ ಅನುಸರಣಾ ಕ್ರಮಗಳನ್ನು ಮೇಲ್ವಿಚಾರಣೆ ಮಾಡುವುದರೊಂದಿಗೆ ಚರ್ಚಿಸಲಾಗಿದ್ದಿತು.

ಎಸ್‌ಎಲ್‌ಎಸ್‌ಸಿ ಹಾಗೂ ಎಸ್‌ಎಲ್‌ಇಸಿ ಸಭೆಗಳನ್ನು ಡಿಎಂಎಫ್‌ಟಿ ನಿಯಮಗಳ ಅನುಸಾರ ನಿಯತವಾಗಿ ನಡೆಸುವ ಸಲುವಾಗಿ ಕ್ರಮಗಳನ್ನು ಕೈಗೊಳ್ಳಲಾಗಿದ್ದಿತು ಎಂಬುದಾಗಿ ಸರ್ಕಾರವು ಉತ್ತರಿಸಿತು (ಆಗಸ್ಟ್ 2024).

4.7 ಪ್ರತಿಷ್ಠಾನ ಟ್ರಸ್ಟ್ ಮತ್ತು ವ್ಯವಸ್ಥಾಪನಾ ಸಮಿತಿಗಳ ಸಭೆಗಳು

ಪ್ರತಿಷ್ಠಾನ ಟ್ರಸ್ಟ್ ಕಡೆಯ ಪಕ್ಷ ಆರು ತಿಂಗಳುಗಳಿಗೆ ಒಂದು ಸಲ ಹಾಗೂ ವ್ಯವಸ್ಥಾಪನಾ ಸಮಿತಿಯು ಒಂದು ಹಣಕಾಸು ಸಾಲಿನಲ್ಲಿ ಕಡೆಯ ಪಕ್ಷ ನಾಲ್ಕು ಸಲ ಸಭೆ ಸೇರತಕ್ಕದ್ದು ಎಂಬುದಾಗಿ ಎಂಬುದಾಗಿ ಡಿಎಂಎಫ್‌ಟಿ ನಿಯಮಗಳು, 2016ರ ನಿಯಮ 8 ಮತ್ತು 14 ನಿರ್ದಿಷ್ಟಪಡಿಸಿರುತ್ತವೆ. ಪ್ರತಿಷ್ಠಾನ ಟ್ರಸ್ಟ್ ಹಾಗೂ ವ್ಯವಸ್ಥಾಪನಾ ಸಮಿತಿಗಳ ಸಭೆಗಳನ್ನು ಈ ಕೆಳಗೆ ವಿವರಿಸಿರುವಂತೆ ನಿರ್ದಿಷ್ಟ ಸಂಖ್ಯೆಗಳಲ್ಲಿ ನಡೆಸಿರಲಿಲ್ಲ ಎಂಬುದನ್ನು ಪರೀಕ್ಷಾ-ಪರಿಶೀಲನೆ ಮಾಡಲಾದ ಜಿಲ್ಲೆಗಳಲ್ಲಿನ ಲೆಕ್ಕಪರಿಶೋಧನಾ ಪರಿಶೀಲನೆಯು ತೋರಿಸಿಕೊಟ್ಟಿತು.

ಕೋಷ್ಟಕ ಸಂಖ್ಯೆ 4.1: ನಡೆಸಲಾಗಿದ್ದಂತಹ ಆಡಳಿತ ಮಂಡಳಿ ಮತ್ತು ವ್ಯವಸ್ಥಾಪನಾ ಸಮಿತಿಗಳ ಸಭೆಗಳ ವಿವರಗಳು

ಕ್ರಮ ಸಂಖ್ಯೆ	ಜಿಲ್ಲೆ	2016-17ರಿಂದ 2022-23 ಹಣಕಾಸು ಸಾಲುಗಳು	
		ನಡೆಸಬೇಕಿದ್ದ ಸಭೆಗಳ ಸಂಖ್ಯೆ	ನಡೆಸಲಾಗಿದ್ದ ಸಭೆಗಳ ಸಂಖ್ಯೆ
ಆಡಳಿತ ಮಂಡಳಿ			
1	ಚಿತ್ರದುರ್ಗ	14	10
2	ಬಳ್ಳಾರಿ	14	11
3	ಗದಗ	14	2
4	ಬೆಂಗಳೂರು ನಗರ	14	3
5	ವಿಜಯನಗರ	3	4
ವ್ಯವಸ್ಥಾಪನಾ ಸಮಿತಿ			
1	ಚಿತ್ರದುರ್ಗ	28	10
2	ಬಳ್ಳಾರಿ	28	6
3	ಗದಗ	28	3
4	ಬೆಂಗಳೂರು ನಗರ	28	3
5	ವಿಜಯನಗರ	8	4

ಮೂಲ : ಇಲಾಖೆಯು ಒದಗಿಸಿದ ಮಾಹಿತಿಯಿಂದ ಲೆಕ್ಕಪರಿಶೋಧನೆಯು ಸಂಕಲಿಸಿರುವುದು.

2016-17ರಿಂದ 2022-23ರ ಅವಧಿಯಲ್ಲಿ ನಡೆದ ವ್ಯವಸ್ಥಾಪನಾ ಸಮಿತಿ ಮತ್ತು ಆಡಳಿತ ಮಂಡಳಿ ಸಭೆಗಳ ವಿವರಗಳನ್ನು ***ಅನುಬಂಧ-4ರಲ್ಲಿ*** ಕೋಷ್ಟಕದ ರೂಪದಲ್ಲಿ ನೀಡಲಾಗಿರುವುದು.

ಬಳ್ಳಾರಿ ಮತ್ತು ಗದಗ ಜಿಲ್ಲೆಗಳ ಡಿಎಂಎಫ್‌ಟಿಗಳು 2021-22 ಮತ್ತು 2022-23 ಸಾಲುಗಳಲ್ಲಿ ಯಾವುದೇ ವ್ಯವಸ್ಥಾಪನಾ ಸಮಿತಿ ಸಭೆಗಳನ್ನು ನಡೆಸಿರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಮುಂದುವರೆದು, ಬಳ್ಳಾರಿ ಮತ್ತು ಚಿತ್ರದುರ್ಗ ಜಿಲ್ಲೆಗಳ ಡಿಎಂಎಫ್‌ಟಿಗಳು 2021-22 ಮತ್ತು 2022-23 ಸಾಲುಗಳಲ್ಲಿ ಯಾವುದೇ ಆಡಳಿತ ಮಂಡಳಿ ಸಭೆಗಳನ್ನು ನಡೆಸಿರಲಿಲ್ಲ.

ಬೆಂಗಳೂರು ನಗರ ಜಿಲ್ಲೆಯ ಡಿಎಂಎಫ್‌ಟಿ 2022–23 ನೇ ಸಾಲಿನಲ್ಲಿ ಯಾವುದೇ ವ್ಯವಸ್ಥಾಪನಾ ಸಮಿತಿ ಅಥವಾ ಆಡಳಿತ ಮಂಡಳಿ ಸಭೆಗಳನ್ನು ನಡೆಸಿರಲಿಲ್ಲ.

ಕಂಡಿಕೆ 5.11ರಲ್ಲಿ ವಿವರಿಸಿರುವಂತೆ ಆಯ್ಕೆ ಮಾಡಲಾಗಿದ್ದಂತಹ ಜಿಲ್ಲೆಗಳಲ್ಲಿ 2017–2020ರಲ್ಲಿ ಮಂಜೂರಾತಿಗೊಂಡಿದ್ದಂತಹ ಕಾಮಗಾರಿಗಳನ್ನು ಪ್ರಾರಂಭಿಸಿರಲಿಲ್ಲ ಅಥವಾ ಟೆಂಡರುಗಳನ್ನು ಆಹ್ವಾನಿಸಿರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು, ಇದು ವ್ಯವಸ್ಥಾಪನಾ ಸಮಿತಿಗಳು ಹಾಗೂ ಆಡಳಿತ ಮಂಡಳಿಗಳಿಂದ ಅಸಮರ್ಪಕವಾದಂತಹ ಮೇಲ್ವಿಚಾರಣೆಯಾಗಿರುವುದನ್ನು ಸೂಚಿಸುತ್ತಿದ್ದಿತು.

ಸಭೆಗಳನ್ನು ನಡೆಸುವ ಸಲುವಾಗಿ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಡಿಎಂಎಫ್‌ಟಿಗಳ ಅಧ್ಯಕ್ಷರುಗಳಿಗೆ ಸಲಹೆ ನೀಡಲಾಗಿರುವುದು ಎಂಬುದಾಗಿ ಸರ್ಕಾರವು ಉತ್ತರಿಸಿತು (ಆಗಸ್ಟ್ 2024). ಆದಾಗ್ಯೂ ವ್ಯವಸ್ಥಾಪನಾ ಸಮಿತಿಗಳ ಸಭೆಗಳನ್ನು ನಡೆಸುವ ಬಗ್ಗೆ ಉತ್ತರವು ಮೌನವಾಗಿದ್ದಿತು.

ಅಧ್ಯಾಯ – V

ಯೋಜನೆಗಳ ನಿರ್ವಹಣೆ

ಅಧ್ಯಾಯ V

ಯೋಜನೆಗಳ ನಿರ್ವಹಣೆ

ಪರಿಸರ ಸಂರಕ್ಷಣೆ, ಪರಿಹಾರಕ ಅರಣ್ಯೀಕರಣ ಹಾಗೂ ಮಾಲಿನ್ಯ ನಿಯಂತ್ರಣ ಕ್ರಮಗಳು (ಇಪಿಪಿಸಿ), ಮಹಿಳೆಯರು ಮತ್ತು ಮಕ್ಕಳ ಕಲ್ಯಾಣ/ಕ್ಷೇಮಾಭಿವೃದ್ಧಿ (ಡಬ್ಲ್ಯುಸಿಡಿ), ವಯೋವೃದ್ಧರು ಹಾಗೂ ವಿಶೇಷ ಚೇತನ ಜನತೆ ಕಲ್ಯಾಣ (ಡಬ್ಲ್ಯುಎಡಿ), ಕೌಶಲ್ಯ ಅಭಿವೃದ್ಧಿ, ನೈರ್ಮಲ್ಯ ಹಾಗೂ ಪರಿಸರೀಯ ಗುಣಮಟ್ಟವನ್ನು ಹೆಚ್ಚಳಗೊಳಿಸುವ ಸಲುವಾಗಿನ ಇತರೆ ಕ್ರಮಗಳು, ಇವೇ ಮುಂತಾದ ಆದ್ಯತೆಯ ವಲಯಗಳಿಗೆ ಹಣಕಾಸಿನ ಹಂಚಿಕೆಯು ಕಡಿಮೆ ಪ್ರಮಾಣದಲ್ಲಿ ಆಗಿದ್ದಿತು. ಪಿಎಂಕೆಕೆಕೆವೈ ಮಾರ್ಗಸೂಚಿಗಳಲ್ಲಿ ಚಿಂತಿಸಿರದ ಹಾಗೂ ಶಿಕ್ಷ್ಯಣ, ಭೌತಿಕ ಮೂಲಸೌಕರ್ಯ, ನೀರಾವರಿ ಮತ್ತು ಇಂಧನ ಮತ್ತು ಜಲಾನಯನ ಅಭಿವೃದ್ಧಿ ಶೀರ್ಷಿಕೆಗಳ ಅಡಿಯಲ್ಲಿ ಕಾರ್ಯಗತಗೊಳಿಸಲಾದ ಕಾಮಗಾರಿಗಳನ್ನು ಸೇರಿಸಿರುವ ದೃಷ್ಟಾಂತಗಳಿದ್ದವು. ಕಾರ್ಯಗತಗೊಳಿಸುವ ಸಂಸ್ಥೆ (ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪ–ನಿರ್ದೇಶಕರು, ಚಿತ್ರದುರ್ಗ) ಒಂದು ಕಾಮಗಾರಿಯನ್ನು ₹ 1.00 ಕೋಟಿ ಮೊತ್ತಕ್ಕಿಂತ ಕಡಿಮೆ ಇರುವ ರೀತಿಯಲ್ಲಿ 12 ಸಣ್ಣ ಕಾಮಗಾರಿಗಳನ್ನಾಗಿ ವಿಭಜಿಸಿದ್ದರು ಹಾಗೂ ಅಂತಹ ಕಾಮಗಾರಿಗಳನ್ನು ಕಿಯಾನಿಕ್ಸ್‌ಗೆ ಟೆಂಡರುಗಳನ್ನು ಆಹ್ವಾನಿಸದೆಯೇ ನೀಡಿದ್ದರು. ಅದೇ ರೀತಿಯಲ್ಲಿ ಡಿಎಂಎಫ್‌ಟಿ, ಬಳ್ಳಾರಿ, ಇವರು ಆರು ಕಾಮಗಾರಿಗಳನ್ನು ಎರಡು ಅಥವಾ ಅದಕ್ಕೂ ಹೆಚ್ಚಿನ ಸಣ್ಣ ಕಾಮಗಾರಿಗಳನ್ನಾಗಿ ವಿಭಜಿಸಿದ್ದರು ಹಾಗೂ ಅವುಗಳನ್ನು ನಿರ್ಮಿತಿ ಕೇಂದ್ರಕ್ಕೆ ನೀಡಿದ್ದರು. ಕಾಮಗಾರಿಗಳನ್ನು ಯೋಜಿಸುವಾಗ ಸ್ಥಳೀಯ ಗ್ರಾಮ ಸಭೆ/ಬಾಧಿತ ಜನರೊಂದಿಗೆ ಯಾವುದೇ ಸಾರ್ವಜನಿಕ ಸಮಾಲೋಚನೆಗಳನ್ನು ಮಾಡಿರಲಿಲ್ಲ ಮತ್ತು ಪೂರ್ಣಗೊಂಡ ಕಾಮಗಾರಿಗಳ ಪರಿಣಾಮಕಾರಿ ಬಳಕೆ ಮತ್ತು ನಿರ್ವಹಣೆಗಾಗಿ ಸ್ಥಳೀಯ ಜನರೊಂದಿಗೆ ಯಾವುದೇ ಜಾಗೃತಿ ಚಟುವಟಿಕೆಗಳನ್ನು ನಡೆಸಿರಲಿಲ್ಲ. ಕಾರ್ಯಗತಗೊಳಿಸುವ ಸಂಸ್ಥೆಗಳಿಂದ ಅನುಮೋದಿತ ಕಾಮಗಾರಿಗಳ ಪೂರ್ವಾಭಾವಿ ಯೋಜನೆಗಳಿಂದ ಮಾರ್ಗಾಂತರಣಗಳನ್ನು ಮಾಡಲಾಗಿದ್ದಿತು. ಉದಾಹರಣೆಗೆ, ಕಾಮಗಾರಿಗಳನ್ನು ಪೂರ್ಣಗೊಳಿಸುವಲ್ಲಿ ವಿಳಂಬಗಳು, ನಿಕೃಷ್ಟಮಟ್ಟದ ಗುಣಮಟ್ಟ ಹಾಗೂ ಕಾಮಗಾರಿಗಳನ್ನು ಅಪೂರ್ಣವಾಗಿ ಕಾರ್ಯಗತಗೊಳಿಸಿದ್ದುದು, ಇತ್ಯಾದಿ. ದೃಷ್ಟಾಂತಗಳಿದ್ದವು. ವಾರ್ಷಿಕ ಯೋಜನೆ ಹಾಗೂ ಅನುಮೋದಿತ ಯೋಜನೆಗಳು/ಕಾರ್ಯಕ್ರಮಗಳ ಕಾರ್ಯಗತಗೊಳಿಸುವಿಕೆಯನ್ನು ಖಚಿತಪಡಿಸಿಕೊಳ್ಳುವಲ್ಲಿ ವ್ಯವಸ್ಥಾಪಕ ಸಮಿತಿಯ ವಿಫಲತೆಯು ಅನುದಾನಗಳನ್ನು ಬಿಡುಗಡೆಗೊಳಿಸಿದ್ದರ ಹೊರತಾಗಿಯೂ ಕಾಮಗಾರಿಗಳನ್ನು ಪ್ರಾರಂಭಗೊಳಿಸದಿರುವಲ್ಲಿ ಹಾಗೂ ಟೆಂಡರು ಪ್ರಕ್ರಿಯೆಗಳನ್ನು ನಡೆಸದಿರುವಲ್ಲಿ ಪರಿಣಮಿಸಿದ್ದಿತು.

5.1 ಆದ್ಯತೆಯ ಕ್ಷೇತ್ರಗಳಿಗೆ ಪೂರ್ವಭಾವಿ ಯೋಜನೆಗಳನ್ನು ತಯಾರಿಸುವಿಕೆ

ಈ ಕೆಳಗಿನ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಹಣಕಾಸನ್ನು ಯಾವ ರೀತಿಯಲ್ಲಿ ತೊಡಗಿಸತಕ್ಕದ್ದು ಎಂಬುದನ್ನು ಡಿಎಂಎಫ್‌ಟಿ ನಿಯಮಗಳು, 2016ರ ನಿಯಮ 18(2) ನಿರ್ದಿಷ್ಟಪಡಿಸಿರುವುದು :

i) **ಅಧಿಕ ಮಟ್ಟದ ಆದ್ಯತೆಯ ಕ್ಷೇತ್ರಗಳು** ಅಂದರೆ ಕುಡಿಯುವ ನೀರು ಸರಬರಾಜು (ಡಿಡಬ್ಲ್ಯುಎಸ್), ಪರಿಸರ ಸಂರಕ್ಷಣೆ, ಪರಿಹಾರಕ ಅರಣ್ಯಗಳನ್ನು ಬೆಳೆಸುವುದು ಹಾಗೂ ಮಾಲಿನ್ಯ ನಿಯಂತ್ರಣ ಕ್ರಮಗಳು, (ಇಪಿಪಿಸಿ), ಆರೋಗ್ಯ ಪಾಲನೆ, ಶಿಕ್ಷಣ, ಮಹಿಳೆಯರು ಮತ್ತು ಮಕ್ಕಳ ಕ್ಷೇಮಾಭಿವೃದ್ಧಿ/ಕಲ್ಯಾಣ ಕಾರ್ಯಕ್ರಮಗಳು (ಡಬ್ಲ್ಯುಸಿಡಿ) ವಯೋವೃದ್ಧ ಮತ್ತು ವಿಶೇಷ ಚೇತನ ಹೊಂದಿದ ಜನತೆ (ಡಬ್ಲ್ಯುಎಡಿ), ಕೌಶಲ್ಯ ಅಭಿವೃದ್ಧಿ ಮತ್ತು ನೈರ್ಮಲ್ಯ, ಇವುಗಳಿಗೆ ಸಂಬಂಧಿಸಿದಂತೆ ಈ ಕ್ಷೇತ್ರಗಳಲ್ಲಿನ ಕಾಮಗಾರಿಗಳಿಗೆ ಹಣಕಾಸಿನ ಕಡೆಯ ಪಕ್ಷ ಶೇಕಡಾ 60ರಷ್ಟನ್ನು ಉಪಯೋಗಿಸಿಕೊಳ್ಳತಕ್ಕದ್ದು.

ii) **ಇತರೆ ಆದ್ಯತೆಯ ಕ್ಷೇತ್ರಗಳು** ಅಂದರೆ ಭೌತಿಕ ಮೂಲಸೌಕರ್ಯ (ಪಿಐ), ನೀರಾವರಿ, ಇಂಧನ ಮತ್ತು ಜಲಾನಯನ ಪ್ರದೇಶ ಅಭಿವೃದ್ಧಿ ಹಾಗೂ ಗಣಿಗಾರಿಕೆ ಜಿಲ್ಲೆಯಲ್ಲಿನ ಪರಿಸರೀಯ ಗುಣಮಟ್ಟವನ್ನು ಹೆಚ್ಚಳಗೊಳಿಸುವಂತಹ ಇತರೆ ಯಾವುದೇ ಕ್ರಮಗಳಿಗೆ ಸಂಬಂಧಿಸಿದಂತೆ ಈ ಕ್ಷೇತ್ರಗಳಲ್ಲಿನ ಕಾಮಗಾರಿಗಳಿಗೆ ಹಣಕಾಸಿನ ಶೇಕಡಾ 40ರಷ್ಟನ್ನು ಉಪಯೋಗಿಸಿಕೊಳ್ಳತಕ್ಕದ್ದು.

ಅಧಿಕ ಮಟ್ಟದ ಆದ್ಯತೆಯ ಕ್ಷೇತ್ರಗಳು ಹಾಗೂ ಇತರೆ ಆದ್ಯತೆಯ ಕ್ಷೇತ್ರಗಳ ಅಡಿಯಲ್ಲಿ ಮಂಜೂರಾಗಿದ್ದಂತಹ ಹಾಗೂ ಖರ್ಚುಗಳನ್ನು ಭರಿಸಲಾಗಿದ್ದಂತಹ ಮೊತ್ತಗಳನ್ನು ಈ ಕೆಳಗಿನ ರೇಖಾಚಿತ್ರದಲ್ಲಿ ತೋರಿಸಲಾಗಿರುವುದು.

ರೇಖಾಚಿತ್ರ ಸಂಖ್ಯೆ 5.1: ಮಾರ್ಚ್ 2023ರಲ್ಲಿದ್ದಂತೆ ಪಿಎಂಕೆಕೆಕೆವೈ ಅಡಿಯಲ್ಲಿ ಅಧಿಕ ಮಟ್ಟದ ಆದ್ಯತೆಯ ಕ್ಷೇತ್ರಗಳ ಸ್ಥಿತಿಗತಿ



ಮೂಲ: ಇಲಾಖೆಯು ಒದಗಿಸಿದ ಮಾಹಿತಿಯಂತೆ

ಅಧಿಕ ಮಟ್ಟದ ಆದ್ಯತೆಯ ಕ್ಷೇತ್ರಗಳ ಕಾಮಗಾರಿಗಳ ಕಡೆಗೆ ₹ 2,355.11 ಕೋಟಿ ಮೊತ್ತದಷ್ಟು ಒಟ್ಟಾರೆ ಹಂಚಿಕೆಯ ಪೈಕಿ ಇಪಿಪಿಸಿ (ಶೇಕಡಾ 3.88), ಡಬ್ಲ್ಯುಡಬ್ಲ್ಯುಸಿ (ಶೇಕಡಾ 5.87) ಡಬ್ಲ್ಯುಎಡಿ (ಶೇಕಡಾ 1.41), ಕೌಶಲ್ಯ ಅಭಿವೃದ್ಧಿ (ಶೇಕಡಾ 2.84) ಹಾಗೂ ನೈರ್ಮಲ್ಯ (ಶೇಕಡಾ 6.67), ಇವೇ ಮುಂತಾದ ಕ್ಷೇತ್ರಗಳಿಗೆ ಹಂಚಿಕೆ ಮಾಡಲಾಗಿದ್ದ ಮೊತ್ತವು ಕಡಿಮೆ ಪ್ರಮಾಣದಲ್ಲಿ ಆಗಿದ್ದಿತು. ಶಿಕ್ಷಣ (ಶೇಕಡಾ 29.08) ಡಿಡಬ್ಲ್ಯುಎಸ್ (ಶೇಕಡಾ 23.66) ಹಾಗೂ ಆರೋಗ್ಯ ಪಾಲನೆ[24] (ಶೇಕಡಾ 28.58), ಈ ಕ್ಷೇತ್ರಗಳಿಗೆ ಅಧಿಕ ಪ್ರಮಾಣದ ಹಣಕಾಸನ್ನು ಮಂಜೂರು ಮಾಡಲಾಗಿದ್ದಿತು ಹಾಗೂ ಆದ್ಯತೆಯನ್ನು ನೀಡಲಾಗಿದ್ದಿತು.

ರೇಖಾಚಿತ್ರ ಸಂಖ್ಯೆ 5.2 ಮಾರ್ಚ್ 2023ರಲ್ಲಿದ್ದಂತೆ ಪಿಎಂಕೆಕೆಕೆವೈ ಅಡಿಯಲ್ಲಿ ಇತರೆ ಆದ್ಯತೆಯ ಕ್ಷೇತ್ರಗಳ ಸ್ಥಿತಿಗತಿ



ಮೂಲ: ಇಲಾಖೆಯು ಒದಗಿಸಿದ ಮಾಹಿತಿಯಂತೆ

[24] ಆರೋಗ್ಯ ಪಾಲನೆ ಅಡಿಯಲ್ಲಿನ ವೆಚ್ಚವು ಯೋಜಿತ ಕಾಮಗಾರಿಗಳ ಜೊತೆಗೆ ಕೋವಿಡ್–19ರ ಕಡೆಗೂ ಒಳಗೊಂಡಿದ್ದಿತು.

ಅದೇ ರೀತಿಯಲ್ಲಿ, ಇತರೆ ಆದ್ಯತೆ ಕ್ಷೇತ್ರದ ಕಾಮಗಾರಿಗಳ ಕಡೆಗೆ ಒಟ್ಟಾರೆ ಹಂಚಿಕೆ ರೂ.1,329 ಕೋಟಿ ಮೊತ್ತದ ಪೈಕಿ ಭೌತಿಕ ಮೂಲಸೌಕರ್ಯಗಳಿಗೆ (ಶೇಕಡಾ 81.65) ಹೋಲಿಸಿದಂತೆ ನೀರಾವರಿಗೆ (ಶೇಕಡಾ 7.95), ಇಂಧನ ಮತ್ತು ಜಲಾನಯನ ಪ್ರದೇಶ ಅಭಿವೃದ್ಧಿ (ಶೇಕಡಾ 6.19), ಈ ಕ್ಷೇತ್ರಗಳಿಗೆ ಮಾಡಲಾಗಿದ್ದಂತಹ ಹಂಚಿಕೆಯು ಕಡಿಮೆ ಪ್ರಮಾಣದಲ್ಲಿ ಆಗಿದ್ದಿತು.

ಪಿಎಂಕೆಕೆಕೆವೈ ಉದ್ದೇಶಗಳು ಗಣಿಗಾರಿಕೆ ಅವಧಿಯಲ್ಲಿ ಹಾಗೂ ಆನಂತರದಲ್ಲಿ ಪರಿಸರ ಅಂಶಗಳ ಗಣಿಗಾರಿಕೆ ಜಿಲ್ಲೆಗಳಲ್ಲಿ ಜನತೆಯ ಆರೋಗ್ಯ ಹಾಗೂ ಸಾಮಾಜಿಕ–ಆರ್ಥಿಕ ಅಂಶಗಳ ಮೇಲೆ ಪ್ರತಿಕೂಲ ಪ್ರಭಾವಗಳನ್ನು ಕನಿಷ್ಠ ಮಟ್ಟಕ್ಕೆ ತರುವುದು/ತಪ್ಪಿಸುವುದಾಗಿರುವುದು ಹಾಗೂ ಗಣಿಗಾರಿಕೆ ಪ್ರದೇಶಗಳಲ್ಲಿ ತೊಂದರೆಗೆ ಈಡಾಗಿರುವ ಪ್ರದೇಶದಲ್ಲಿನ ಜನತೆಗಾಗಿ ದೀರ್ಘಾವಧಿಯಲ್ಲಿ ಊರ್ಜಿತಗೊಳ್ಳಬಲ್ಲಂತಹ ಜೀವನೋಪಾಯಗಳನ್ನು ಖಚಿತಪಡಿಸಿಕೊಳ್ಳುವುದಾಗಿರುವುದು. ಆ ಮೂಲಕ, ಕಾರ್ಯಕ್ರಮಗಳು ಮತ್ತು ವೆಚ್ಚಗಳನ್ನು ಈ ಗುರಿಗಳನ್ನು ಸಾಧಿಸುವತ್ತ ನಿರ್ದೇಶಿಸಬೇಕಾಗುತ್ತದೆ. ಆದಾಗ್ಯೂ, ಪರಿಸರ ಸಂರಕ್ಷಣೆ, ಅರಣ್ಯೀಕರಣ ಮತ್ತು ಮಾಲಿನ್ಯ ನಿಯಂತ್ರಣ ಕ್ರಮಗಳು (ಇಪಿಪಿಸಿ), ಮಹಿಳೆಯರು ಮತ್ತು ಮಕ್ಕಳ ಕಲ್ಯಾಣ (ಡಬ್ಲ್ಯೂಸಿಡಿ), ವೃದ್ಧರು ಮತ್ತು ವಿಶೇಷಚೇತನರ ಕಲ್ಯಾಣ (ಡಬ್ಲ್ಯೂಎಡಿ), ಕೌಶಲ್ಯ ಅಭಿವೃದ್ಧಿ, ನೈರ್ಮಲ್ಯ ಮತ್ತು ಪರಿಸರೀಯ ಮತ್ತು ಜೀವನದ ಗುಣಮಟ್ಟವನ್ನು ಹೆಚ್ಚಳಗೊಳಿಸುವುದು, ಇವೇ ಮುಂತಾದ ಆದ್ಯತೆಯ ಕ್ಷೇತ್ರಗಳಿಗೆ ಕಡಿಮೆ ಪ್ರಮಾಣದಲ್ಲಿ ಹಣಕಾಸಿನ ಹಂಚಿಕೆಯನ್ನು ಮಾಡಲಾಗಿದ್ದಿತು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ವಾಸ್ತವಿಕವಾಗಿ, ಗಣಿಗಾರಿಕೆ ಜಿಲ್ಲೆಗಳಲ್ಲಿ ಪರಿಸರೀಯ ಗುಣಮಟ್ಟವನ್ನು ಹೆಚ್ಚಳಗೊಳಿಸುವ ಸಲುವಾಗಿ ಖರ್ಚು ಮಾಡಲಾದಂತಹ ಮೊತ್ತವು ಭೌತಿಕ ಮೂಲಸೌಕರ್ಯಗಳ ಸೃಷ್ಟಿಯ ಕಡೆಗೆ ಭರಿಸಲಾಗಿದ್ದ ಹಣಕಾಸಿಗೆ ಹೋಲಿಸಿದಂತೆ ಕೇವಲ ಶೇಕಡಾ 8.18 ಆಗಿದ್ದಿತು. ಇದು ಕಾಮಗಾರಿಗಳನ್ನು ಪೂರ್ವಭಾವಿಯಾಗಿ ಯೋಜಿಸುವುದು ಹಾಗೂ ಆದ್ಯತೆ ನೀಡುವುದರ ಕಡೆಗೆ ಅನುಸರಿಸಲಾಗಿದ್ದಂತಹ ಮಾರ್ಗವನ್ನು ಸೂಚಿಸುತ್ತಿದ್ದಿತು.

ನಿಯಮಗಳು ಇಪಿಪಿಸಿ, ಡಬ್ಲ್ಯುಸಿಡಿ, ಡಬ್ಲ್ಯುಎಡಿ, ಕೌಶಲ್ಯ ಅಭಿವೃದ್ಧಿ, ನೈರ್ಮಲ್ಯ ಹಾಗೂ ಇತರೆ ಕ್ರಮಗಳ ಕಡೆಗೆ ಶೇಕಡಾವಾರು ವೆಚ್ಚಗಳನ್ನು ನಿರ್ದಿಷ್ಟಪಡಿಸಿರುವುದಿಲ್ಲ ಎಂಬುದಾಗಿ ಸರ್ಕಾರವು ಉತ್ತರಿಸಿತು (ಆಗಸ್ಟ್ 2024). ಮುಂದುವರೆದು, ಭವಿಷ್ಯದಲ್ಲಿ ಗಣಿಗಾರಿಕೆ ಪೀಡಿತ ಪ್ರದೇಶಗಳ ಅಭಿವೃದ್ಧಿಯನ್ನು ಪರಿಗಣಿಸಿ ವೆಚ್ಚದ ಶೇಕಡಾವಾರು ಪ್ರಮಾಣವನ್ನು ಹೆಚ್ಚಿಸಲಾಗುವುದು ಎಂಬುದಾಗಿಯೂ ತಿಳಿಸಲಾಗಿದ್ದಿತು. ನಿಯಮಗಳು ಶೇಕಡಾವಾರನ್ನು ನಿರ್ದಿಷ್ಟಪಡಿಸಿರಲಿಲ್ಲವಾದರೂ, ಕೌಶಲ್ಯ ಅಭಿವೃದ್ಧಿ, ಡಬ್ಲ್ಯುಸಿಡಿ ಇವೇ ಮುಂತಾದ ಪಿಎಂಕೆಕೆಕೆವೈ ಅಡಿಯಲ್ಲಿ ನಿರ್ದಿಷ್ಟಪಡಿಸಿರುವಂತಹ ಪ್ರಮುಖ ಕ್ಷೇತ್ರಗಳನ್ನು ಕಡೆಗಣಿಸಿರುವುದು ಸಮರ್ಥನೀಯವಾಗಿರಲಿಲ್ಲ.

5.2 ಮಾರ್ಗಸೂಚಿಗಳಲ್ಲಿ ಚಿಂತಿಸಿರದ ಕಾಮಗಾರಿಗಳನ್ನು ಸೇರ್ಪಡೆಗೊಳಿಸಿಕೊಂಡಿದ್ದುದು

ಲೆಕ್ಕಪರಿಶೋಧನೆಯು ಆಯ್ಕೆ ಮಾಡಿಕೊಂಡಿದ್ದಂತಹ ಡಿಎಂಎಫ್‌ಟಿ[25] ಕ್ರಿಯಾ ಯೋಜನೆಗಳನ್ನು ಸಮೀಕ್ಷಿಸಿತು ಹಾಗೂ ಪಿಎಂಕೆಕೆಕೆವೈ ಮಾರ್ಗಸೂಚಿಗಳಲ್ಲಿ ಚಿಂತಿಸಿರದ ಕಾಮಗಾರಿಗಳನ್ನು ಸೇರಿಸಲಾಗಿದ್ದಿತು ಹಾಗೂ ಪರಿಸರ ಸಂರಕ್ಷಣೆ ಹಾಗೂ ಮಾಲಿನ್ಯ ನಿಯಂತ್ರಣ ಕ್ರಮಗಳು ಶಿಕ್ಷಣ, ಭೌತಿಕ ಮೂಲಸೌಕರ್ಯ ನೀರಾವರಿ ಮತ್ತು ಇಂಧನ ಹಾಗೂ ಜಲಾನಯನ ಪ್ರದೇಶ ಅಭಿವೃದ್ಧಿ ಶೀರ್ಷಿಕೆಗಳ ಅಡಿಯಲ್ಲಿ ಕಾರ್ಯಗತಗೊಳಿಸಲಾಗಿದ್ದಿತು ಎಂಬುದನ್ನು ಗಮನಿಸಿತು. ವಿವರಗಳನ್ನು ಈ ಕೆಳಗಿನ ಕೋಷ್ಟಕದಲ್ಲಿ ನೀಡಲಾಗಿರುವುದು:

[25] ಬಳ್ಳಾರಿ (₹ 255.37 ಕೋಟಿ ಮೌಲ್ಯದ 169 ಕಾಮಗಾರಿಗಳು, ಚಿತ್ರದುರ್ಗ (₹ 10.25 ಕೋಟಿ ಮೌಲ್ಯದ 9 ಕಾಮಗಾರಿಗಳು, ಗದಗ (₹ 0.35 ಕೋಟಿ ಮೌಲ್ಯದ 3 ಕಾಮಗಾರಿಗಳು) ಮತ್ತು ವಿಜಯನಗರ (₹ 34.47 ಕೋಟಿ ಮೌಲ್ಯದ 31 ಕಾಮಗಾರಿಗಳು).

ಕೋಷ್ಟಕ ಸಂಖ್ಯೆ 5.1: ಕಾರ್ಯಗತಗೊಳಿಸಲಾಗಿದ್ದಂತಹ ಅನರ್ಹ ಕಾಮಗಾರಿಗಳನ್ನು ತೋರಿಸುವ ತ:ಖ್ತೆ

ಕ್ರಮ ಸಂಖ್ಯೆ	ಆದ್ಯತಾ ಕ್ಷೇತ್ರದ ಹೆಸರು (ವಲಯ)	ಡಿಎಂಎಫ್‌ಟಿ ನಿಯಮಗಳು, 2016ರ ಅಡಿಯಲ್ಲಿ ಅರ್ಹತೆಯಿರುವ ಕಾಮಗಾರಿಗಳು / ಯೋಜನೆಗಳು	ಆದ್ಯತಾ ಕ್ಷೇತ್ರದ ಅಡಿಯಲ್ಲಿ ಚಿಂತಿಸಿರದ ಕಾಮಗಾರಿಗಳನ್ನು ಅನುಮೋದಿಸಿದ್ದುದು ಹಾಗೂ ಕಾರ್ಯಗತಗೊಳಿಸಿದ್ದುದು
1	**ಪರಿಸರ ಸಂರಕ್ಷಣೆ ಹಾಗೂ ಮಾಲಿನ್ಯ ನಿಯಂತ್ರಣ ಕ್ರಮಗಳು**	• ತೊಂದರೆಗೆ ಈಡಾಗಿರುವ ಪ್ರದೇಶದಲ್ಲಿ ತ್ಯಾಜ್ಯ ಸಂಸ್ಕರಣಾ ಸ್ಥಾವರಗಳು, ನದಿ ಹರಿವುಗಳು, ಕೆರೆಗಳು, ಕೊಳಗಳು, ಅಂತರ್ಜಲ, ಇತರೆ ನೀರಿನ ಮೂಲಗಳ ಮಾಲಿನ್ಯ ತಡೆಗಟ್ಟುವಿಕೆ, ಗಣಿಗಾರಿಕೆ ಕಾರ್ಯಾಚರಣೆಗಳು ಹಾಗೂ ಅದಿರು ರಾಶಿಗಳಿಂದ ವಾಯು ಹಾಗೂ ಧೂಳಿನ ಮಾಲಿನ್ಯವನ್ನು ನಿಯಂತ್ರಿಸುವ ಕ್ರಮಗಳು, ಗಣಿ ಒಳಚರಂಡಿ ವ್ಯವಸ್ಥೆ, ಗಣಿ ಮಾಲಿನ್ಯ ತಡೆಯುವಿಕೆ ತಂತ್ರಜ್ಞಾನಗಳು, ಹಾಗೂ ಪರಿಸರ-ಸ್ನೇಹಿ ಮತ್ತು ಊರ್ಜಿತಗೊಳ್ಳಬಲ್ಲಂತಹ ಗಣಿ ಅಭಿವೃದ್ಧಿಗೆ ಅಗತ್ಯವಿರುವಂತಹ ಕಾರ್ಯೋದ್ಯುಕ್ತ ಅಥವಾ ಕೈಬಿಡಲಾಗಿರುವ ಗಣಿಗಳಿಗೆ ಕ್ರಮಗಳು ಹಾಗೂ ಇತರೆ ಗಾಳಿ, ನೀರು, ಮತ್ತು ಮೇಲ್ಮೈ ಮಾಲಿನ್ಯ ನಿಯಂತ್ರಣ ಕಾರ್ಯವಿಧಾನಗಳಿಗೆ ಕ್ರಮಗಳು.	• ಚಿತ್ರದುರ್ಗದ ಜೋಗಿಮಟ್ಟಿ ಪರಿಸರ ಸೂಕ್ಷ್ಮ ವಲಯದ ಆಡುಮಲ್ಲೇಶ್ವರ ಪ್ರಾಣಿಶಾಸ್ತ್ರ ಉದ್ಯಾನವನದ ಅಭಿವೃದ್ಧಿ (ಹುಲಿ ಆವರಣ ನಿರ್ಮಾಣ ಮತ್ತು ಬೆಳ್ಳಿ ಫೆಸೆಂಟ್, ಹಳದಿ ಚಿನ್ನದ ಫೆಸೆಂಟ್ ಮತ್ತು ಲೇಡಿ ಅಮ್ಹೆರ್ಸ್ಟ್ – (ಪಕ್ಷಿಗಳು) ಆವರಣ ನಿರ್ಮಾಣ) ಮತ್ತು ಬಿಂಕದಕಟ್ಟಿ ಮೃಗಾಲಯದಲ್ಲಿ ಚಿರತೆ ಮನೆಯ ನಿರ್ಮಾಣ. (ಎರಡು ಕಾಮಗಾರಿ ₹ 3.20 ಕೋಟಿ ವೆಚ್ಚದಲ್ಲಿ). ಗಣಿಗಾರಿಕೆಯಿಂದ (ಕಟ್ಟಡ ಕಲ್ಲು) ತೊಂದರೆಗೆ ಈಡಾಗಿರುವ ಪ್ರದೇಶದಿಂದ ಕಾಡು ಪ್ರಾಣಿಗಳು ಸಮೀಪದ ಗ್ರಾಮಗಳಿಗೆ ಬರುತ್ತವೆ. ಈ ಕಾಡು ಪ್ರಾಣಿಗಳಿಗೆ ಪುನರ್ವಸತಿ ಕಲ್ಪಿಸುವ ಸಲುವಾಗಿ ಜೋಗಿಮಟ್ಟಿ ಪರಿಸರ ಸೂಕ್ಷ್ಮತೆಯಿಂದ ಕೂಡಿದ ವಲಯ, ಚಿತ್ರದುರ್ಗ, ಇಲ್ಲಿ ಆಡುಮಲ್ಲೇಶ್ವರ ಪ್ರಾಣಿವಿಜ್ಞಾನ ಉದ್ಯಾನವನವನ್ನು ಅಭಿವೃದ್ಧಿಪಡಿಸಲಾಯಿತು ಎಂಬುದಾಗಿ ಸರ್ಕಾರವು ಉತ್ತರಿಸಿತು (ಆಗಸ್ಟ್ 2024). ಅರಣ್ಯ ಪ್ರದೇಶಗಳಲ್ಲಿ ಗಣಿಗಾರಿಕೆಯನ್ನು ಪ್ರತಿಬಂಧಿಸಲಾಗಿರುವುದರಿಂದ ಹಾಗೂ ಪ್ರಾಣಿ ಸಂಗ್ರಹಾಲಯ ಮತ್ತು ಪಕ್ಷಿಗಳ ನೆಲೆಸಿರುವಿಕೆಗಾಗಿ ವ್ಯವಸ್ಥೆಯ ನಿರ್ಮಾಣವು ಪರಿಸರೀಯ ಸಂರಕ್ಷಣೆ ಮತ್ತು ಮಾಲಿನ್ಯ ನಿಯಂತ್ರಣ ಕ್ರಮಗಳ ಅಡಿಯಲ್ಲಿ ಬರುವುದಿಲ್ಲವಾದ್ದರಿಂದ ಉತ್ತರವು ಒಪ್ಪುವಂತಿಲ್ಲ.
			**ಛಾಯಾಚಿತ್ರ ಸಂಖ್ಯೆ 5.1 ಚಿತ್ರದುರ್ಗ ಜಿಲ್ಲೆಯ ಜೋಗಿಮಟ್ಟಿ ಪರಿಸರ ಸೂಕ್ಷ್ಮತೆಯಿಂದ ಕೂಡಿದ ವಲಯದಲ್ಲಿ ಡಿಎಂಎಫ್‌ಟಿ ಹಣಕಾಸಿನಿಂದ ಪಕ್ಷಿಗಳ ನೆಲೆಸಿರುವಿಕೆ ವ್ಯವಸ್ಥೆಯನ್ನು ನಿರ್ಮಿಸಿರುವುದು.**
2	**ಶಿಕ್ಷಣ**	• ಶಾಲಾ ಕಟ್ಟಡಗಳ ನಿರ್ಮಾಣ, ಹೆಚ್ಚುವರಿ ತರಗತಿ ಕೊಠಡಿಗಳು, ಪ್ರಯೋಗಾಲಯಗಳು, ಗ್ರಂಥಾಲಯಗಳು, ಕಲೆ ಮತ್ತು ಕರಕುಶಲ ಕೊಠಡಿಗಳು, ಶೌಚಾಲಯ ಬ್ಲಾಕ್‌ಗಳು, ಕುಡಿಯುವ ನೀರಿನ ಸೌಲಭ್ಯಗಳು, ದೂರದ ಪ್ರದೇಶಗಳಲ್ಲಿ ವಿದ್ಯಾರ್ಥಿಗಳು ಅಥವಾ ಶಿಕ್ಷಕರಿಗೆ	• ಯೋಜನೆಯ ಮಾರ್ಗಸೂಚಿಗಳಲ್ಲಿ ಚಿಂತಿಸಿರದಂತಹ[26] ಬ್ಲಾಕು ಶಿಕ್ಷಣ ಅಧಿಕಾರಿಯವರ ಕಚೇರಿ ಕಟ್ಟಡ ನಿರ್ಮಾಣ, ಸಾರ್ವಜನಿಕ ಬಳಕೆಗಾಗಿ ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮಕ್ಕೆ (ಕೆಕೆಆರ್‌ಟಿಸಿ) ಬಸ್ಸುಗಳನ್ನು ಒದಗಿಸಿರುವುದು, ತಾಲ್ಲೂಕು ಕ್ರೀಡಾಂಗಣಗಳನ್ನು

[26] ಗಣಿಗಾರಿಕಾ ಚಟುವಟಿಕೆಗಳಿಂದ ನೇರವಾಗಿ/ಪರೋಕ್ಷವಾಗಿ ತೊಂದರೆಗೀಡಾದ ವ್ಯಕ್ತಿಗಳನ್ನು ಗುರುತಿಸುವ ನಿರ್ದಿಷ್ಟ ದತ್ತಾಂಶಗಳ ಅನುಪಸ್ಥಿಯಲ್ಲಿ ಇವನ್ನು ಪಿಎಂಕೆಕೆಕೆವೈಯಡಿಯಲ್ಲಿ ಅಸ್ವೀಕಾರಾರ್ಹ ಎಂದು ಲೆಕ್ಕಪರಿಶೋಧನೆಯು ಪರಿಗಣಿಸಿದೆ.

ಕ್ರಮ ಸಂಖ್ಯೆ	ಆದ್ಯತಾ ಕ್ಷೇತ್ರದ ಹೆಸರು (ವಲಯ)	ಡಿಎಂಎಫ್‌ಟಿ ನಿಯಮಗಳು, 2016ರ ಅಡಿಯಲ್ಲಿ ಅರ್ಹತೆಯಿರುವ ಕಾಮಗಾರಿಗಳು / ಯೋಜನೆಗಳು	ಆದ್ಯತಾ ಕ್ಷೇತ್ರದ ಅಡಿಯಲ್ಲಿ ಚಿಂತಿಸಿರದ ಕಾಮಗಾರಿಗಳನ್ನು ಅನುಮೋದಿಸಿದ್ದುದು ಹಾಗೂ ಕಾರ್ಯಗತಗೊಳಿಸಿದ್ದುದು
		ವಸತಿ ನಿಲಯಗಳು, ಕ್ರೀಡಾ ಮೂಲಸೌಕರ್ಯ, ಶಿಕ್ಷಕರು ಅಥವಾ ಇತರ ಸಹಾಯಕ ಸಿಬ್ಬಂದಿಯನ್ನು ತೊಡಗಿಸಿಕೊಳ್ಳುವುದು, ಇ–ಕಲಿಕಾ ವ್ಯವಸ್ಥೆ, ಸಾರಿಗೆ ವ್ಯವಸ್ಥೆ (ಬಸ್/ವ್ಯಾನ್/ಸೈಕಲ್‌ಗಳು/ರಿಕ್ಷಾಗಳು ಇತ್ಯಾದಿ) ಮತ್ತು ಪೌಷ್ಟಿಕಾಂಶ ಸಂಬಂಧಿತ ಕಾರ್ಯಕ್ರಮಗಳು.	ಅಭಿವೃದ್ಧಿಪಡಿಸಿರುವುದು, ವಿಶ್ವವಿದ್ಯಾನಿಲಯ ಮೇಲ್ದರ್ಜೆಗೇರಿಸಿರುವುದು, ಮುಖ್ಯೋಪಾಧ್ಯಾರು ಮತ್ತು ಶಿಕ್ಷಕರುಗಳಿಗೆ ಹಣಕಾಸಿನ ಸಹಾಯ, ವಿದ್ಯಾರ್ಥಿಗಳಿಗೆ ಶಿಷ್ಯವೇತನ (ಎಸ್‌ಎಸ್‌ಎಲ್‌ಸಿ, ಪಿಯುಸಿ, ಐಟಿಐ, ಡಿಪ್ಲೊಮಾ, ತಾಂತ್ರಿಕ, ಕಾನೂನು, ನರ್ಸಿಂಗ್, ಸ್ನಾತಕ ಹಾಗೂ ಸ್ನಾತಕೋತ್ತರ), (107 ಕಾಮಗಾರಿಗಳು ₹ 119.78 ಕೋಟಿ ವೆಚ್ಚದಲ್ಲಿ). ಶಿಕ್ಷಣ ವಲಯದಲ್ಲಿ ಕೈಗೆತ್ತಿಕೊಳ್ಳಲಾದಂತಹ ಕಾಮಗಾರಿಗಳಿಗೆ ಡಿಎಂಎಫ್ ಆಡಳಿತಾತ್ಮಕ ಅನುಮೋದನೆಯನ್ನು ಸಹ ಪಡೆದುಕೊಳ್ಳಲಾಗಿದ್ದಿತು ಎಂಬುದಾಗಿ ಸರ್ಕಾರವು ಉತ್ತರಿಸಿತು (ಆಗಸ್ಟ್ 2024). ಪಿಎಂಕೆಕೆಕೆವೈ ಮಾರ್ಗಸೂಚಿಗಳು ಬ್ಲಾಕು ಶಿಕ್ಷಣ ಅಧಿಕಾರಿಯವರ ಕಛೇರಿಗೆ ಕಟ್ಟಡ ನಿರ್ಮಾಣ, ವಿಶ್ವವಿದ್ಯಾನಿಲಯವನ್ನು ಮೇಲ್ದರ್ಜೆಗೇರಿಸುವಿಕೆ, ಮುಖ್ಯೋಪಾದ್ಯಾಯರು ಮತ್ತು ಶಿಕ್ಷಕರುಗಳಿಗೆ ಹಣಕಾಸು ಸಹಾಯ, ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ಹಾಗೂ ಸಾರ್ವಜನಿಕ ಸಾರಿಗೆ, ಇತ್ಯಾದಿಗಳಿಗಿಂತ ಮಿಗಿಲಾಗಿ ಗುಣಮಟ್ಟದ ಶಿಕ್ಷಣ ನೀಡಿಕೆಗಾಗಿ ಮೂಲಸೌಕರ್ಯ ನಿರ್ಮಾಣ ಮಾಡುವುದಾಗಿರುವುದರಿಂದ ಉತ್ತರವು ಒಪ್ಪುವಂತಿರಲಿಲ್ಲ.

ಛಾಯಾಚಿತ್ರ ಸಂಖ್ಯೆ 5.2: ಬಳ್ಳಾರಿ ಜಿಲ್ಲೆಯಲ್ಲಿ ಡಿಎಂಎಫ್‌ಟಿ ಹಣಕಾಸಿನಿಂದ ವಿಎಸ್‌ಕೆ ವಿಶ್ವವಿದ್ಯಾನಿಲಯವನ್ನು ಮೇಲ್ದರ್ಜೆಗೇರಿಸಿರುವುದು.



ಛಾಯಾಚಿತ್ರ ಸಂಖ್ಯೆ 5.3: ಬಳ್ಳಾರಿ ಜಿಲ್ಲೆಯ ಡಿಎಂಎಫ್‌ಟಿ ಹಣಕಾಸಿನಿಂದ ಸಾರ್ವಜನಿಕ ಬಳಕೆಗಾಗಿ ಕೆಕೆಆರ್‌ಟಿಸಿಗೆ ಬಸ್ಸುಗಳನ್ನು ಒದಗಿಸಿರುವುದು

3	**ಭೌತಿಕ ಮೂಲಸೌಕರ್ಯ**	• ರಸ್ತೆ, ಸೇತುವೆಗಳು, ರೈಲ್ವೆ ಮತ್ತು ಜಲ ಮಾರ್ಗಗಳ ಯೋಜನೆಗಳು ಮುಂತಾದವುಗಳಂತಹ ಅಗತ್ಯವಿರುವ ಭೌತಿಕ ಮೂಲಸೌಕರ್ಯವನ್ನು ಒದಗಿಸುವುದು.	• ಸಭಾಂಗಣ, ಹೈ–ಮಾಸ್ಟ್ ದೀಪಗಳನ್ನು ಹಾಕಿರುವುದು, ಪಿಎಂಎವೈ ಯೋಜನೆ ಅಡಿಯಲ್ಲಿ ಮನೆಗಳ ನಿರ್ಮಾಣಕ್ಕಾಗಿ ಫಲಾನುಭವಿಗಳ ಪರವಾಗಿ ಕಾಣಿಕೆ ನೀಡಿಕೆ, ಪೋಲೀಸ್ ಸೂಪರಿಂಟೆಂಡೆಂಟ್‌ರವರ ಕಚೇರಿ ಕಟ್ಟಡವನ್ನು ಮೇಲ್ದರ್ಜೆಗೇರಿಸಿರುವುದು, ಮತ್ತು ಸಭಾ ಭವನ, ಇತ್ಯಾದಿ, ಕಂದಾಯ ಇಲಾಖೆಗಾಗಿ ನಾಡ ಕಛೇರಿ ಮತ್ತು ಗ್ರಾಮ ಲೆಕ್ಕಿಗರ ಕಚೇರಿ ಕಟ್ಟಡ ನಿರ್ಮಾಣ, ಪೋಲೀಸ್ ಠಾಣೆಗೆ ಮೂಲ ಸೌಕರ್ಯ ಮತ್ತು ಸಿಬ್ಬಂದಿ ವಸತಿಗಳು, ಟಿಎಂಸಿ ಕಟ್ಟಡ ನಿರ್ಮಾಣ, ಜಿಲ್ಲಾಧಿಕಾರಿಯವರ ಹೊಸ ಕಚೇರಿಗೆ ಮೂಲಸೌಕರ್ಯ, ಮಿನಿ ವಿಧಾನ ಸೌಧಕ್ಕೆ ಭೂ ಸ್ವಾಧೀನ, ತಾಲ್ಲೂಕು ಡಿಎಂಎಫ್ ಕಚೇರಿಯ

<table>
<tr><th>ಕ್ರಮ ಸಂಖ್ಯೆ</th><th>ಆದ್ಯತಾ ಕ್ಷೇತ್ರದ ಹೆಸರು (ವಲಯ)</th><th>ಡಿಎಂಎಫ್‌ಟಿ ನಿಯಮಗಳು, 2016ರ ಅಡಿಯಲ್ಲಿ ಅರ್ಹತೆಯಿರುವ ಕಾಮಗಾರಿಗಳು / ಯೋಜನೆಗಳು</th><th>ಆದ್ಯತಾ ಕ್ಷೇತ್ರದ ಅಡಿಯಲ್ಲಿ ಚಿಂತಿಸಿರದ ಕಾಮಗಾರಿಗಳನ್ನು ಅನುಮೋದಿಸಿದ್ದುದು ಹಾಗೂ ಕಾರ್ಯಗತಗೊಳಿಸಿದ್ದುದು</th></tr>
<tr><td></td><td></td><td></td><td>ಆಡಳಿತಾತ್ಮಕ ಕಟ್ಟಡ (ಮಿನಿ ವಿಧಾನ ಸೌಧದಲ್ಲಿ) ನಿರ್ಮಾಣ, ತಾಲ್ಲೂಕಿನಲ್ಲಿ ಹಾಕಿ ಮತ್ತು ಒಳಾಂಗಣ ಕ್ರೀಡಾಂಗಣ ನಿರ್ಮಾಣ, ಗ್ರಾಮ ಪಂಚಾಯತಿ ಕಟ್ಟಡ ನಿರ್ಮಾಣ, ಹೊಸ ಟ್ರಾನ್ಸ್‌ಫಾರ್ಮರುಗಳ ಸ್ಥಾಪನೆ, ಖನಿಜ ತನಿಖಾ ಠಾಣೆ, ಇತ್ಯಾದಿ, ಪಿಎಂಕೆಕೆಕೆವೈ ಮಾರ್ಗಸೂಚಿಗಳಲ್ಲಿನ ಭೌತಿಕ ಮೂಲಸೌಕರ್ಯ ಶೀರ್ಷಿಕೆ ಅಡಿಯಲ್ಲಿ ವ್ಯಾಪಿಸಿರುವುದಿಲ್ಲ
(96 ಕಾಮಗಾರಿಗಳು ₹ 152.06 ಕೋಟಿ ವೆಚ್ಚದಲ್ಲಿ)</td></tr>
<tr><td colspan="2">

ಛಾಯಾಚಿತ್ರ ಸಂಖ್ಯೆ 5.4: ಡಿಎಂಎಫ್‌ಟಿ ಹಣಕಾಸಿನ ಅಡಿಯಲ್ಲಿ ಬಳ್ಳಾರಿ ಜಿಲ್ಲೆಯ ಸಂಡೂರಿನಲ್ಲಿ ಸಾರ್ವಜನಿಕ ಉದ್ಯಾನವನದಲ್ಲಿ ಹಿರಿಯ ನಾಗರಿಕರಿಗಾಗಿ ಮುಕ್ತ ಜಿಮ್ ನಿರ್ಮಾಣ.

</td><td colspan="2">

ಛಾಯಾಚಿತ್ರ ಸಂಖ್ಯೆ 5.5: ಡಿಎಂಎಫ್‌ಟಿ ಹಣಕಾಸಿನ ಅಡಿಯಲ್ಲಿ ಬಳ್ಳಾರಿ ಜಿಲ್ಲೆಯ ಚೋರನೂರಿನಲ್ಲಿ ಪೊಲೀಸ್ ಠಾಣೆ ನಿರ್ಮಾಣ.

</td></tr>
<tr><td>4</td><td>ನೀರಾವರಿ</td><td>• ನೀರಾವರಿಯ ಬದಲಿ ಮೂಲಗಳನ್ನು ಅಭಿವೃದ್ಧಿಪಡಿಸುವುದು, ಸೂಕ್ತವಾದಂತಹ ಮತ್ತು ಅತ್ಯಾಧುನಿಕ ನೀರಾವರಿ ತಂತ್ರಜ್ಞಾನಗಳನ್ನು ಅಳವಡಿಸಿಕೊಳ್ಳುವುದು.</td><td>• ₹ 0.50 ಕೋಟಿ ಮೊತ್ತದಷ್ಟು ವೆಚ್ಚದಲ್ಲಿ ಬಳ್ಳಾರಿ ಜಿಲ್ಲೆಯ ಸಂಡೂರು ತಾಲ್ಲೂಕಿನ ತೋರಣಗಲ್ಲಿನಲ್ಲಿ ರೈತ ಸಂಪರ್ಕ ಕೇಂದ್ರ ಕಟ್ಟಡ ನಿರ್ಮಾಣ, ಈ ಕಾಮಗಾರಿಯು ಯೋಜನೆಯ ಮಾರ್ಗಸೂಚಿಗಳ ಅಡಿಯಲ್ಲಿ ವ್ಯಾಪಿಸಿರುವುದಿಲ್ಲ.
(ಒಂದು ಕಾಮಗಾರಿ ₹ 0.50 ಕೋಟಿ ವೆಚ್ಚದಲ್ಲಿ).
ವೈಜ್ಞಾನಿಕವಾದಂತಹ ಕೃಷಿ ತಂತ್ರಜ್ಞಾನದ ಬಗ್ಗೆ ರೈತರುಗಳಿಗೆ ಮಾರ್ಗದರ್ಶನ ನೀಡುವ ಸಲುವಾಗಿ ರೈತ ಸಂಪರ್ಕ ಕೇಂದ್ರವನ್ನು ನಿರ್ಮಿಸಲಾಯಿತು ಎಂಬುದಾಗಿ ಸರ್ಕಾರವು ಉತ್ತರಿಸಿತು (ಆಗಸ್ಟ್ 2024).</td></tr>
<tr><td>5</td><td>ಇಂಧನ ಮತ್ತು ಜಲಾನಯನ ಪ್ರದೇಶ ಅಭಿವೃದ್ಧಿ</td><td>• ಇಂಧನದ ಬದಲಿ ಮೂಲಗಳನ್ನು (ಅತೀಸಣ್ಣ ಪ್ರಮಾಣದ ಜಲ-ವಿದ್ಯುತ್ ಯೋಜನೆಯೂ ಒಳಗೊಂಡಂತೆ) ಅಭಿವೃದ್ಧಿಪಡಿಸುವುದು ಹಾಗೂ ಮಳೆ ನೀರು ಕೊಯ್ಲು ವ್ಯವಸ್ಥೆ, ಹಣ್ಣಿನ ತೋಟ/ ಫಲೋದ್ಯಾನಗಳ ಅಭಿವೃದ್ಧಿ, ಸಮಗ್ರ ತೋಟಗಾರಿಕೆ ಹಾಗೂ ವಿವಿಧ ಅರಣ್ಯ ಸಂಪನ್ಮೂಲಗಳ ನಿರ್ವಹಣೆ ಹಾಗೂ ಜಲಾನಯನ ಪ್ರದೇಶಗಳನ್ನು ಪುನರ್‌ಚೈತನ್ಯಗೊಳಿಸುವುದು.</td><td>• ಸಂಡೂರು ತಾಲ್ಲೂಕಿನಲ್ಲಿ ಇಂಧನದ ಬದಲಿ ಮೂಲಗಳು ಎಂಬುದಾಗಿ ಪರಿಗಣಿಸಲು ಸಾಧ್ಯವಿರದ ವಿದ್ಯುತ್ ಉಪ-ಸ್ಟೇಷನ್ನುಗಳ (110ಕೆವಿ, 66 ಕೆವಿ ಮತ್ತು 33 ಕೆವಿ) ಸ್ಥಾಪನೆ (ಮೂರು ಕಾಮಗಾರಿಗಳು ₹ 19.00 ಕೋಟಿ ವೆಚ್ಚದಲ್ಲಿ).
ಗಣಿಗಾರಿಕೆಯಿಂದ ತೊಂದರೆಗೆ ಈಡಾಗಿದ್ದ ಪ್ರದೇಶದಲ್ಲಿ ವಸತಿ ಮತ್ತು ಕೃಷಿ ಉದ್ದೇಶಕ್ಕಾಗಿ ಅವಿರತವಾಗಿ ವಿದ್ಯುತ್ ಒದಗಿಸುವ ಸಲುವಾಗಿ ಉಪ-ಸ್ಟೇಷನ್ನುಗಳನ್ನು ನಿರ್ಮಿಸಲಾಗಿದ್ದಿತು ಎಂಬುದಾಗಿ ಸರ್ಕಾರವು ಉತ್ತರಿಸಿತು (ಆಗಸ್ಟ್ 2024).</td></tr>
<tr><td>6</td><td>ಇತರೆ ಯಾವುದೇ ಕ್ರಮಗಳು</td><td>• ಗಣಿಗಾರಿಕೆ ಜಿಲ್ಲೆಯಲ್ಲಿ ಪರಿಸರೀಯ ಗುಣಮಟ್ಟವನ್ನು ಹೆಚ್ಚಳಗೊಳಿಸುವ ಸಲುವಾಗಿ ಇತರೆ ಯಾವುದೇ ಕ್ರಮಗಳು.</td><td>• ಬಳ್ಳಾರಿ ನಗರದಲ್ಲಿ ಎಲ್ಲಾ ಪ್ರಮುಖ ವೃತ್ತಗಳಿಗೆ ಸಿಸಿಟಿವಿ ನೆಟ್‌ವರ್ಕ್ ವ್ಯವಸ್ಥೆ ಸರಬರಾಜು ಮತ್ತು ಸ್ಥಾಪನೆ, ಪೊಲೀಸ್ ಸೂಪರಿಂಟೆಂಡೆಂಟ್‌ರವರ ಕಚೇರಿಯಲ್ಲಿ ಪ್ರಸಕ್ತ ಇರುವಂತಹ ಉಗ್ರಾಣವನ್ನು</td></tr>
</table>

ಕ್ರಮ ಸಂಖ್ಯೆ	ಆದ್ಯತಾ ಕ್ಷೇತ್ರದ ಹೆಸರು (ವಲಯ)	ಡಿಎಂಎಫ್‌ಟಿ ನಿಯಮಗಳು, 2016ರ ಅಡಿಯಲ್ಲಿ ಅರ್ಹತೆಯಿರುವ ಕಾಮಗಾರಿಗಳು / ಯೋಜನೆಗಳು	ಆದ್ಯತಾ ಕ್ಷೇತ್ರದ ಅಡಿಯಲ್ಲಿ ಚಿಂತಿಸಿರದ ಕಾಮಗಾರಿಗಳನ್ನು ಅನುಮೋದಿಸಿದ್ದುದು ಹಾಗೂ ಕಾರ್ಯಗತಗೊಳಿಸಿದ್ದುದು
			₹ 1.85 ಕೋಟಿ ವೆಚ್ಚದಲ್ಲಿ ಸಿಸಿಟಿವಿ ನಿಯಂತ್ರಣ ಕೊಠಡಿಯನ್ನಾಗಿ ಅಭಿವೃದ್ಧಿಪಡಿಸುವುದು, ಇದು ಪಿಎಂಕೆಕೆಕೆವೈ ಮಾರ್ಗಸೂಚಿಗಳಲ್ಲಿನ ಅಡಿಯಲ್ಲಿ ಇತರೆ ಯಾವುದೇ ಕ್ರಮಗಳ ಅಡಿಯಲ್ಲಿ ವ್ಯಾಪಿಸಿರುವುದಿಲ್ಲ. (ಎರಡು ಕಾಮಗಾರಿಗಳು ರೂಪಾಯಿಗಳು ಎರಡು ಕೋಟಿ ವೆಚ್ಚದಲ್ಲಿ) ಜಿಲ್ಲೆಯಲ್ಲಿ ಖನಿಜ ರವಾನೆ ವಾಹನಗಳನ್ನು ಮೇಲ್ವಿಚಾರಣೆ ಮಾಡುವ ಸಲುವಾಗಿ ಸಿಸಿಟಿವಿ ಅಳವಡಿಸಲಾಯಿತು ಎಂಬುದಾಗಿ ಸರ್ಕಾರವು ಉತ್ತರಿಸಿತು (ಆಗಸ್ಟ್ 2024). ಸಿಸಿಟಿವಿ ನೆಟ್‌ವರ್ಕ್ ಡಿಎಂಎಫ್‌ಟಿ ನಿಯಮಗಳು, 2016ರ ಮಾರ್ಗಸೂಚಿಗಳ ಅಡಿಯಲ್ಲಿ ಚಿಂತಿಸಿರುವಂತೆ ಪರಿಸರೀಯ ಗುಣಮಟ್ಟವನ್ನು ಹೆಚ್ಚಳಗೊಳಿಸುವುದಿಲ್ಲವಾದ್ದರಿಂದ ಉತ್ತರವು ಒಪ್ಪುವಂತಿರಲಿಲ್ಲ.

ಅನರ್ಹ ಕಾಮಗಾರಿಗಳ ಸಂಖ್ಯೆ, ಹಂಚಿಕೆ ಮಾಡಲಾಗಿದ್ದ ಮೊತ್ತಗಳು ಹಾಗೂ ಅಂತಹ ಕಾಮಗಾರಿಗಳ ಮೇಲೆ ಖರ್ಚು ಮಾಡಲಾಗಿದ್ದಂತಹ ಮೊತ್ತಗಳ ಸಂಕ್ಷಿಪ್ತಗೊಳಿಸಲ್ಪಟ್ಟಿರುವಂತಹ ಸ್ಥಿತಿಗತಿಗಳನ್ನು ಈ ಕೆಳಗೆ ನೀಡಲಾಗಿರುವುದು:

ಕೋಷ್ಟಕ ಸಂಖ್ಯೆ 5.2: ಅನರ್ಹ ಕಾಮಗಾರಿಗಳಿಗೆ ಹಂಚಿಕೆಯಾದ ಮತ್ತು ಖರ್ಚು ಮಾಡಿದ ಮೊತ್ತವನ್ನು ತೋರಿಸುವ ತಃಖ್ತೆ

ಕ್ರಮ ಸಂಖ್ಯೆ	ಜಿಲ್ಲೆ	ಅನರ್ಹ ಕಾಮಗಾರಿಗಳ ಸಂಖ್ಯೆ	ಹಂಚಿಕೆ ಮಾಡಲಾಗಿದ್ದ ಮೊತ್ತ	ಅದಕ್ಕೆ ಪ್ರತಿಯಾಗಿ ಖರ್ಚು ಮಾಡಲಾಗಿದ್ದಂತಹ ಮೊತ್ತ
			(₹ ಕೋಟಿಗಳಲ್ಲಿ)	
1	**ಬಳ್ಳಾರಿ**	169	255.37	107.70
2	**ಚಿತ್ರದುರ್ಗ**	9	10.25	6.58
3	**ವಿಜಯನಗರ**	31	34.47	19.29
4	**ಗದಗ**	3	0.35	0.20
	ಒಟ್ಟು	**212**	**300.44**	**133.77**

ಮೂಲ: ಇಲಾಖೆಯು ಒದಗಿಸಿರುವ ಮಾಹಿತಿಯನ್ನು ಲೆಕ್ಕಪರಿಶೋಧನೆಯು ಸಂಕಲಿಸಿರುವುದು.

ಮೇಲೆ ತಿಳಿಸಲಾದಂತಹ ನಾಲ್ಕು ಜಿಲ್ಲೆಗಳಲ್ಲಿ ₹ 2,670.08 ಕೋಟಿ ಮೊತ್ತದಷ್ಟು ಹಂಚಿಕೆ ಮಾಡಲಾಗಿದ್ದ ಮೊತ್ತದಲ್ಲಿ ಕೈಗೆತ್ತಿಕೊಳ್ಳಲಾಗಿದ್ದಂತಹ 3,584 ಕಾಮಗಾರಿಗಳಿಗೆ ಪ್ರತಿಯಾಗಿ, ₹ 300.44 ಕೋಟಿ (ಶೇಕಡಾ 11.25) ಮೊತ್ತವನ್ನು ಮಾರ್ಗಸೂಚಿಗಳಲ್ಲಿ ಚಿಂತಿಸಿರದ 212 ಕಾಮಗಾರಿಗಳ (ಒಟ್ಟಾರೆ ಕಾಮಗಾರಿಗಳ ಶೇಕಡಾ 5.91) ಕಡೆಗೆ ಹಂಚಿಕೆ ಮಾಡಿದ್ದಿತು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು.

ಶಿಫಾರಸು:

6. ಪಿಎಂಕೆಕೆಕೆವೈ ಮಾರ್ಗಸೂಚಿಗಳು ಹಾಗೂ ಡಿಎಂಎಫ್‌ಟಿ ನಿಯಮಗಳು, 2016ರ ಅನುವುಗಳ ಅನುಸಾರ ಕಾಮಗಾರಿಗಳನ್ನು ಪೂರ್ವಭಾವಿಯಾಗಿ ಯೋಜಿಸುವ ಸಲುವಾಗಿ ಹಾಗೂ ಕಾರ್ಯಗತಗೊಳಿಸುವ ಸಲುವಾಗಿ ಕ್ರಮಗಳನ್ನು ಕೈಗೊಳ್ಳತಕ್ಕದ್ದು.

5.3 ಡಿಎಂಎಫ್‌ಟಿ ಹಣಕಾಸನ್ನು ನಿಯಮಬಾಹಿರವಾಗಿ ಹಂಚಿಕೆ ಮಾಡಿದ್ದುದು

ಡಿಎಂಎಫ್‌ಟಿ, ಬಳ್ಳಾರಿ, ಇವರು ಡಿಎಂಎಫ್‌ಟಿ ನಿಯಮಗಳ ಇತರೆ ಆದ್ಯತೆಯ ಕ್ಷೇತ್ರಗಳ ಭೌತಿಕ ಮೂಲಸೌಕರ್ಯ ವಲಯದ ಅಡಿಯಲ್ಲಿ ₹ 15.00 ಕೋಟಿ ಮೊತ್ತವನ್ನು ಹಂಚಿಕೆ ಮಾಡಿದರು ಹಾಗೂ ಅದರ ಪೈಕಿ ₹ 7.26 ಕೋಟಿ ಮೊತ್ತವನ್ನು ಪ್ರಧಾನ ಮಂತ್ರಿ ವಸತಿ ಯೋಜನೆ (ನಗರ) – ಎಲ್ಲರಿಗೂ ವಸತಿ ಸೌಲಭ್ಯ 2022 ಇದರ ಅಡಿಯಲ್ಲಿ ಮೆ. ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ[27], ಬೆಂಗಳೂರು, ಇವರಿಗೆ ಫಲಾನುಭವಿಗಳ ಪಾಲಿನ ಕಡೆಗೆ ಬಿಡುಗಡೆಗೊಳಿಸಿದರು (19 ಸೆಪ್ಟಂಬರ್ 2022). ಮುಂದುವರೆದು, ₹ 5.00 ಕೋಟಿ ಮೊತ್ತದಷ್ಟು ಹೆಚ್ಚುವರಿ ಅನುದಾನವನ್ನೂ ಸಹ ಮೀಸಲಿರಿಸಲಾಗಿದ್ದಿತು (9 ಡಿಸೆಂಬರ್ 2022), ಈ ಕ್ರಮಕ್ಕಾಗಿ ಆಡಳಿತ ಮಂಡಳಿಯ ಅನುಮೋದನೆಯನ್ನು ಇನ್ನೂ ಪಡೆದುಕೊಳ್ಳಬೇಕಿದ್ದಿತು (ಸೆಪ್ಟಂಬರ್ 2023).

ಇತರೆ ಆದ್ಯತೆಯ ಕ್ಷೇತ್ರಗಳ ಅಡಿಯಲ್ಲಿ ರಸ್ತೆ, ಸೇತುವೆಗಳು, ರೈಲು ಮಾರ್ಗಗಳು ಹಾಗೂ ಜಲ ಮಾರ್ಗಗಳ ಯೋಜನೆಗಳು, ಇವೇ ಮುಂತಾದವುಗಳಂತಹ ಅಗತ್ಯವಿರುವಂತಹ ಭೌತಿಕ ಮೂಲಸೌಕರ್ಯವನ್ನು ಒದಗಿಸುವುದನ್ನು ಡಿಎಂಎಫ್‌ಟಿ ನಿಯಮಗಳು ಚಿಂತಿಸಿರುತ್ತವೆ ಅವು, ಕೇಂದ್ರ ಪುರಸ್ಕೃತ ಯೋಜನೆ ಅಡಿಯಲ್ಲಿ ಫಲಾನುಭವಿಗಳ ಕಾಣಿಕೆಯ ಕಡೆಗೆ ಸಹಾಯಧನಗಳಿಗೆ ಅನುವು ಇವೇ ಮುಂತಾದವುಗಳಂತಹ ಯಾವುದೇ ವೈಯಕ್ತಿಕ ಪ್ರಯೋಜನ ಕಾರ್ಯಕ್ರಮಗಳನ್ನು ಒಳಗೊಂಡಿರುವುದಿಲ್ಲ.

ಕರ್ನಾಟಕ ಸರ್ಕಾರವು ಡಿಎಂಎಫ್‌ಟಿ ನಿಯಮಗಳ ಅಡಿಯಲ್ಲಿ ಕ್ರಿಯಾ ಯೋಜನೆಗಳನ್ನು ಅನುಮೋದಿಸುವಲ್ಲಿ ಅಧಿಕಾರಗಳನ್ನು ಪ್ರದತ್ತಗೊಳಿಸುವ ಸಲುವಾಗಿ ನಿರ್ದೇಶನಗಳನ್ನು ನೀಡಿದ್ದಿತು (ಮಾರ್ಚ್ 2018) ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಇದರ ಅನುಸಾರ ₹ 5.00 ಕೋಟಿ ಹಾಗೂ ₹ 10.00 ಕೋಟಿ ಮೊತ್ತದ ನಡುವೆ ವೆಚ್ಚಗಳನ್ನು ಒಳಗೊಂಡಿರುವಂತಹ ಯೋಜನೆಗಳು/ಕಾಮಗಾರಿಗಳಿಗೆ ಅನುಮೋದನೆ ನೀಡಲು ಕಾರ್ಯದರ್ಶಿಯವರು (ಗಣಿಗಾರಿಕೆ), ಇವರಿಗೆ ಅಧಿಕಾರವನ್ನು ಪ್ರದತ್ತಗೊಳಿಸಲಾಗಿದ್ದಿತು. ಮುಂದುವರೆದು, ಕರ್ನಾಟಕ ಸರ್ಕಾರ (ವ್ಯವಹಾರ ವಹಿವಾಟು) ನಿಯಮಗಳು, 1977ರ (ಮೊದಲ ಷೆಡ್ಯೂಲಿನ ಕ್ರಮ ಸಂಖ್ಯೆ 15) ನಿಯಮ 20(1)(ಎ) ಮತ್ತು 21ರ ಅನುಸಾರ, ಮೂಲ ಅಂದಾಜುಗಳು ₹ 10.00 ಕೋಟಿ ಮೊತ್ತವನ್ನು ಮೀರಿದ್ದಲ್ಲಿ ಕಾಮಗಾರಿಗಳ ಅಂದಾಜುಗಳನ್ನು ಆಡಳಿತಾತ್ಮಕ ಅನುಮೋದನೆಗಾಗಿ ಸಚಿವ ಸಂಪುಟದ ಮುಂದೆ ಮಂಡಿಸತಕ್ಕದ್ದು. ಆದಾಗ್ಯೂ, ಡಿಎಂಎಫ್‌ಟಿ, ಬಳ್ಳಾರಿ, ಇವರು ಕರ್ನಾಟಕ ಸರ್ಕಾರ/ಸಚಿವ ಸಂಪುಟದಿಂದ ಆಡಳಿತಾತ್ಮಕ ಅನುಮೋದನೆಯನ್ನು ಪಡೆದುಕೊಳ್ಳದೆಯೇ ಫಲಾನುಭವಿಗಳ ಪಾಲಿನ ಕಡೆಗೆ ₹ 20.00 ಕೋಟಿ ಮೊತ್ತದಷ್ಟರ ಮಟ್ಟಿಗೆ ಹಣಕಾಸನ್ನು ಹಂಚಿಕೆ ಮಾಡಿದ್ದರು ಹಾಗೂ ಅಲ್ಲದೆಯೇ ಏಕಪಕ್ಷೀಯ ತೀರ್ಮಾನ ತೆಗೆದುಕೊಂಡು ₹ 7.26 ಕೋಟಿ ಮೊತ್ತದಷ್ಟು ಮೊದಲ ಕಂತನ್ನು ಬಿಡುಗಡೆ ಮಾಡಿದ್ದರು.

ಆಡಳಿತ ಮಂಡಳಿಯ ಸಭೆಯಲ್ಲಿ ಈ ವಿಷಯವನ್ನು ಚರ್ಚಿಸಲಾಗಿದ್ದು, ಸರ್ಕಾರದಿಂದ ಘಟನೋತ್ತರ ಅನುಮೋದನೆಯನ್ನು ಪಡೆದುಕೊಳ್ಳುವ ಸಲುವಾಗಿ ತೀರ್ಮಾನವನ್ನು ತೆಗೆದುಕೊಳ್ಳಲಾಗಿರುವುದು ಎಂಬುದಾಗಿ ಇಲಾಖೆಯು ನೀಡಿದ್ದಂತಹ ಉತ್ತರಕ್ಕೆ (ಜುಲೈ 2024) ಸರ್ಕಾರವು ಹಿಂಬರಹವನ್ನು

[27] ಗ್ರಾಮೀಣ ವಸತಿ ಅಭಿವೃದ್ಧಿ ಚಟುವಟಿಕೆಯಲ್ಲಿ ತೊಡಗಿಸಿಕೊಂಡಿರುವಂತಹ ಕರ್ನಾಟಕ ಸರ್ಕಾರದ ಒಂದು ಸಾರ್ವಜನಿಕ ವಲಯದ ಉದ್ದಿಮೆ.

ನೀಡಿತು (ಆಗಸ್ಟ್ 2024). ಡಿಎಂಎಫ್‌ಟಿ ನಿಯಮಗಳು ಯಾವುದೇ ವೈಯಕ್ತಿಕ ಪ್ರಯೋಜನ ಕಾರ್ಯಕ್ರಮಗಳಿಗೆ ಅನುವು ಮಾಡಿರುವುದಿಲ್ಲವಾದ್ದರಿಂದ ಉತ್ತರವು ಒಪ್ಪುವಂತಿರಲಿಲ್ಲ.

ಈ ರೀತಿಯಾಗಿ, ಫಲಾನುಭವಿಗಳ ಪಾಲಿನ ಕಡೆಗೆ ₹ 20.00 ಕೋಟಿ ಮೊತ್ತದಷ್ಟು ಹಣಕಾಸಿನ ಹಂಚಿಕೆಯು ಸರಿಯಾದ ಕ್ರಮವಾಗಿರಲಿಲ್ಲ.

ಪಿಎಂಕೆಕೆಕೆವೈ ಅಡಿಯಲ್ಲಿನ ಯೋಜನೆಗಳನ್ನು ಕಾರ್ಯಗತಗೊಳಿಸಿದ್ದುದು

5.4 4(ಜಿ) ವಿನಾಯಿತಿಯನ್ನು ಪಡೆದುಕೊಳ್ಳುವ ಸಲುವಾಗಿ ಕಾಮಗಾರಿಗಳ ವಿಭಜನೆ

ಪಿಎಂಕೆಕೆಕೆವೈ ಮಾರ್ಗಸೂಚಿಗಳ ಅನುಸಾರ (ಕಂಡಿಕೆ 4) ಸಂಬಂಧಿತ ರಾಜ್ಯ ಸರ್ಕಾರಗಳು ನಿರ್ದಿಷ್ಟಪಡಿಸಿರುವಂತಹ ತಕ್ಕುದಾದ ರೀತಿಯಲ್ಲಿನ ಕಾರ್ಯವಿಧಾನಗಳನ್ನು ಅನುಸರಿಸಿದನಂತರ ಡಿಎಮ್‌ಎಫ್‌ನಿಂದ ಅಗತ್ಯವಿರುವಂತಹ ಕಾಮಗಾರಿಗಳನ್ನು ಕಾರ್ಯಗತಗೊಳಿಸಿಕೊಳ್ಳಬಹುದು/ ಸೇವೆಗಳನ್ನು ಪಡೆದುಕೊಳ್ಳಬಹುದು. ಡಿಎಂಎಫ್‌ಟಿ ನಿಯಮಗಳ ನಿಯಮ 3ರ ಅನುಸಾರ, ಡಿಎಂಎಫ್‌ಟಿ ಗಣಿಗಾರಿಕೆ ಚಟುವಟಿಕೆಗಳಿಂದ ತೊಂದರೆಗೆ ಈಡಾಗಿರುವಂತಹ ಪ್ರದೇಶಗಳಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳು ಅಥವಾ ಯೋಜನೆಗಳ ಕಾರ್ಯಗತಗೊಳಿಸುವಿಕೆಗಾಗಿ ಕಾರ್ಯಗತಗೊಳಿಸುವ ಸಂಸ್ಥೆಗಳಿಗೆ ಹಣಕಾಸನ್ನು ಒದಗಿಸಬೇಕು. ಕಾರ್ಯಗತಗೊಳಿಸುವ ಸಂಸ್ಥೆಗಳೆಂದರೆ ಲೋಕೋಪಯೋಗಿ, ಆರೋಗ್ಯ, ಶಿಕ್ಷಣ, ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಅಥವಾ ಗ್ರಾಮ ಪಂಚಾಯಿತಿ, ಸಾರ್ವಜನಿಕ ವಲಯ ಉದ್ದಿಮೆಗಳು, ಇವೇ ಮುಂತಾದ ರಾಜ್ಯ ಸರ್ಕಾರದ ಇಲಾಖೆಗಳು ಅಥವಾ ಸಂಸ್ಥೆಗಳಾಗಿರುತ್ತವೆ. ಈ ಕಾರ್ಯಗತಗೊಳಿಸುವ ಸಂಸ್ಥೆಗಳು ಸರಕುಗಳನ್ನು ಖರೀದಿಸುವ ಹಾಗೂ ಸೇವೆಗಳನ್ನು ಪಡೆದುಕೊಳ್ಳುವ ವೇಳೆಯಲ್ಲಿ ಕರ್ನಾಟಕ ಸಾರ್ವಜನಿಕ ಖರೀದಿಗಳು ಮತ್ತು ಸೇವೆಗಳನ್ನು ಪಡೆದುಕೊಳ್ಳುವಲ್ಲಿ ಪಾರದರ್ಶಕತೆ ಅಧಿನಿಯಮ, 1999 (ಕೆಟಿಪಿಪಿ ಅಧಿನಿಯಮ) ಹಾಗೂ ಅದರ ಅಡಿಯಲ್ಲಿ ರೂಪಿಸಿರುವಂತಹ ನಿಯಮಗಳನ್ನು ಪಾಲಿಸುವ ಅಗತ್ಯತೆಯಿರುತ್ತದೆ.

ಚಿತ್ರದುರ್ಗ ಜಿಲ್ಲೆಯ ಉದ್ದಗಲಕ್ಕೂ 400 ಶಾಲೆಗಳಲ್ಲಿ ಇ–ಕಲಿಕೆ ಅನುಕೂಲತೆಯನ್ನು (ಪ್ರೊಜೆಕ್ಟರು, ಸ್ಮಾರ್ಟ್ ಹಲಗೆ ಹಾಗೂ ಇತರೆ ಉಪಕರಣಗಳೊಂದಿಗೆ) ಸ್ಥಾಪಿಸುವ ಮೂಲಕ ಸರ್ಕಾರಿ ಶಾಲೆಗಳಲ್ಲಿ ಶೇಕಡಾವಾರು ಫಲಿತಾಂಶವನ್ನು ಹೆಚ್ಚಳಗೊಳಿಸುವ ಉದ್ದೇಶದಿಂದ ಕರ್ನಾಟಕ ಸರ್ಕಾರವು ₹ 8.00 ಕೋಟಿ ಮೊತ್ತದಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಿತು (ಫೆಬ್ರವರಿ 2021) ಹಾಗೂ ಕೆಟಿಪಿಪಿ ಅಧಿನಿಯಮ, 1999 ಅನುವುಗಳನ್ನು ಅನುಸರಿಸುವ ಮೂಲಕ ಅವುಗಳನ್ನು ಖರೀದಿಸುವಂತೆ ಕಾರ್ಯಗತಗೊಳಿಸುವ ಇಲಾಖೆ (ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪ–ನಿರ್ದೇಶಕರು, ಚಿತ್ರದುರ್ಗ, ಇವರಿಗೆ ನಿರ್ದೇಶಿಸಿತು ಹಾಗೂ 4(ಜಿ) ವಿನಾಯಿತಿಯ ಅಡಿಯಲ್ಲಿ ಕರ್ನಾಟಕ ರಾಜ್ಯ ವಿದ್ಯುನ್ಮಾನ ಅಭಿವೃದ್ಧಿ ನಿಯಮಿತಕ್ಕೆ (ಕಿಯಾನಿಕ್ಸ್)[28] ರೂಪಾಯಿಗಳು ಒಂದು ಕೋಟಿಗೂ ಮೀರಿದಂತೆ ಆದೇಶಗಳನ್ನು ನೀಡದಂತೆ ನಿರ್ಬಂಧನೆ ವಿಧಿಸಿತು. ಕಾರ್ಯಗತಗೊಳಿಸುವ ಇಲಾಖೆಯು ಈ ಕಾಮಗಾರಿಯನ್ನು ₹ 1.00 ಕೋಟಿ ಮೊತ್ತಕ್ಕೆ ಕಡಿಮೆ ಇರುವ ರೀತಿಯಲ್ಲಿ 12 ಸಣ್ಣ ಕಾಮಗಾರಿಗಳನ್ನಾಗಿ ವಿಭಜಿಸಿದ್ದಿತು ಹಾಗೂ ಟೆಂಡರುಗಳನ್ನು ಆಹ್ವಾನಿಸದೆಯೇ ಈ ಕಾಮಗಾರಿಗಳನ್ನು ಕಿಯಾನಿಕ್ಸ್‌ಗೆ ನೀಡಿದ್ದಿತು.

ಅದೇ ರೀತಿಯಲ್ಲಿ, ಡಿಎಂಎಫ್‌ಟಿ, ಬಳ್ಳಾರಿ, ಇವರು ₹ 2.00 ಕೋಟಿಗೂ ಮೀರಿದ ಆರು ಸಿವಿಲ್ ಕಾಮಗಾರಿಗಳನ್ನು ಎರಡು ಅಥವಾ ಅದಕ್ಕೂ ಹೆಚ್ಚಿನ ಸಂಖ್ಯೆಯಲ್ಲಿ ವಿಭಜಿಸಿದ್ದರು ಹಾಗೂ ಈ ಕಾಮಗಾರಿಗಳನ್ನು ಟೆಂಡರುಗಳನ್ನು ಆಹ್ವಾನಿಸದೆಯೇ, ಕೆಟಿಪಿಪಿ ಅಧಿನಿಯಮ, 1999ರ ಪರಿಚ್ಛೇದ 4(ಜಿ) ಅಡಿಯಲ್ಲಿ ₹ 2.00 ಕೋಟಿ ಮೊತ್ತದವರೆವಿಗೂ ವಿನಾಯಿತಿಯನ್ನು ಪಡೆದಿದ್ದಂತಹ ನಿರ್ಮಿತಿ

[28] ರಾಜ್ಯ ಸರ್ಕಾರದ ಒಂದು ಸಾರ್ವಜನಿಕ ವಲಯ ಉದ್ದಿಮೆಯಾಗಿದ್ದು, ಸರ್ಕಾರವು ಅದಕ್ಕೆ ರೂಪಾಯಿಗಳು ಒಂದು ಕೋಟಿಯವರೆಗಿನ ಸರಬರಾಜುಗಳಿಗೆ, ಕೆಟಿಪಿಪಿ ಅಧಿನಿಯಮ, 1999ರ ಪರಿಚ್ಛೇದ 4(ಜಿ) ಅಡಿಯಲ್ಲಿ ವಿನಾಯಿತಿ ನೀಡಿದ್ದಿತು.

ಕೇಂದ್ರಕ್ಕೆ[29] ನೀಡಿದ್ದಿತು. ಮುಂದುವರೆದು, ಡಿಎಂಎಫ್‌ಟಿ, ಚಿತ್ರದುರ್ಗ, ಇವರು ₹ 2 ಕೋಟಿಗೂ ಮೀರಿದ ಎರಡು ಕಾಮಗಾರಿಗಳನ್ನು ನಿರ್ಮಿತಿ ಕೇಂದ್ರಕ್ಕೆ ಟೆಂಡರುಗಳನ್ನು ಆಹ್ವಾನಿಸದೆಯೇ ನೇರವಾಗಿ ನೀಡಿದ್ದರು. ನಿರ್ಮಿತಿ ಕೇಂದ್ರಕ್ಕೆ ನೀಡಲಾಗಿದ್ದಂತಹ ಈ ಎಂಟು ಕಾಮಗಾರಿಗಳನ್ನು ***ಅನುಬಂಧ – 5ರಲ್ಲಿ*** ವಿವರಿಸಲಾಗಿರುವುದು.

ಕಾಮಗಾರಿಗಳನ್ನು ವಿಭಜಿಸಕೂಡದು ಎಂಬ ಷರತ್ತಿನೊಂದಿಗೆ ಕರ್ನಾಟಕ ಸರ್ಕಾರವು, ಕೆಟಿಪಿಪಿ ಅಧಿನಿಯಮ, 1999ರ ಪರಿಚ್ಛೇದ 4(ಜಿ) ಅಡಿಯಲ್ಲಿ ವಿನಾಯಿತಿಗಳನ್ನು ನೀಡಿತ್ತು. ಈ ರೀತಿಯಾಗಿ, ಕೆಟಿಪಿಪಿ ಅಧಿನಿಯಮ, 1999 ಪರಿಚ್ಛೇದ 4(ಜಿ) ಅಡಿಯಲ್ಲಿ ಕಿಯಾನಿಕ್ಸ್ ಹಾಗೂ ನಿರ್ಮಿತಿ ಕೇಂದ್ರಕ್ಕೆ ಈ ಎರಡೂ ಪ್ರಕರಣಗಳಲ್ಲಿನ ವಹಿಸಿಕೊಟ್ಟಿರುವಿಕೆಗಳು ಹಾಗೂ ಟೆಂಡರು ಪ್ರಕ್ರಿಯೆಗಳನ್ನು ತಪ್ಪಿಸಿಕೊಳ್ಳುವ ಸಲುವಾಗಿ ಕಾಮಗಾರಿಗಳನ್ನು ವಿಭಜಿಸಿದ್ದುದು ಕರ್ನಾಟಕ ಸರ್ಕಾರದ ಹಣಕಾಸು ಇಲಾಖೆಯು ನೀಡಿರುವ ಆದೇಶಗಳಿಗೆ ವ್ಯತಿರಿಕ್ತವಾಗಿತ್ತು.

ಉಪಕರಣದ ಸರಬರಾಜು ಮಾಡುವುದನ್ನು ಕಿಯಾನಿಕ್ಸ್‌ಗೆ ವಹಿಸಲು ಆಡಳಿತಾತ್ಮಕ ಅನುಮೋದನೆಯನ್ನು ನೀಡಲಾಗಿದ್ದಿತು (ಫೆಬ್ರವರಿ 2021) ಎಂಬುದಾಗಿ ಸರ್ಕಾರವು ಉತ್ತರಿಸಿತು (ಆಗಸ್ಟ್ 2024). ಮುಂದುವರೆದು, ಕಾಮಗಾರಿಗಳನ್ನು ಆದಷ್ಟು ತ್ವರಿತವಾಗಿ ಸಾರ್ವಜನಿಕರ ಉಪಯೋಗಕ್ಕೆ ತರುವ ಸಲುವಾಗಿ ಮೇಲೆ ತಿಳಿಸಲಾಗಿರುವ ಕಾಮಗಾರಿಗಳನ್ನು ನಿರ್ಮಿತಿ ಕೇಂದ್ರಕ್ಕೆ ವಹಿಸಲಾಗಿದ್ದಿತು ಎಂಬುದಾಗಿಯೂ ತಿಳಿಸಲಾಗಿದ್ದಿತು. ಸರ್ಕಾರವು ಆಡಳಿತಾತ್ಮಕ ಅನುಮೋದನೆ ನೀಡುವ ವೇಳೆಯಲ್ಲಿ ₹ 1.00 ಕೋಟಿ ಮೊತ್ತವನ್ನು ಮೀರುವಂತ ಆದೇಶಗಳನ್ನು ಕಿಯಾನಿಕ್ಸ್‌ಗೆ ಹಾಗೂ ₹ 2.00 ಕೋಟಿ ಮೊತ್ತವನ್ನು ಮೀರಿರುವ ಕಾಮಗಾರಿಗಳನ್ನು ನಿರ್ಮಿತಿ ಕೇಂದ್ರಕ್ಕೆ ನೀಡುವುದರಿಂದ ನಿರ್ಬಂಧಿಸಿದ್ದಿತಾದ್ದರಿಂದ ಉತ್ತರವು ಒಪ್ಪುವಂತಿರಲಿಲ್ಲ. ಈ ರೀತಿಯಾಗಿ ಈ ಪ್ರಕರಣಗಳಲ್ಲಿ, ಕಾರ್ಯಗತಗೊಳಿಸುವ ಸಂಸ್ಥೆಗಳು 4(ಜಿ) ವಿನಾಯಿತಿಯನ್ನು ಉಪಯೋಗಿಸುವ ಸಲುವಾಗಿ ಕಾಮಗಾರಿಗಳನ್ನು ವಿಭಜಿಸಿದ್ದವು.

5.5 ಕಾಮಗಾರಿಗಳು/ಯೋಜನೆಗಳ ಜಂಟಿ ಭೌತಿಕ ಪರೀಕ್ಷಣೆ

ಲೆಕ್ಕಪರಿಶೋಧನೆಯು ಪರೀಕ್ಷಾ–ಪರಿಶೀಲನೆ ಮಾಡಲಾದಂತಹ ಡಿಎಂಎಫ್‌ಟಿಗಳು[30] ಒದಗಿಸಿದ ಕಾಮಗಾರಿಗಳು/ಯೋಜನೆಗಳ ಪ್ರಗತಿಯ ಆಧಾರದ ಮೇರೆಗೆ, 417 ಕಾಮಗಾರಿಗಳನ್ನು ಪರೀಕ್ಷಾ–ಪರಿಶೀಲನೆ ಮಾಡುವ ಸಲುವಾಗಿ ವಿವೇಚನಾಯುಕ್ತ ಮಾದರಿ ಆಯ್ಕೆ ಆಧಾರದ ಮೇರೆಗೆ ಆಯ್ಕೆ ಮಾಡಿಕೊಳ್ಳಲಾಯಿತು ಹಾಗೂ ಸೃಷ್ಟಿಸಲಾಗಿದ್ದಂತಹ ಆಸ್ತಿಗಳನ್ನು ಜಂಟಿಯಾಗಿ ಭೌತಿಕ ಪರೀಕ್ಷಣೆ ನಡೆಸಲಾಯಿತು.

ಆಯ್ಕೆ ಮಾಡಿಕೊಳ್ಳಲಾಗಿದ್ದ 417[31] ಕಾಮಗಾರಿಗಳ ಪೈಕಿ 305 ಕಾಮಗಾರಿಗಳನ್ನು (ಶೇಕಡಾ 73) ಅಧಿಕ ಮಟ್ಟದ ಆದ್ಯತೆಯ ಕ್ಷೇತ್ರದ ಅಡಿಯಲ್ಲಿ ಸೃಷ್ಟಿಸಲಾಗಿದ್ದಿತು ಹಾಗೂ 112 ಕಾಮಗಾರಿಗಳನ್ನು (ಶೇಕಡಾ 27) ಇತರೆ ಆದ್ಯತೆಯ ಕ್ಷೇತ್ರಗಳ ಅಡಿಯಲ್ಲಿ ಸೃಷ್ಟಿಸಲಾಗಿದ್ದಿತು ಈ 417 ಕಾಮಗಾರಿಗಳ ಪೈಕಿ 298 ಕಾಮಗಾರಿಗಳನ್ನು (ಶೇಕಡಾ 72) ಪೂರ್ಣಗೊಳಿಸಲಾಗಿದ್ದಿತು ಹಾಗೂ 113 ಕಾಮಗಾರಿಗಳು (ಶೇಕಡ 28) ಪ್ರಗತಿಯಲ್ಲಿದ್ದವು. ಕಾಮಗಾರಿಗಳು/ಯೋಜನೆಗಳ ಜಂಟಿ ಭೌತಿಕ ಪರೀಕ್ಷಣೆಯ ಫಲಿತಾಂಶದ ಸಂಕ್ಷಿಪ್ತ ವಿವರಣೆಯನ್ನು ಈ ಕೆಳಗೆ ತೋರಿಸಲಾಗಿರುವುದು:

- ಎಲ್ಲಾ 417 ಕಾಮಗಾರಿಗಳನ್ನು ಯೋಜಿಸುವಾಗ ಸ್ಥಳೀಯ ಗ್ರಾಮ ಸಭೆ/ಬಾಧಿತ ಜನರೊಂದಿಗೆ ಯಾವುದೇ ಸಾರ್ವಜನಿಕ ಸಮಾಲೋಚನೆಗಳನ್ನು ಮಾಡಿರಲಿಲ್ಲ.

[29] ನಿರ್ಮಿತಿ ಕೇಂದ್ರಗಳನ್ನು ಕಡಿಮೆ ಖರ್ಚಿನ ಕಟ್ಟಡ ತಂತ್ರಜ್ಞಾನಗಳು ಮತ್ತು ಸಾಮಗ್ರಿಗಳಿಗೆ ಸಂಬಂಧಿಸಿದಂತೆ ಮಾಹಿತಿಯನ್ನು ಪ್ರಚುರ ಪಡಿಸುವ ಸಲುವಾಗಿ ಪ್ರತೀ ಜಿಲ್ಲೆಯಲ್ಲೂ ಒಂದರಂತೆ ಸಂಬಂಧಿತ ಜಿಲ್ಲೆಯ ಜಿಲ್ಲಾಧಿಕಾರಿಯವರ ಅಧ್ಯಕ್ಷತೆಯಲ್ಲಿ ಹಾಗೂ ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿಯವರ ಉಪಾಧ್ಯಕ್ಷತೆಯಲ್ಲಿ ಸ್ಥಾಪಿಸಲಾಗಿರುವುದು.

[30] ಬಳ್ಳಾರಿ, ಬೆಂಗಳೂರು (ನಗರ), ಚಿತ್ರದುರ್ಗ, ಗದಗ ಮತ್ತು ವಿಜಯನಗರ.

[31] ಲೆಕ್ಕಪರಿಶೋಧನೆಯು ಆಯ್ಕೆ ಮಾಡಿಕೊಂಡಿದ್ದಂತಹ ಎರಡು ಕಾಮಗಾರಿಗಳನ್ನು ಪರೀಕ್ಷಿಸಲಾಗಲಿಲ್ಲ.

- ಬಳ್ಳಾರಿ ಜಿಲ್ಲೆಯ[32] ವ್ಯಾಪ್ತಿಯಲ್ಲಿ ಬರುವಂತಹ ಹಾಗೂ ಕಾಮಗಾರಿಗಳ ಬದಲಾವಣೆಗಾಗಿ ವ್ಯವಸ್ಥಾಪನಾ ಸಮಿತಿಯು ಅನುಮೋದಿಸಿದ್ದಂತಹ ₹ 11.12 ಕೋಟಿ ಮೌಲ್ಯದ ಒಂಬತ್ತು ಕಾಮಗಾರಿಗಳಿಗೆ ಆಡಳಿತ ಮಂಡಳಿಯು ಇನ್ನೂ ಅನುಮೋದನೆ ನೀಡಬೇಕಾಗಿರುವುದು. ಈ ಕಾಮಗಾರಿಗಳ ಪೈಕಿ ₹ 0.33 ಕೋಟಿ ಮೌಲ್ಯದ ಎರಡು ಅಂಗನವಾಡಿ ಕೇಂದ್ರಗಳ ಕಟ್ಟಡಗಳು ಹಾಗೂ ಕ್ರೀಡಾಂಗಣ ಸಂಬಂಧಿತ ಒಂದು ಕಾಮಗಾರಿಯನ್ನು (₹ 1.49 ಕೋಟಿ) ಪೂರ್ಣಗೊಳಿಸಿ ಅನುಕ್ರಮವಾಗಿ 2021–22 ಮತ್ತು 2022–23ರಲ್ಲಿ ಸಂಬಂಧಿತ ಇಲಾಖೆಗಳಿಗೆ ವಹಿಸಿಕೊಡಲಾಗಿದ್ದಿತು. ಉಳಿದ ಆರು ಕಾಮಗಾರಿಗಳು (₹ 9.30 ಕೋಟಿ) ಪ್ರಗತಿಯಲ್ಲಿದ್ದವು.

- ಗ್ರಾಮ ಲೆಕ್ಕಿಗರುಗಳ ಕಚೇರಿಗಾಗಿ (ಬಳ್ಳಾರಿ ಜಿಲ್ಲೆಯ ಸಂಡೂರು ಮತ್ತು ಬಳ್ಳಾರಿ ತಾಲ್ಲೂಕುಗಳಲ್ಲಿ) ನಿರ್ಮಿಸಲಾಗಿದ್ದ ಹಾಗೂ 2020 ಮತ್ತು 2021ರಲ್ಲಿ ಕಂದಾಯ ಇಲಾಖೆಗೆ ವಹಿಸಿಕೊಡಲಾದಂತಹ 11 ಕಟ್ಟಡಗಳ ಪೈಕಿ, ₹ 0.49 ಕೋಟಿ ವೆಚ್ಚದಲ್ಲಿ ಹೊಸದಾಗಿ ನಿರ್ಮಿಸಲಾದಂತಹ 10 ಕಟ್ಟಡಗಳಲ್ಲಿ ಕಚೇರಿ ಕಾರ್ಯಾಚರಣೆಗಳು ಪ್ರಾರಂಭವಾಗಿರಲಿಲ್ಲ ಹಾಗೂ ಖಾಲಿಯಿದ್ದವು.

- ಪೂರ್ಣಗೊಂಡಿದ್ದಂತಹ 298 ಕಾಮಗಾರಿಗಳ ಪೈಕಿ 31 ಕಾಮಗಾರಿಗಳನ್ನು (ಶೇಕಡಾ 10) ಉಪಯೋಗಕ್ಕೆ ತರಲಾಗಿರಲಿಲ್ಲ.

ಪೂರ್ಣಗೊಂಡಿರುವಂತಹ ಕಾಮಗಾರಿಗಳಿಗೆ (298) ಸಂಬಂಧಿಸಿದಂತೆ ಪರಿಣಾಮಕಾರಿತ್ವದಿಂದ ಕೂಡಿದ ಉಪಯುಕ್ತತೆ ಹಾಗೂ ನಿರ್ವಹಣೆಗಾಗಿ ಸ್ಥಳೀಯ ಜನತೆಗೆ ಜಾಗೃತಿ ಮೂಡಿಸುವ ಚಟುವಟಿಕೆಗಳನ್ನು ನಡೆಸಿರಲಿಲ್ಲ. ಜಾಗೃತಿ ಅಭಿಯಾನಗಳು ಯೋಜನೆಯ ಮೂಲಕ ವಿಸ್ತರಿಸಲಾಗುವ ಪ್ರಯೋಜನಗಳ ಬಗ್ಗೆ ಜನರನ್ನು ಸಬಲೀಕರಣಗೊಳಿಸುತ್ತವೆ.

ಜಂಟಿ ಭೌತಿಕ ಪರೀಕ್ಷಣೆಯಲ್ಲಿ ಸವಿವರವಾಗಿ ಗಮನಿಸಲಾದಂತಹ ಅಂಶಗಳನ್ನು ಈ ಕೆಳಗೆ ನೀಡಲಾಗಿರುವುದು:

5.5.1 ಅನುಮೋದಿತ ಕಾಮಗಾರಿಗಳಿಂದ ಮಾರ್ಗಾಂತರಣ

ಈ ಕೆಳಗೆ ವಿವರಿಸಿರುವಂತೆ ಕಾರ್ಯಗತಗೊಳಿಸುವ ಇಲಾಖೆಗಳು ಅನುಮೋದಿತ ಕಾಮಗಾರಿಗಳಲ್ಲಿ ಮಾರ್ಗಾಂತರಣಗೊಳಿಸಿರುವುದನ್ನು ಲೆಕ್ಕಪರಿಶೋಧನೆಯು ಗಮನಿಸಿತು:

ಕೋಷ್ಟಕ ಸಂಖ್ಯೆ 5.3 : ಕಾರ್ಯ–ಗತಗೊಳಿಸುವ ಇಲಾಖೆಗಳು ಮಾರ್ಗಾಂತರಣಗೊಳಿಸಿರುವ ಕಾಮಗಾರಿಗಳ ವಿವರಗಳನ್ನು ತೋರಿಸುವ ತ:ಖ್ತೆ

ಕ್ರಮ ಸಂಖ್ಯೆ	ಅನುಮೋದಿತ ಕಾಮಗಾರಿ	ಕ್ರಿಯಾ ಯೋಜನೆಯಲ್ಲಿದ್ದ ಮೊತ್ತ (₹ ಕೋಟಿಗಳಲ್ಲಿ)	ಕಾರ್ಯಗತ ಗೊಳಿಸಲಾಗಿರುವ ವಾಸ್ತವಿಕ ಕಾಮಗಾರಿ	ಜಂಟಿ ಭೌತಿಕ ಪರೀಕ್ಷಣೆಯಲ್ಲಿ ಗಮನಿಸಲಾದ ಅಂಶಗಳು
ಕೌಶಲ್ಯ ಅಭಿವೃದ್ಧಿ ವಲಯ				
1	ಹೊಳಲ್ಕೆರೆಯಲ್ಲಿ ಮೂಲಭೂತ ಸೌಕರ್ಯಗಳೊಂದಿಗೆ ಕರ್ನಾಟಕ ರಾಜ್ಯ ಅರಣ್ಯ ಸಿಬ್ಬಂದಿ ತರಬೇತಿ, ಮಾಹಿತಿ ಮತ್ತು ಮೇಲ್ವಿಚಾರಣಾ ಕೇಂದ್ರದ ನಿರ್ಮಾಣ	1.50	ಕೌಶಲ್ಯ ಅಭಿವೃದ್ಧಿ ವಲಯದ ಅಡಿಯಲ್ಲಿ ಅರಣ್ಯ ಇಲಾಖೆಗೆ ಅತಿಥಿ ಗೃಹ (ಪೂರ್ಣಗೊಂಡಿರುವ ಕಾಮಗಾರಿ)	ವಾಸ್ತವಿಕ ನಿರ್ಮಾಣವು ಅತಿಥಿ ಗೃಹದಂತೆ ಕಾಣುತ್ತಿತ್ತು ಮತ್ತು ಕಟ್ಟಡದ ವಿನ್ಯಾಸದಲ್ಲಿ ಯಾವುದೇ ತರಬೇತಿ ಸಭಾಂಗಣವನ್ನು ಅನುವು ಮಾಡಿರುವುದಿಲ್ಲ. ನೆಲ ಅಂತಸ್ತಿನ ನಕಾಶೆಯಲ್ಲಿ ಅತಿಥಿ ಕೊಠಡಿ, ಸ್ಟೋರ್ ರೂಂ, ವಾಸದ ಪ್ರದೇಶ, ಊಟದ ಮತ್ತು ಅಡುಗೆಮನೆ, ಉಪಯುಕ್ತತೆ ಮತ್ತು ತೊಳೆಯುವ ಪ್ರದೇಶ, ಮೆಟ್ಟಿಲು, ಪ್ಯಾಸೇಜ್ ಪ್ರದೇಶವನ್ನು ಒದಗಿಸಲಾಗಿತ್ತು ಮತ್ತು ಮೊದಲ, ಎರಡನೆಯ ಮತ್ತು ತಾರಸಿ ಅಂತಸ್ತಿನ ನಕಾಶೆಯಲ್ಲಿ

[32] ಬಳ್ಳಾರಿ ಜಿಲ್ಲೆಯ ಬಳ್ಳಾರಿ ಮತ್ತು ಸಂಡೂರು ತಾಲ್ಲೂಕುಗಳು.

ಕ್ರಮ ಸಂಖ್ಯೆ	ಅನುಮೋದಿತ ಕಾಮಗಾರಿ	ಕ್ರಿಯಾ ಯೋಜನೆಯಲ್ಲಿದ್ದ ಮೊತ್ತ (₹ ಕೋಟಿಗಳಲ್ಲಿ)	ಕಾರ್ಯಗತ ಗೊಳಿಸಲಾಗಿರುವ ವಾಸ್ತವಿಕ ಕಾಮಗಾರಿ	ಜಂಟಿ ಭೌತಿಕ ಪರೀಕ್ಷಣೆಯಲ್ಲಿ ಗಮನಿಸಲಾದ ಅಂಶಗಳು
				ಮಾಸ್ಟರ್ ಬೆಡ್ ರೂಮ್, ಬಾಲ್ಕನಿ, ಸಿಟ್ ಔಟ್ ಪ್ರದೇಶ, ಸೂಟ್ ರೂಮ್, ಪ್ಯಾಸೇಜ್ ಪ್ರದೇಶ, ಕುಟುಂಬ ಪ್ರದೇಶವನ್ನು ಒದಗಿಸಲಾಗಿತ್ತು. ತರಬೇತುದಾರರುಗಳಿಗೆ ತಾಲ್ಲೂಕು ಮಟ್ಟದಲ್ಲಿ ಯಾವುದೇ ಊಟದ ಅನುಕೂಲತೆ ಅಥವಾ ಇಲಾಖಾ ಅತಿಥಿ ಗೃಹವು ಲಭ್ಯವಿರಲಿಲ್ಲ ಮತ್ತು ಆದ್ದರಿಂದ, ಅವರುಗಳ ತಂಗುವಿಕೆಗಾಗಿ ಕೊಠಡಿಗಳನ್ನು ನಿರ್ಮಿಸಲಾಯಿತು ಎಂಬುದಾಗಿ ಸರ್ಕಾರವು ಉತ್ತರಿಸಿತು (ಆಗಸ್ಟ್ 2024). ಮುಂದುವರೆದು, ನೆಲ ಅಂತಸ್ತಿನಲ್ಲಿ ಒಂದು ಪ್ರೊಜೆಕ್ಟರನ್ನು ಸ್ಥಾಪಿಸಲಾಗಿರುವುದು ಹಾಗೂ ಮಾಹಿತಿ ಸಾಮಗ್ರಿಗಳನ್ನು ಗೋಡೆಗಳಿಗೆ ಅಳವಡಿಸಲಾಗಿರುವುದು ಎಂಬುದನ್ನು ತಿಳಿಸಲಾಗಿದ್ದಿತು. ಕಟ್ಟಡದ ವಿನ್ಯಾಸದಲ್ಲಿ ಯಾವುದೇ ತರಬೇತಿ ಹಾಲನ್ನು ಅನುವು ಮಾಡಿರಲಿಲ್ಲವಾದ್ದರಿಂದ ಹಾಗೂ ಲೆಕ್ಕಪರಿಶೋಧನೆಯು ತನ್ನ ಆಕ್ಷೇಪಣೆ ಪ್ರಶ್ನಾವಳಿಯನ್ನು ನೀಡಿದನಂತರವಷ್ಟೇ ಪ್ರೊಜೆಕ್ಟರನ್ನು ನೆಲ ಅಂತಸ್ತಿನಲ್ಲಿ ಸ್ಥಾಪಿಸಲಾಗಿರುವುದರಿಂದ, ಉತ್ತರವು ಒಪ್ಪುವಂತಿರಲಿಲ್ಲ.
2	ಹೊಳಲ್ಕೆರೆ ಪಟ್ಟಣದಲ್ಲಿ ಮಿನಿ ವಿಧಾನ ಸೌಧದ 3ನೇ ಅಂತಸ್ತಿನಲ್ಲಿ ಕೌಶಲ್ಯ ಅಭಿವೃದ್ಧಿ ತರಬೇತಿ ಕೇಂದ್ರದ ನಿರ್ಮಾಣ	2.00	3ನೇ ಅಂತಸ್ತಿನ ವಾಸ್ತವಿಕ ನಿರ್ಮಾಣವು ಪಜಾ/ಪಪಂ ನಿಗಮ, ತೋಟಗಾರಿಕೆ ಇಲಾಖೆ, ಪಂಚಾಯತ್ ರಾಜ್ ತಾಂತ್ರಿಕ ಇಲಾಖೆ, ಮೀನುಗಾರಿಕೆ ಇಲಾಖೆ ಹಾಗೂ ವಿಧಾನ ಸಭಾ ಸದಸ್ಯರ ಕಚೇರಿ, ಇವುಗಳಿಗೆ ಸ್ಥಳಾವಕಾಶ ಮಾಡಿಕೊಡುವುದಕ್ಕಾಗಿತ್ತು (ಕಾಮಗಾರಿಯು ಪ್ರಗತಿಯಲ್ಲಿರುವುದು).	3ನೇ ಅಂತಸ್ತಿನ ವಾಸ್ತವಿಕ ನಿರ್ಮಾಣವು ಚಿಂತಿಸಲಾಗಿದ್ದಂತೆ ಕೌಶಲ್ಯ ಅಭಿವೃದ್ಧಿ ತರಬೇತಿ ಕೇಂದ್ರಕ್ಕಾಗಿ ಆಗಿರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಲೋಕೋಪಯೋಗಿ ಇಲಾಖೆಯ ಕ್ರಿಯಾ ಯೋಜನೆಯಿಂದ ಗಮನಿಸಿತು. ಕಾಮಗಾರಿಗಳು ಪೂರ್ಣಗೊಂಡನಂತರ, ಈ ಅಂತಸ್ತನ್ನು ಕೌಶಲ್ಯ ಅಭಿವೃದ್ಧಿ ಇಲಾಖೆಗೆ ವಹಿಸಿಕೊಡಲಾಗುವುದು ಹಾಗೂ ಅದನ್ನು ಇಲಾಖಾ ಕಾರ್ಯಕ್ರಮಗಳಿಗೆ ಉಪಯೋಗಿಸಿಕೊಳ್ಳುವಂತೆ ನಿರ್ದೇಶನಗಳನ್ನು ನೀಡಲಾಗುವುದು ಎಂಬುದಾಗಿ ಸರ್ಕಾರವು ಉತ್ತರಿಸಿತು (ಆಗಸ್ಟ್ 2024). ಲೋಕೋಪಯೋಗಿ ಇಲಾಖೆಯ ಕ್ರಿಯಾ ಯೋಜನೆಯು ನಿರ್ಮಾಣದ ಉದ್ದೇಶವನ್ನು ಒಂದು ಕೌಶಲ್ಯ ಅಭಿವೃದ್ಧಿ ಕೇಂದ್ರಕ್ಕಾಗಿ ಆಗಿರದೆಯೇ ವಿವಿಧ ಕಚೇರಿಗಳಿಗೆ ಸ್ಥಳಾವಕಾಶ ಮಾಡಿಕೊಡುವ ಸಲುವಾಗಿ ಆಗಿರುವುದಾಗಿ ಸುಸ್ಪಷ್ಟವಾಗಿ ಸೂಚಿಸಿದ್ದಿತಾದ್ದರಿಂದ ಉತ್ತರವು ಒಪ್ಪುವಂತಿರಲಿಲ್ಲ.
3	ಹೊಸದುರ್ಗ ತಾಲ್ಲೂಕಿನ ತಿಮ್ಮಯ್ಯನಹಟ್ಟಿ ಸಮೀಪ ಕೌಶಲ್ಯ ಅಭಿವೃದ್ಧಿ ಕೇಂದ್ರದ ನಿರ್ಮಾಣ	2.00	ವಾಣೀವಿಲಾಸ ಸಾಗರ ಅಣೆಕಟ್ಟೆಯಲ್ಲಿ ಅತಿಥಿ ಗೃಹ (ಕಾಮಗಾರಿಯು ಪ್ರಗತಿಯಲ್ಲಿರುವುದು)	ನಿರ್ಮಿತಿ ಕೇಂದ್ರವು ಸಲ್ಲಿಸಿದ ಅಂದಾಜಿಗೆ ಲಗತ್ತಿಸಲಾಗಿದ್ದಂತಹ ಕ್ರಿಯಾ ಯೋಜನೆಯಲ್ಲಿ, ಪ್ರಸ್ತಾಪಿತ ಕಾಮಗಾರಿಯನ್ನು ವಾಣೀವಿಲಾಸ ಸಾಗರದಲ್ಲಿ ಅತಿಥಿ ಗೃಹ ನಿರ್ಮಾಣ ಎಂಬುದಾಗಿ ತಿಳಿಸಲಾಗಿರುವುದು. ಅಲ್ಲದೆಯೇ ಮಾರ್ಗಸೂಚಿಗಳ ಅಡಿಯಲ್ಲಿನ ಅಗತ್ಯತೆಯಂತೆ ಕಾಮಗಾರಿಯನ್ನು ಜೀವನಾಧಾರಕ್ಕೆ ಬೆಂಬಲ, ಆದಾಯ ಉತ್ಪತ್ತಿ ಹಾಗೂ ಕೌಶಲ್ಯ ಅಭಿವೃದ್ಧಿ ಕೇಂದ್ರ ಅಡಿಯಲ್ಲಿ

ಕ್ರಮ ಸಂಖ್ಯೆ	ಅನುಮೋದಿತ ಕಾಮಗಾರಿ	ಕ್ರಿಯಾ ಯೋಜನೆಯಲ್ಲಿದ್ದ ಮೊತ್ತ (₹ ಕೋಟಿಗಳಲ್ಲಿ)	ಕಾರ್ಯಗತ ಗೊಳಿಸಲಾಗಿರುವ ವಾಸ್ತವಿಕ ಕಾಮಗಾರಿ	ಜಂಟಿ ಭೌತಿಕ ಪರೀಕ್ಷಣೆಯಲ್ಲಿ ಗಮನಿಸಲಾದ ಅಂಶಗಳು
				ಗುರುತಿಸಲಾಗಿರುವಂತಹ/ ಯೋಜಿಸಿರುವಂತಹ ಆರ್ಥಿಕ ಚಟುವಟಿಕೆಗಳು, ಇತ್ಯಾದಿಗಳನ್ನು ದಾಖಲಿಸದೆಯೇ ಕಾಮಗಾರಿಯನ್ನು ಕ್ರಿಯಾ ಯೋಜನೆಯಲ್ಲಿ ಸೇರಿಸಲಾಗಿದ್ದಿತು. ಚಿತ್ರದುರ್ಗ ಜಿಲ್ಲೆಯ ಶಾಲಾ/ಕಾಲೇಜು ಮಕ್ಕಳಿಗೆ ಜಲ ಕ್ರೀಡೆಗಳ ಚಟುವಟಿಕೆಗಳಲ್ಲಿ ತರಬೇತಿ ನೀಡುವ ಸಲುವಾಗಿ ಕಾಮಗಾರಿಯನ್ನು ಕೈಗೊಳ್ಳಲಾಯಿತು ಹಾಗೂ ಕಾಮಗಾರಿಯು ಪೂರ್ಣಗೊಂಡನಂತರ ಕೌಶಲ್ಯ ಅಭಿವೃದ್ಧಿ ಇಲಾಖೆಗೆ ವಹಿಸಿಕೊಡಲಾಗುವುದು ಎಂಬುದಾಗಿ ಸರ್ಕಾರವು ಉತ್ತರಿಸಿತು (ಆಗಸ್ಟ್ 2024). ಮುಂದುವರೆದು, ಕೌಶಲ್ಯ ಅಭಿವೃದ್ಧಿ ಕೇಂದ್ರಕ್ಕೆ ಬದಲಾಗಿ ಅತಿಥಿ ಗೃಹ ಎಂಬುದಾಗಿ ತಪ್ಪಾಗಿ ತಿಳಿಸಲಾಗಿರುವುದು. ಎಂಬುದಾಗಿ ಸಹ ತಿಳಿಸಲಾಗಿತು. ಆದಾಗ್ಯೂ, ಕಟ್ಟಡವನ್ನು ಕೌಶಲ್ಯ ಅಭಿವೃದ್ಧಿ ಕೇಂದ್ರಕ್ಕೆ ಉಪಯೋಗಿಸಲಾಗಿರುವುದು ಎಂಬುದಕ್ಕೆ ಯಾವುದೇ ದಾಖಲೆಗಳ ಸಾಕ್ಷ್ಯಾಧಾರಗಳನ್ನು ಸಲ್ಲಿಸಿರುವುದಿಲ್ಲ.
ಆರೋಗ್ಯ ವಲಯ				
4	ಹೊಳಲ್ಕೆರೆ ತಾಲ್ಲೂಕಿನಲ್ಲಿ ಎಚ್.ಡಿ ಪುರ ಪ್ರಾಥಮಿಕ ಆರೋಗ್ಯ ಕೇಂದ್ರದ ನವೀಕರಣ	0.50	ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಕಾಂಪೌಂಡ್ ಗೋಡೆ ನಿರ್ಮಾಣ (ಕಾಮಗಾರಿಯು ಪ್ರಗತಿಯಲ್ಲಿರುವುದು)	ಕಾಂಪೌಂಡ್ ಗೋಡೆಯನ್ನು ನಿರ್ಮಿಸುತ್ತಿರುವ ಭೂಮಿಯ ಕೆಲವು ಭಾಗವನ್ನು ಈ ಭೂಮಿಗೆ ಹೊಂದಿಕೊಂಡಂತಿರುವ ಭೂಮಾಲೀಕರುಗಳು ಒತ್ತುವರಿ ಮಾಡಿಕೊಂಡಿರುವರು.
5	ಹೊಳಲ್ಕೆರೆ ತಾಲ್ಲೂಕಿನ ಪಂಡರಹಳ್ಳಿಯಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ರಿಪೇರಿಗಳು	0.40	ಆಸ್ಪತ್ರೆಯ ಪ್ರಾಂಗಣದ ಒಳಗೆ ಸಿಮೆಂಟ್ ಕಾಂಕ್ರೀಟ್ ರಸ್ತೆ ನಿರ್ಮಾಣ ಹಾಗೂ ಒಂದು ವಾರ್ಡ್ ಕೊಠಡಿಗೆ, ವೈದ್ಯರ ಹಾಗೂ ಮೂರು ಸ್ಟಾಫ್ ನರ್ಸ್ ವಸತಿ ಗೃಹಗಳಿಗೆ ರಿಪೇರಿ. (ಕಾಮಗಾರಿಯು ಪೂರ್ಣಗೊಂಡಿರುವುದು)	ಪಿಎಂಕೆಕೆಕೆವೈ ಮಾರ್ಗಸೂಚಿಗಳ ಅನುಸಾರ, ಪ್ರಾಥಮಿಕ ಆರೋಗ್ಯ ಕೇಂದ್ರದ ಪ್ರಾಂಗಣದ ಒಳಗೆ ಸಿಮೆಂಟ್ ಕಾಂಕ್ರೀಟ್ ರಸ್ತೆ ನಿರ್ಮಾಣ ಹಾಗೂ ಸ್ಟಾಫ್ ನರ್ಸ್ ವಸತಿ ಗೃಹಗಳಿಗೆ ರಿಪೇರಿ, ಇವುಗಳು ಆರೋಗ್ಯ ವಲಯದ ಅಡಿಯಲ್ಲಿ ಬರುವುದಿಲ್ಲ. ವೈದ್ಯರ ಮತ್ತು ಮೂರು ಸ್ಟಾಫ್ ನರ್ಸ್ ವಸತಿ ಗೃಹಗಳಿಗೆ ರಿಪೇರಿ, ಇವುಗಳು ಪೂರ್ಣಗೊಂಡಿದ್ದು ಇವುಗಳಲ್ಲಿ ಇಂದಿನವರೆಗೂ ಯಾರೂ ವಾಸಿಸುತ್ತಿರುವುದಿಲ್ಲ. ಮುಂದುವರೆದು, ಈ ವಸತಿ ಗೃಹಗಳು ಜನರು ವಾಸಿಸುವ ಸ್ಥಿತಿಯಲ್ಲಿ ಇರಲಿಲ್ಲ. ವೈದ್ಯಕೀಯ ಸಿಬ್ಬಂದಿಯನ್ನು ಪರಿಣಾಮಕಾರಿತ್ವದಿಂದ ಉಪಯೋಗಿಸಿಕೊಳ್ಳುವ ಸಲುವಾಗಿ ವಸತಿ ಅನುಕೂಲತೆಯನ್ನು ಒದಗಿಸಲಾಗಿದ್ದಿತು ಎಂಬುದಾಗಿ ಸರ್ಕಾರವು ಉತ್ತರಿಸಿತು (ಆಗಸ್ಟ್ 2024). ಸಿಬ್ಬಂದಿ ವಸತಿ ಗೃಹಗಳನ್ನು ಉಪಯೋಗಕ್ಕೆ ಬಿಡಲಾಗಿದೆ ಎಂಬುದಾಗಿಯೂ ಉತ್ತರಿಸಲಾಗಿದ್ದಿತು. ಆದರೆ, ಬಳಕೆದಾರ ಇಲಾಖೆಯು ನಿರ್ಮಿತಿ ಕೇಂದ್ರವು ಮಾಡಿರುವಂತಹ ನಿರ್ಮಾಣ ಕಾರ್ಯವು ಅತ್ಯಂತ ನಿಕೃಷ್ಟಮಟ್ಟದಲ್ಲಿದ್ದು ಹಾಗೂ ಜನತೆಯು ವಾಸಿಸುವ ಸ್ಥಿತಿಯಲ್ಲಿ ಇರುವುದಿಲ್ಲ ಎಂಬುದಾಗಿ ತಿಳಿಸಿರುವುದರಿಂದ ಉತ್ತರವು ಒಪ್ಪುವಂತಿರಲಿಲ್ಲ.

ಕ್ರಮ ಸಂಖ್ಯೆ	ಅನುಮೋದಿತ ಕಾಮಗಾರಿ	ಕ್ರಿಯಾ ಯೋಜನೆಯಲ್ಲಿದ್ದ ಮೊತ್ತ (₹ ಕೋಟಿಗಳಲ್ಲಿ)	ಕಾರ್ಯಗತ ಗೊಳಿಸಲಾಗಿರುವ ವಾಸ್ತವಿಕ ಕಾಮಗಾರಿ	ಜಂಟಿ ಭೌತಿಕ ಪರೀಕ್ಷಣೆಯಲ್ಲಿ ಗಮನಿಸಲಾದ ಅಂಶಗಳು
6	ಆರೋಗ್ಯ ವಲಯದ ಅಡಿಯಲ್ಲಿ ಹೊಸದುರ್ಗ ದಲ್ಲಿ ಸರ್ಕಾರಿ ಆಸ್ಪತ್ರೆ ಎದುರು ಉಗ್ರಾಣ ನಿರ್ಮಾಣ	0.43	ಹೊಸದುರ್ಗ ಸರ್ಕಾರಿ ಆಸ್ಪತ್ರೆಯ ಎದುರು ಮೂರು ಮಳಿಗೆಗಳ ನಿರ್ಮಾಣ (ಪೂರ್ಣಗೊಂಡಿರುವ ಕಾಮಗಾರಿ)	ಕಾಮಗಾರಿಯನ್ನು ಪೂರ್ಣಗೊಳಿಸಲಾಗಿದ್ದಿತು ಹಾಗೂ ಹೊಸದುರ್ಗದ ಸರ್ಕಾರಿ ಆಸ್ಪತ್ರೆಗೆ ನವಂಬರ್ 2022ರಲ್ಲಿ ಆಡಳಿತ ಮಂಡಳಿಯಿಂದ ಅನುಮೋದನೆಗೊಳ್ಳುವ (ಮಾರ್ಚ್ 2023) ಮೊದಲೇ ವಹಿಸಿಕೊಡಲಾಗಿದ್ದಿತು. ಹಣಕಾಸನ್ನು ಉಪಯೋಗಿಸಿಕೊಳ್ಳಲು ಅವಧಿ ಮುಕ್ತಾಯಗೊಳ್ಳಬಾರದು ಎಂಬ ದೃಷ್ಟಿಯಿಂದ, ವ್ಯಾಪಾರ ಮಳಿಗೆ ಸಂಕೀರ್ಣವನ್ನು ಕೈಗೆತ್ತಿಕೊಳ್ಳಲಾಯಿತು ಹಾಗೂ ಜನೌಷದಿ ಮಳಿಗೆ, ಹಾಲಿನ ಬೂತು ಹಾಗೂ ಕ್ಯಾಂಟೀನನ್ನು ತೆರೆಯಲು ಕ್ರಮವನ್ನು ತೆಗೆದುಕೊಳ್ಳಲಾಗುವುದು ಎಂಬುದಾಗಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಯವರು, ಚಿತ್ರದುರ್ಗ, ಇವರು ನೀಡಿದ್ದ ಉತ್ತರವನ್ನು ಉಪ ನಿರ್ದೇಶಕರು, ಡಿಎಂಎಫ್‌ಟಿ, ಚಿತ್ರದುರ್ಗ, ಇವರು ಒಪ್ಪಿಕೊಂಡು ಕಳುಹಿಸಿಕೊಟ್ಟರು (ಡಿಸೆಂಬರ್ 2023). ಮೇಲ್ವಿಚಾರಣಾ ಸಮಿತಿಯ ಅನುಮೋದನೆಯನ್ನು ಪಡೆದುಕೊಂಡಿರಲಿಲ್ಲವಾದ್ದರಿಂದ ಹಾಗೂ ಡಿಎಂಎಫ್‌ಟಿ ಹಣಕಾಸನ್ನು ಉಪಯೋಗಿಸಿಕೊಳ್ಳಲು ಅವಧಿಯು ಮುಕ್ತಾಯಗೊಳ್ಳುವುದಿಲ್ಲವಾದ್ದರಿಂದ ಉತ್ತರವು ಒಪ್ಪುವಂತಿರಲಿಲ್ಲ.
ಶೈಕ್ಷಣಿಕ ವಲಯ				
7	ಹೊಳಲ್ಕೆರೆ ಪಟ್ಟಣದ ನಂದನ ಹೊಸೂರು ಗ್ರಾಮದಲ್ಲಿ ನೆಲ ಅಂತಸ್ತಿನಲ್ಲಿ ನಾಲ್ಕು ತರಗತಿ ಕೊಠಡಿಗಳ ನಿರ್ಮಾಣ	0.60	ನೆಲ ಅಂತಸ್ತಿನಲ್ಲಿ ಹಾಗೂ ಮೊದಲ ಅಂತಸ್ತಿನಲ್ಲಿ ಪ್ರತಿಯೊಂದರಲ್ಲೂ ಎರಡು ಕೊಠಡಿಗಳ ನಿರ್ಮಾಣ. (ಕಾಮಗಾರಿ ಪ್ರಗತಿಯಲ್ಲಿದೆ).	ಮೂಲ ಅನುಮೋದಿತ ನಕಾಶೆಯಲ್ಲಿದ್ದಂತಹ ಕೇವಲ ನೆಲ ಅಂತಸ್ತಿನಿಂದ ನೆಲ ಅಂತಸ್ತು ಮತ್ತು 1ನೇ ಮಹಡಿಗೆ ಮಾರ್ಗಾಂತರಣ ಮಾಡಲಾಗಿದ್ದಿತು. ಪ್ರಸಕ್ತ ಇದ್ದಂತಹ ಶಾಲೆಯು ಉತ್ತಮ ಸ್ಥಿತಿಯಲ್ಲಿದ್ದಿತು ಹಾಗೂ ಹೊಸ ಕಟ್ಟಡದಿಂದ 500 ಮೀಟರುಗಳ ದೂರದಲ್ಲಿದ್ದಿತು. ನಾಲ್ಕು ಕೊಠಡಿಗಳಿಗೆ ಸ್ಥಳಾವಕಾಶ ಇರಲಿಲ್ಲ ಆದ್ದರಿಂದ ಕಾಮಗಾರಿಯನ್ನು ನೆಲ ಅಂತಸ್ತು ಮತ್ತು ಮೊದಲ ಅಂತಸ್ತಿನಲ್ಲಿ ಪ್ರತಿಯೊಂದರಲ್ಲೂ ಎರಡು ಕೊಠಡಿಗಳನ್ನು ನಿರ್ಮಿಸುವ ಸಲುವಾಗಿ ಮಾರ್ಗಾಂತರಣಗೊಳಿಸಲಾಗಿದ್ದಿತು ಎಂಬುದಾಗಿ ಕಾರ್ಯನಿರ್ವಾಹಕ ಇಂಜಿನಿಯರ್‌ರವರು, ಲೋಕೋಪಯೋಗಿ ಇಲಾಖೆ, ಇವರು ನೀಡಿದ್ದ ಉತ್ತರವನ್ನು ಸರ್ಕಾರವು ಒಪ್ಪಿಕೊಂಡು ಕಳುಹಿಸಿಕೊಟ್ಟಿದ್ದಿತು (ಆಗಸ್ಟ್ 2024). ಪ್ರಸಕ್ತ ಇದ್ದಂತಹ ಶಾಲಾ ಕಟ್ಟಡವು ಉತ್ತಮ ಸ್ಥಿತಿಯಲ್ಲಿ ಇರುವಾಗ ಹೊಸ ಶಾಲೆಯ ನಿರ್ಮಾಣಕ್ಕೆ ಕಾರಣವನ್ನು ನೀಡುವುದಕ್ಕೆ ಸಂಬಂಧಿಸಿದಂತೆ ಉತ್ತರವು ಮೌನವಾಗಿದ್ದಿತು.
ಭೌತಿಕ ಮೂಲಸೌಕರ್ಯ ವಲಯ				
8	ಹೊಳಲ್ಕೆರೆ ಪಟ್ಟಣದಲ್ಲಿ ಗಣೇಶ ದೇವಸ್ಥಾನದ ಸಮೀಪ ಹಾಗೂ ರಾಜ್ಯ ಹೆದ್ದಾರಿ	0.25	ರಾಜ್ಯ ಹೆದ್ದಾರಿ 47ರಿಂದ ಕೆಸರುಕಟ್ಟೆ ಕೆರೆ ಏರಿಗೆ, ರಸ್ತೆಯ ಅಭಿವೃದ್ಧಿ, ತಡೆಗೋಡೆ ಮತ್ತು ಪ್ಲಾಟ್‌ಫಾರಂ ನಿರ್ಮಾಣ	ಈ ಕಾಮಗಾರಿಗಳನ್ನು ವ್ಯವಸ್ಥಾಪನಾ ಸಮಿತಿ ಅಥವಾ ಆಡಳಿತ ಮಂಡಳಿಯ ಅನುಮೋದನೆಯಿಲ್ಲದೆಯೇ ಬದಲಾವಣೆಗೊಳಿಸಲಾಗಿದ್ದಿತು. ವಾಸ್ತವಿಕವಾಗಿ ಕಾರ್ಯಗತಗೊಳಿಸಲಾಗಿದ್ದ

ಕ್ರಮ ಸಂಖ್ಯೆ	ಅನುಮೋದಿತ ಕಾಮಗಾರಿ	ಕ್ರಿಯಾ ಯೋಜನೆಯಲ್ಲಿದ್ದ ಮೊತ್ತ (₹ ಕೋಟಿಗಳಲ್ಲಿ)	ಕಾರ್ಯಗತ ಗೊಳಿಸಲಾಗಿರುವ ವಾಸ್ತವಿಕ ಕಾಮಗಾರಿ	ಜಂಟಿ ಭೌತಿಕ ಪರೀಕ್ಷಣೆಯಲ್ಲಿ ಗಮನಿಸಲಾದ ಅಂಶಗಳು
	47ರಿಂದ ಹೊಸದುರ್ಗಕ್ಕೆ ಸಿಮೆಂಟು ಕಾಂಕ್ರೀಟು ರಸ್ತೆ ಮತ್ತು ಚರಂಡಿ ನಿರ್ಮಾಣಕ್ಕೆ ಅನುವು		(ಕಾಮಗಾರಿಯು ಪೂರ್ಣಗೊಂಡಿರುವುದು).	ಕಾಮಗಾರಿ ಎಂದರೆ ತಡೆಗೋಡೆ ನಿರ್ಮಾಣ ಹಾಗೂ ಶಿವನಕೆರೆ ಕೆರೆಗೆ ವೇದಿಕೆ (ಪ್ಲಾಟ್‌ಫಾರಂ) ನಿರ್ಮಾಣ, ರಸ್ತೆ ಅಭಿವೃದ್ಧಿ ಕಾಮಗಾರಿಯನ್ನು ಕಾರ್ಯಗತಗೊಳಿಸಿರಲಿಲ್ಲ. ವಾಸ್ತವವಾಗಿ ಶಿವನಕೆರೆ ಕೆರೆಗೆ ರಕ್ಷಣಾ ಗೋಡೆ ಮತ್ತು ವೇದಿಕೆ ನಿರ್ಮಾಣ ಕಾಮಗಾರಿ ನಡೆದಿದ್ದು, ರಸ್ತೆ ಅಭಿವೃದ್ಧಿ ಕಾಮಗಾರಿ ನಡೆದಿಲ್ಲ. ಡಿಎಂಎಫ್‌ಟಿ ಅನುಮೋದನೆಯೊಂದಿಗೆಯೇ ಕಾಮಗಾರಿಯನ್ನು ಪರಿಷ್ಕರಿಸಲಾಯಿತು ಹಾಗೂ ಕಾರ್ಯಗತಗೊಳಿಸಲಾಯಿತು ಎಂಬುದಾಗಿ ಕಾರ್ಯನಿರ್ವಾಹಕ ಇಂಜಿನಿಯರ್‌ರವರು, ಲೋಕೋಪಯೋಗಿ ಇಲಾಖೆ, ಇವರು ನೀಡಿದ್ದ ಉತ್ತರವನ್ನು ಸರ್ಕಾರವು ಒಪ್ಪಿಕೊಂಡು ಕಳುಹಿಸಿಕೊಟ್ಟಿದ್ದಿತು (ಆಗಸ್ಟ್ 2024) ಯೋಜನೆಯ ಮಾರ್ಗಸೂಚಿಗಳ ಅಗತ್ಯತೆಯಂತೆ ವ್ಯವಸ್ಥಾಪಕ ಸಮಿತಿಯ ಅನುಮೋದನೆಯಿಲ್ಲದೆಯೇ ಕಾಮಗಾರಿಯನ್ನು ಬದಲಾವಣೆಗೊಳಿಸಿದ್ದರಿಂದ ಉತ್ತರವು ಒಪ್ಪುವಂತಿರಲಿಲ್ಲ.

ಮಾರ್ಗಾಂತರಣಗಳಿಗೆ ಕಾರಣಗಳು ಲೆಕ್ಕಪರಿಶೋಧನೆಗೆ ಲಭ್ಯಗೊಳಿಸಲಾದಂತಹ ದಾಖಲೆಗಳಿಂದ ಕಂಡುಬರುತ್ತಿರಲಿಲ್ಲ.

ಕಾಮಗಾರಿಗಳಿಂದ ಗುರಿಯಾಗಿಸಿಕೊಳ್ಳಲಾಗಿದ್ದಂತಹ ಉದ್ದೇಶಗಳು ಈಡೇರಿರದಿದ್ದುದು

ಅಧಿಕ ಮಟ್ಟದ ಆದ್ಯತೆಯ ಕ್ಷೇತ್ರಗಳು

ಜಂಟಿ ಭೌತಿಕ ಪರೀಕ್ಷಣೆ ನಡೆಸಿದ 417 ಕಾಮಗಾರಿಗಳಲ್ಲಿ, 305 ಕಾಮಗಾರಿಗಳು ಯೋಜನೆಯ ಮಾರ್ಗಸೂಚಿಗಳಲ್ಲಿ ಕಲ್ಪಿಸಲಾಗಿರುವಂತೆ 'ಅಧಿಕ ಮಟ್ಟದ ಆದ್ಯತೆಯ ಕ್ಷೇತ್ರಗಳಿಗೆ' ಸಂಬಂಧಿಸಿದ್ದವು. ಈ ಕ್ಷೇತ್ರಗಳಲ್ಲಿ ನಡೆಸಲಾದಂತಹ ಪರೀಕ್ಷಣೆಗಳಿಂದ ಕಂಡುಬಂದಂತಹ ಅಂಶಗಳನ್ನು ಈ ಕೆಳಗಿನ ಕಂಡಿಕೆಗಳಲ್ಲಿ ವಿವರಿಸಲಾಗಿರುವುದು:

5.6 ಕುಡಿಯುವ ನೀರು ಸರಬರಾಜು

ಪಿಎಂಕೆಕೆಕೆವೈ ಅಡಿಯಲ್ಲಿ ಆಯ್ಕೆ ಮಾಡಲಾದಂತಹ ಐದು ಜಿಲ್ಲೆಗಳಲ್ಲಿ 'ಕುಡಿಯುವ ನೀರು ಸರಬರಾಜು' ಶೀರ್ಷಿಕೆ ಅಡಿಯಲ್ಲಿ ₹ 127.98 ಕೋಟಿ ಮೊತ್ತದ 52 ಕಾಮಗಾರಿಗಳನ್ನು ಲೆಕ್ಕಪರಿಶೋಧನೆಯು ಜಂಟಿ ಭೌತಿಕ ಪರೀಕ್ಷಣೆ ಮಾಡಿತು.

5.6.1 ನೀರಿನ ಮೂಲವನ್ನು ಗುರುತಿಸದೆಯೇ ಕುಡಿಯುವ ನೀರು ಯೋಜನೆ ಕಾರ್ಯಗತಗೊಳಿಸಿದ್ದು

ಶಾಂತಿಸಾಗರದಿಂದ ಚಿತ್ರದುರ್ಗ ಪಟ್ಟಣಕ್ಕೆ ಪ್ರಸಕ್ತ ಇರುವಂತಹ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ (ಕೆಯುಡಬ್ಲ್ಯುಎಸ್‌ಅಂಡ್‌ಡಿಬಿ)ಯ ಮಾನಂಗಿ ಗ್ರಾಮದ ಬಳಿಯ ಟ್ಯಾಪಿಂಗ್ ಪಾಯಿಂಟ್‌ನಲ್ಲಿ ಶುದ್ಧ ನೀರಿನ ಪೈಪ್‌ಲೈನ್‌ನಿಂದ ನೀರನ್ನು ಟ್ಯಾಪಿಂಗ್ 'ಬಹು ಗ್ರಾಮ (19 ಗ್ರಾಮಗಳು) ಕುಡಿಯುವ ನೀರಿನ ಯೋಜನೆಯ ₹ 3.50 ಕೋಟಿ ಅಂದಾಜು ವೆಚ್ಚದ ಕಾಮಗಾರಿಯನ್ನು ಯೋಜಿಸಲಾಗಿತ್ತು. ಈ ಕೆಲಸವನ್ನು ಟೆಂಡರ್ ಮಾಡಿ ಆರು ತಿಂಗಳೊಳಗೆ ಕೆಲಸ ಪೂರ್ಣಗೊಳಿಸಲು ಗುತ್ತಿಗೆದಾರರಿಗೆ (15 ಸೆಪ್ಟೆಂಬರ್ 2021) ನೀಡಲಾಯಿತು.

ಜಂಟಿ ಭೌತಿಕ ಪರೀಕ್ಷಣೆಯ ವೇಳೆಯಲ್ಲಿ (15 ಜುಲೈ 2023), ನೀರನ್ನು ಪಡೆದುಕೊಳ್ಳುವ ಸ್ಥಳದಿಂದ ನೀರು ಸಂಪರ್ಕ ಪ್ರಧಾನ ಕೊಳವೆ ಮಾರ್ಗವನ್ನು ಹೊರತುಪಡಿಸಿದಂತೆ ₹ 2.09 ಕೋಟಿ ವೆಚ್ಚದಲ್ಲಿ ಎಲ್ಲಾ ಕಾಮಗಾರಿಗಳು ಪೂರ್ಣಗೊಂಡಿದ್ದವು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್, ಗ್ರಾಮೀಣ ನೀರು ಸರಾರಾಜು ಉಪ–ವಿಭಾಗ (ಎಇಇ, ಆರ್‌ಡಬ್ಲ್ಯುಎಸ್), ಚಿತ್ರದುರ್ಗ, ಇವರು ತಮ್ಮ ದಿನಾಂಕ 15 ನವೆಂಬರ್ 2022 ಹಾಗೂ 30 ಜನವರಿ 2023ರ ಪತ್ರದ ಮೂಲಕ ವಾಣಿವಿಲಾಸ ಸಾಗರ ಅಣೆಕಟ್ಟೆಯಿಂದ ಚಿತ್ರದುರ್ಗ ತಾಲ್ಲೂಕಿನ ಎಲ್ಲಾ ಗ್ರಾಮಗಳಿಗೆ ಕುಡಿಯುವ ನೀರು ಸರಬರಾಜು ಯೋಜನೆಯು ಅದೆಂದರೆ ವಿವಿಧ ಗ್ರಾಮ ಕುಡಿಯುವ ನೀರು ಸರಬರಾಜು ಯೋಜನೆಯು ಪೂರ್ಣಗೊಳ್ಳುವವರೆವಿಗೂ (ಅದು ಪ್ರಗತಿಯಲ್ಲಿದ್ದಿತು) ಕೊಳವೆ ಮಾರ್ಗವನ್ನು ಮಾನಂಗಿಯ ಸಮೀಪ ತಾತ್ಕಾಲಿಕವಾಗಿ ಸಂಪರ್ಕಗೊಳಿಸುವ ಸಲುವಾಗಿ ಅನುಮತಿಯನ್ನು ನೀಡುವಂತೆ ಆಯುಕ್ತರು ನಗರಸಭೆ, ಚಿತ್ರದುರ್ಗ, ಇವರನ್ನು ಕೋರಿದ್ದರು. ಆದಾಗ್ಯೂ, ಜನವರಿ 2024ರಲ್ಲಿದ್ದಂತೆ ಆಯುಕ್ತರು, ನಗರಸಭೆ, ಚಿತ್ರದುರ್ಗ, ಇವರು ಅನುಮತಿಯನ್ನು ನೀಡಿರಲಿಲ್ಲ.

ಮಾನಂಗಿಯ ಸಮೀಪ ನೀರು ಪಡೆದುಕೊಳ್ಳುವ ಸ್ಥಳದಿಂದ ಕೊಳವೆ ಮಾರ್ಗವನ್ನು ಸಂಪರ್ಕಗೊಳಿಸುವ ಸಲುವಾಗಿ ನಗರಸಭೆಯಿಂದ (ಸಿಎಂಸಿ) ಅನುಮತಿಯನ್ನು ಪಡೆದುಕೊಳ್ಳದೆಯೇ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗಿದ್ದಿತು ಹಾಗೂ ಅದನ್ನು ಗ್ರಾಮೀಣ ನೀರು ಸರಬರಾಜು (ಆರ್‌ಡಬ್ಲ್ಯುಎಸ್) ವಿಭಾಗವು ಡಿಎಂಎಫ್‌ಟಿ ಗಮನಕ್ಕೆ ತಂದಿರಲಿಲ್ಲ ಎಂಬುದು ಸುಸ್ಪಷ್ಟವಾಗಿದ್ದಿತು. ಮುಂದುವರೆದು, ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್, ಗ್ರಾಮೀಣ ನೀರು ಸರಾರಾಜು ಉಪ–ವಿಭಾಗ, ಚಿತ್ರದುರ್ಗ, ಇವರು ಗ್ರಾಮಸ್ಥರು ಪ್ರತಿಭಟನೆ ಮಾಡುತ್ತಿರುವರು ಹಾಗೂ ಕೊಳವೆ ಮಾರ್ಗವನ್ನು ಮಾನಂಗಿಯಲ್ಲಿ ನೀರು ಪಡೆದುಕೊಳ್ಳುವ ಸ್ಥಳದ ಸಮೀಪ ಸಂಪರ್ಕ ಕಲ್ಪಿಸುವ ಸಲುವಾಗಿ ಸಹಕಾರ ನೀಡುತ್ತಿಲ್ಲ ಎಂಬುದನ್ನು ತಮ್ಮ ಮೇಲಧಿಕಾರಿಗಳ ಗಮನಕ್ಕೆ ತಂದಿದ್ದರು (10 ಜುಲೈ 2023). ಮುಂದುವರೆದು, ಇತರೆ ಇಲಾಖೆಗಳಿಂದ ಅನುಮತಿಯನ್ನು ಪಡೆದುಕೊಂಡಿರಲಿಲ್ಲವಾದ್ದರಿಂದ, ಅಂತಿಮ ಬಿಲ್ಲನ್ನು ಪಾವತಿಸುವ ಸಲುವಾಗಿ ಗುತ್ತಿಗೆಯನ್ನು ಮುಕ್ತಾಯಗೊಳಿಸುವಂತೆ ಹಾಗೂ ಭದ್ರತಾ ಠೇವಣಿ ಮೊತ್ತವನ್ನು ಹಿಂಪಾವತಿಸುವಂತೆ ಗುತ್ತಿಗೆದಾರರು ಕೋರಿಕೆಯನ್ನು ಸಲ್ಲಿಸಿದ್ದರು (29 ಮೇ 2023).

ಶಾಂತಿಸಾಗರ ಜಲಾಶಯದಿಂದ ಚಿತ್ರದುರ್ಗ ಪಟ್ಟಣಕ್ಕೆ ಇರುವ ಸರಬರಾಜು ಮಾರ್ಗಕ್ಕೆ ಸಂಪರ್ಕ ಕಲ್ಪಿಸುವ ಮೂಲಕ ಕೊಳವೆ ಮಾರ್ಗಕ್ಕೆ ಸಂಪರ್ಕವನ್ನು ಕಲ್ಪಿಸುವಂತೆ ಕಾರ್ಯನಿರ್ವಾಹಕ ಇಂಜಿನಿಯರ್, ಗ್ರಾಮೀಣ ನೀರು ಸರಬರಾಜು ವಿಭಾಗ, ಚಿತ್ರದುರ್ಗ, ಇವರನ್ನು ಕೋರಲಾಗಿರುವುದು, ಆ ರೀತಿಯಲ್ಲಿ ಸಂಪರ್ಕವನ್ನು ಕಲ್ಪಿಸಿದನಂತರ, ಎಲ್ಲಾ ಗ್ರಾಮಗಳಿಗೆ ನೀರು ಸರಬರಾಜನ್ನು ಮಾಡಲಾಗುವುದು ಎಂಬುದಾಗಿ ಇಲಾಖೆಯು ನೀಡಿರುವ ಉತ್ತರವನ್ನು ಸರ್ಕಾರವು ಒಪ್ಪಿಕೊಂಡು ಕಳುಹಿಸಿರುವುದು (ಆಗಸ್ಟ್ 2024). ಮಾನಂಗಿಯಲ್ಲಿ ನೀರನ್ನು ಪಡೆದುಕೊಳ್ಳುವ ಸ್ಥಳದ ಸಮೀಪ ಕೊಳವೆ ಮಾಗವನ್ನು ಸಂಪರ್ಕಿಸುವ ಕಾಮಗಾರಿಯು ಇನ್ನೂ ಬಾಕಿಯಿರುವುದರಿಂದ ಉತ್ತರವು ಒಪ್ಪುವಂತಿರಲಿಲ್ಲ.

ಈ ರೀತಿಯಾಗಿ, 19 ಗ್ರಾಮಗಳಿಗೆ ಕುಡಿಯುವ ನೀರು ಒದಗಿಸುವ ಕಾಮಗಾರಿಯನ್ನು ಕೈಗೆತ್ತಿಕೊಳ್ಳುವ ಮೊದಲು ಆಯುಕ್ತರು, ನಗರಸಭೆ, ಚಿತ್ರದುರ್ಗ, ಇವರಿಂದ ಅನುಮತಿಯನ್ನು ಪಡೆದುಕೊಂಡಿರಲಿಲ್ಲವಾದ್ದರಿಂದ ₹ 2.09 ಕೋಟಿ ಮೊತ್ತದಷ್ಟು ಸಂಪೂರ್ಣ ವೆಚ್ಚವು ನಿರುಪಯುಕ್ತವಾಗಿ/ನಿಷ್ಫಲವಾಗಿ ಉಳಿಯಿತು.

5.6.2 ವಿಜಯನಗರ ಮತ್ತು ಬೆಂಗಳೂರು ನಗರ ಜಿಲ್ಲೆಗಳ ಐದು ತಾಲ್ಲೂಕುಗಳ[33] ಹಳ್ಳಿಗಳು ಮತ್ತು ಸರ್ಕಾರಿ ಶಾಲೆಗಳಿಗೆ (ಆರ್‌ಒ ಸ್ಥಾವರಗಳು) ಕುಡಿಯುವ ನೀರು ಸರಬರಾಜು ಒದಗಿಸುವ ₹ 1.12 ಕೋಟಿ ಮೌಲ್ಯದ 26 ಕಾಮಗಾರಿಗಳನ್ನು ಲೆಕ್ಕಪರಿಶೋಧನೆಯು ಪರಿಶೀಲಿಸಿತು. ಹಳ್ಳಿಗಳಲ್ಲಿ ಕೊಳವೆಬಾವಿಗಳನ್ನು ಕೊರೆಯುವುದು, ಮೋಟಾರ್ ಅಳವಡಿಸುವುದು, ಕೊಳವೆ ಮಾರ್ಗಗಳನ್ನು ಅಳವಡಿಸುವುದು ಇತ್ಯಾದಿಗಳನ್ನು ಒಳಗೊಂಡ 14 ಕುಡಿಯುವ ನೀರು ಸರಬರಾಜು ಕೆಲಸಗಳಲ್ಲಿ, ಆರು ಕೊಳವೆಬಾವಿಗಳು ಕಾರ್ಯಸ್ಥಗಿತಗೊಂಡಿದ್ದವು, ಎರಡು ಕೊಳವೆಬಾವಿಗಳು ನಿರ್ದಿಷ್ಟ ಸ್ಥಳದಲ್ಲಿ ಕಂಡು ಬರಲಿಲ್ಲ, ಮೂರು ಮೋಟಾರ್‌ಗಳು ಸಕ್ರಿಯವಾಗಿರಲಿಲ್ಲ, ಎರಡು ಮೋಟಾರ್‌ಗಳು ಸ್ಥಳದಲ್ಲಿ ಇರಲಿಲ್ಲ ಮತ್ತು ಒಂದು ಕೊಳವೆಬಾವಿಯನ್ನು ಖಾಸಗಿ ಭೂಮಿಯಲ್ಲಿ ಕೊರೆಯಲಾಗಿದ್ದಿತು. ಆದ್ದರಿಂದ, ಸಾರ್ವಜನಿಕರು ಈ ಆಸ್ತಿಗಳನ್ನು ಉಪಯೋಗಿಸಿಕೊಂಡಿರಲಿಲ್ಲ ಹಾಗೂ ಈ ಆಸ್ತಿಗಳನ್ನು ಸೃಷ್ಟಿಸಿದನಂತರ ಡಿಎಂಎಫ್‌ಟಿಗಳು ಮೇಲ್ವಿಚಾರಣೆ ಮಾಡಿರಲಿಲ್ಲ.

ಛಾಯಾಚಿತ್ರ ಸಂಖ್ಯೆ 5.6: ಆನೇಕಲ್ಲು ತಾಲ್ಲೂಕಿನ ರಾಗಿಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಶಿವೇನಹಳ್ಳಿಗೆ ಒದಗಿಸಲಾಗಿದ್ದ ಕುಡಿಯುವ ನೀರು ಸರಬರಾಜು ವ್ಯವಸ್ಥೆಯಲ್ಲಿ ಮೋಟಾರು ಅನುಪಸ್ಥಿತಗೊಂಡಿರುವುದು.

ಸರ್ಕಾರಿ ಶಾಲೆಗಳಿಗೆ ಸರಬರಾಜು ಮಾಡಲಾದ 12 ಆರ್‌ಒ ಘಟಕಗಳಲ್ಲಿ ಮೂರು ಕಾರ್ಯನಿರ್ವಹಿಸುತ್ತಿರಲಿಲ್ಲ, ಆರು ಬಳಕೆಗೆ ಬಂದಿಲ್ಲ ಮತ್ತು ಮೂರಕ್ಕೆ ಸಂಬಂಧಿಸಿದಂತೆ, ಆರ್‌ಒ ಘಟಕಗಳ ಸಾಮರ್ಥ್ಯವು ಆ ಶಾಲೆಗಳಲ್ಲಿನ ಅವಶ್ಯಕತೆಗಳನ್ನು ಪೂರೈಸಲು ಸಮರ್ಪಕವಾಗಿರಲಿಲ್ಲ, ಇದು ವೈಜ್ಞಾನಿಕ ನಿರ್ಧಾರಣೆಗಳ ಕೊರತೆಯನ್ನು ಸೂಚಿಸುತ್ತದೆ.

ಈ ರೀತಿಯಾಗಿ, ನಿಯತಕಾಲಿಕವಾದಂತಹ ನಿರ್ವಹಣೆಯ ಕೊರತೆ, ಕೊಳವೆ ಬಾವಿಗಳನ್ನು ಕೊರೆಯುವ ಮೊದಲು/ ಆರ್‌ಒ ಸ್ಥಾವರಗಳನ್ನು ಸರಬರಾಜು ಮಾಡುವ ಮೊದಲು ವೈಜ್ಞಾನಿಕವಾಗಿ ನಿರ್ಧಾರಣೆಗಳನ್ನು ಮಾಡದಿದ್ದುದು, ಕಾಮಗಾರಿಯನ್ನು ಕೈಗೆತ್ತಿಕೊಳ್ಳುವ ಮೊದಲು ಇತರೆ ಇಲಾಖೆಗಳಿಂದ ಅನುಮತಿಯನ್ನು ಪಡೆದುಕೊಳ್ಳದಿದ್ದುದು, ಇತ್ಯಾದಿಗಳು 24 ಕುಡಿಯುವ ನೀರು ಸರಬರಾಜು ಯೋಜನೆಗಳ ಕಡೆಗೆ ಭರಿಸಲಾಗಿದ್ದಂತಹ ₹ 93.39 ಲಕ್ಷ ಮೊತ್ತವು ನಿಷ್ಫಲ ವೆಚ್ಚವಾಗುವಲ್ಲಿ ಹಾಗೂ ಅದರಿಂದಾಗಿ ಉದ್ದೇಶಿತ ಫಲಾನುಭವಿಗಳು ಅಗತ್ಯ ಮೂಲಸೌಕರ್ಯಗಳಿಂದ ವಂಚಿತಗೊಳ್ಳುವಲ್ಲಿ ಪರಿಣಮಿಸಿದ್ದಿತು.

ಕರಿಯಪ್ಪನಹಳ್ಳಿ ಮತ್ತು ಶಿವೇನಹಳ್ಳಿಯಲ್ಲಿನ ಎರಡು ಕೊಳವೆ ಭಾವಿಗಳಿಗೆ ಸಂಬಂಧಿಸಿದಂತೆ ಅಳವಡಿಸಲಾಗಿದ್ದ ಪಂಪುಗಳನ್ನು ಅದೇ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಬನ್ನೇರುಘಟ್ಟ ಮತ್ತು ಸೊಳ್ಳೆಪುರದೊಡ್ಡಿಯಲ್ಲಿನ ಅಧಿಕ ಪ್ರಮಾಣದಲ್ಲಿ ನೀರು ಲಭ್ಯವಾಗುತ್ತಿರುವಂತಹ ಕೊಳವೆ ಬಾವಿಗಳಿಗೆ ಸ್ಥಳಾಂತರಿಸಲಾಗಿರುವುದು ಹಾಗೂ ಸ್ಥಾಪಿಸಲಾಗಿರುವ ಆರ್‌ಒ ಸ್ಥಾವರಗಳಿಗೆ ಸಂಬಂಧಿಸಿದಂತೆ ಒಂದು ವರ್ಷದ ನಂತರ ನಿರ್ವಹಣೆಗೆ ಯಾವುದೇ ಪ್ರಮೇಯ/ಅವಕಾಶವೂ ಇರುವುದಿಲ್ಲ ಎಂಬುದಾಗಿ ಸರ್ಕಾರವು ಉತ್ತರಿಸಿತು (ಆಗಸ್ಟ್ 2024). ಮುಂದುವರೆದು, ಹಣಕಾಸಿನ ಲಭ್ಯತೆಯ ಅನುಸಾರ ಆರ್‌ಒ ಸ್ಥಾವರಗಳನ್ನು ಸ್ಥಾಪಿಸಲಾಯಿತು ಎಂದು ತಿಳಿಸಲಾಯಿತು. ನಿರ್ವಹಣೆಯ ಕೊರತೆಯ

[33] ಹೊಸಪೇಟೆ, ಹರಪನಹಳ್ಳಿ, ಬೆಂಗಳೂರು ಉತ್ತರ, ಆನೇಕಲ್ಲು ಮತ್ತು ಬೆಂಗಳೂರು ದಕ್ಷಿಣ.

ಕಾರಣ ಡಿಎಂಎಫ್‌ಟಿ ಹಣಕಾಸಿನಿಂದ ಸೃಷ್ಟಿಸಲಾಗಿದ್ದಂತಹ ಆಸ್ತಿಗಳು ಉಪಯೋಗವಾಗದೆಯೇ ಉಳಿದಿದ್ದವಾದ್ದರಿಂದ ಉತ್ತರವು ಒಪ್ಪುವಂತಿರಲಿಲ್ಲ.

5.7 ಶೈಕ್ಷಣಿಕ ಕ್ಷೇತ್ರ

ಲೆಕ್ಕಪರಿಶೋಧನೆಯು, ಪಿಎಂಕೆಕೆಕೆವೈ ಅಡಿಯಲ್ಲಿ ಆಯ್ಕೆ ಮಾಡಿಕೊಳ್ಳಲಾದ ಐದು ಜಿಲ್ಲೆಗಳಲ್ಲಿ ಶೈಕ್ಷಣಿಕ ಶೀರ್ಷಿಕೆ ಅಡಿಯಲ್ಲಿ ಕಾರ್ಯಗತಗೊಳಿಸಲಾಗಿದ್ದಂತಹ ₹ 107.78 ಕೋಟಿ ಮೊತ್ತದ 148 ಕಾಮಗಾರಿಗಳನ್ನು ಜಂಟಿ ಭೌತಿಕ ಪರೀಕ್ಷಣೆ ನಡೆಸಿತು.

5.7.1 ಇ–ಕಲಿಕೆ ವ್ಯವಸ್ಥೆಯ ಸ್ಥಾಪನೆ

ಶಾಲೆಗಳಲ್ಲಿ ಇ–ಕಲಿಕೆ ವ್ಯವಸ್ಥೆಯ ಸ್ಥಾಪನೆಯ (ಪ್ರೊಜೆಕ್ಟರು, ಸ್ಮಾರ್ಟ್ ಹಲಗೆ ಮತ್ತು ಇತರೆ ಸಂಬಂಧಿತ ಉಪಕರಣದೊಂದಿಗೆ) (***ಪ್ಯಾರಾಗ್ರಾಫ್ 6.4 ರಲ್ಲಿ ಉಲ್ಲೇಖಿಸಲಾದ***) ಕಾಮಗಾರಿಯನ್ನು ಚಿತ್ರದುರ್ಗ ಜಿಲ್ಲೆಯ ಆರು ತಾಲ್ಲೂಕುಗಳ 400 ಶಾಲೆಗಳಲ್ಲಿ ₹ 8.00 ಕೋಟಿ ವೆಚ್ಚದಲ್ಲಿ ಕಾರ್ಯಗತಗೊಳಿಸಲಾಯಿತು.

400 ಶಾಲೆಗಳ ಪೈಕಿ 101 ಶಾಲೆಗಳಲ್ಲಿ ಇ–ಕಲಿಕೆ ವ್ಯವಸ್ಥೆಯನ್ನು ಚಿತ್ರದುರ್ಗದ ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪ–ನಿರ್ದೇಶಕರ ಕಚೇರಿಯ ಸಿಬ್ಬಂದಿಯೊಂದಿಗೆ ಚಿತ್ರದುರ್ಗ, ಹೊಳಲ್ಕೆರೆ ಮತ್ತು ಹೊಸದುರ್ಗ ತಾಲ್ಲೂಕುಗಳಲ್ಲಿ ಜಂಟಿ ಭೌತಿಕ ಪರೀಕ್ಷಣೆಯನ್ನು ಮಾಡುವ ವೇಳೆಯಲ್ಲಿ ಲೆಕ್ಕಪರಿಶೋಧನೆಯು ಈ ಕೆಳಗಿನ ಅಂಶಗಳನ್ನು ಗಮನಿಸಿತು:

- ಶಾಲೆಗಳ ಆಯ್ಕೆಗೆ ಮಾನದಂಡವು ಲೆಕ್ಕಪರಿಶೋಧನೆಗೆ ಒದಗಿಸಲಾಗಿದ್ದ ದಾಖಲೆಗಳಿಂದ ಕಂಡುಬರುತ್ತಿರಲಿಲ್ಲ.

- ಪರೀಕ್ಷಾ–ಪರಿಶೀಲನೆ ಮಾಡಲಾದ ಶಾಲೆಗಳಲ್ಲಿ ಇ–ಕಲಿಕೆ ವ್ಯವಸ್ಥೆಯನ್ನು ಉಪಯೋಗಿಸಿಕೊಂಡಿರುವುದರ ಸ್ಥಿತಿಗತಿಯು ಈ ಕೆಳಗೆ ತೋರಿಸಿರುವಂತೆ ನಿಕೃಷ್ಟಮಟ್ಟದಲ್ಲಿ ಇದ್ದಿತು:

ಕೋಷ್ಟಕ ಸಂಖ್ಯೆ 5.4: ಪರೀಕ್ಷಾ–ಪರಿಶೀಲನೆ ಮಾಡಲಾದ ಶಾಲೆಗಳಲ್ಲಿ ಇ–ಕಲಿಕೆ ವ್ಯವಸ್ಥೆಯನ್ನು ಉಪಯೋಗಿಸಿಕೊಂಡಿರುವುದರ ಸ್ಥಿತಿಗತಿಯನ್ನು ತೋರಿಸುವ ಕೋಷ್ಟಕ

ಕ್ರಮ ಸಂಖ್ಯೆ	ತಾಲ್ಲೂಕು	ಪರೀಕ್ಷಾ ಪರಿಶೀಲನೆ ಮಾಡಲಾದ ಶಾಲೆಗಳ ಸಂಖ್ಯೆ	ಇ–ಕಲಿಕೆ ವ್ಯವಸ್ಥೆಯನ್ನು ಉಪಯೋಗಿಸಿಕೊಂಡಿರುವ ಶಾಲೆಗಳ ಸಂಖ್ಯೆ	ಇ–ಕಲಿಕೆ ವ್ಯವಸ್ಥೆಯನ್ನು ಇನ್ನೂ ಉಪಯೋಗಿಸಿ ಕೊಳ್ಳಬೇಕಿರುವ ಶಾಲೆಗಳ ಸಂಖ್ಯೆ
1	ಹೊಳಲ್ಕೆರೆ	41	9	32
2	ಹೊಸದುರ್ಗ	30	27	03
3	ಚಿತ್ರದುರ್ಗ	30	0	30
	ಒಟ್ಟು	**101**	**36**	**65**

ಮೂಲ: ಲೆಕ್ಕಪರಿಶೋಧನೆಯು ಸಂಕಲಿಸಿದ ಮಾಹಿತಿ

ಜಂಟಿ ಪರೀಕ್ಷಣೆಯ ವೇಳೆಯಲ್ಲಿ, ಶಾಲೆಯ ಮುಖ್ಯಸ್ಥರುಗಳು ಮತ್ತು ಶಿಕ್ಷಕರುಗಳಿಗೆ ಯಾವುದೇ ತರಬೇತಿಯನ್ನು ನೀಡಿರುವುದಿಲ್ಲ ಹಾಗೂ ಈ ಪ್ರೊಜೆಕ್ಟರುಗಳನ್ನು ಯಾವ ರೀತಿಯಲ್ಲಿ ಉಪಯೋಗಿಸಬೇಕು ಎಂಬುದರ ಬಗ್ಗೆ ತಮಗೆ ಅರಿವು ಇರುವುದಿಲ್ಲ ಎಂಬುದಾಗಿ ಶಾಲೆಯ ಮುಖ್ಯಸ್ಥರುಗಳು ಮತ್ತು ಶಿಕ್ಷಕರುಗಳು ತಿಳಿಸಿದರು. ಮುಂದುವರೆದು, ಎಲ್ಲಾ 101 ಶಾಲೆಗಳಲ್ಲಿ ಒಂದು ಪ್ರೊಜೆಕ್ಟರು (ಈ ಮೊದಲು ದಾನವಾಗಿ ಸ್ವೀಕೃತಗೊಂಡಿರುವುದು) ಬಳಕೆಯಲ್ಲಿದ್ದಿತು ಹಾಗೂ ಒಂದು ಪ್ರೊಜೆಕ್ಟರನ್ನು ಹೆಚ್ಚುವರಿಯಾಗಿ ನೀಡಿರುವುದು ಸಮರ್ಥನೀಯವಾಗಿರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಇದು ಇ–ಕಲಿಕೆ ವ್ಯವಸ್ಥೆಯ ಕಡೆಗೆ 101 ಶಾಲೆಗಳಿಗೆ ಸಂಬಂಧಿಸಿದಂತೆ ₹ 1.82 ಕೋಟಿ[34] ಮೊತ್ತವನ್ನು ಹೆಚ್ಚುವರಿಯಾಗಿ ಖರ್ಚು ಮಾಡುವಲ್ಲಿ ಪರಿಣಮಿಸಿದ್ದಿತು.

[34] ಟ್ರಾಲಿಯೂ ಒಳಗೊಂಡಂತೆ ಪ್ರೊಜೆಕ್ಟರು ಒಂದಕ್ಕೆ ₹ 1.80 ಲಕ್ಷ X 101.

- ಶಾಲಾ ಅಧಿಕಾರಿಗಳು ತಿಳಿಸಿರುವಂತೆ, ಕಿಯಾನಿಕ್ಸ್ ಸರಬರಾಜು ಮಾಡಿರುವ ಯುಪಿಎಸ್ ಎಲ್ಲಾ ಶಾಲೆಗಳಲ್ಲಿಯೂ ಅದನ್ನು ವಿತರಿಸಿದ ದಿನಾಂಕದಿಂದಲೂ ಕಾರ್ಯನಿರ್ವಹಿಸುತ್ತಿರುವುದಿಲ್ಲ, ಇದು ₹ 0.19 ಕೋಟಿ[35] ಮೊತ್ತದಷ್ಟು ನಿಷ್ಫಲ ವೆಚ್ಚವಾಗುವಲ್ಲಿ ಪರಿಣಮಿಸಿದ್ದಿತು.

ಉಪ–ನಿರ್ದೇಶಕರು ಮತ್ತು ಸಂಚಾಲಕರು, ಡಿಎಂಎಫ್‌ಟಿ, ಚಿತ್ರದುರ್ಗ, ಇವರು ಈ ಸಮಸ್ಯೆಗಳ ಬಗ್ಗೆ ಕಿಯಾನಿಕ್ಸ್‌ನ ಗಮನಕ್ಕೆ ತಂದಿದ್ದರು. ಕಿಯಾನಿಕ್ಸ್ ಇದಕ್ಕೆ ಪ್ರತಿಕ್ರಿಯೆ ನೀಡಿ ಶಾಲೆಗಳಿಗೆ ಭೇಟಿ ನೀಡಲು ಕ್ರಮವನ್ನು ಕೈಗೊಳ್ಳಲಾಯಿತು ಹಾಗೂ ಶಿಕ್ಷರುಗಳು ಮತ್ತು ವಿದ್ಯಾರ್ಥಿಗಳಿಗೆ ತರಬೇತಿಯನ್ನು ನೀಡಲಾಗಿರುವುದು ಎಂಬುದಾಗಿ ತಿಳಿಸಿದ್ದಿತು (ಡಿಸೆಂಬರ್ 2023). ಆದಾಗ್ಯೂ, ಈ ಕ್ರಮವನ್ನು ಲೆಕ್ಕಪರಿಶೋಧನೆಯು ಇದ್ದಂತಹ ಸಮಸ್ಯೆಗಳ ಬಗ್ಗೆ ಸ್ಪಷ್ಟಪಡಿಸಿದ ನಂತರವಷ್ಟೆ ಕೈಗೊಳ್ಳಲಾಗಿದ್ದಿತು ಹಾಗೂ ಅವುಗಳ ಸರಬರಾಜಿನ ನಂತರದಲ್ಲಿ ಈ ಆಸ್ತಿಗಳನ್ನು ಉಪಯೋಗಿಸುತ್ತಿರುವುದರ ಬಗ್ಗೆ ಶಿಕ್ಷಣ ಇಲಾಖೆಯಿಂದಾಗಲೀ ಅಥವಾ ಡಿಎಂಎಫ್‌ಟಿನಿಂದಾಗಲೀ ಮೇಲ್ವಿಚಾರಣೆ ಮಾಡಿರಲಿಲ್ಲ.

5.7.2 ಶಾಲೆಗಳಿಗೆ ಗಣಕಯಂತ್ರಗಳು ಮತ್ತು ಇತರೆ ಉಪಕರಣಗಳನ್ನು ಒದಗಿಸಿರುವುದು

ಶೈಕ್ಷಣಿಕ ವಲಯದ ಅಡಿಯಲ್ಲಿ ಹೊಳಲ್ಕೆರೆ ತಾಲ್ಲೂಕಿನಲ್ಲಿ ವಿವಿಧ ಸರ್ಕಾರಿ ಶಾಲೆಗಳು ಮತ್ತು ಕಾಲೇಜುಗಳಿಗೆ ₹ 4.00 ಕೋಟಿ ಒಟ್ಟಾರೆ ವೆಚ್ಚದಲ್ಲಿ ಗಣಕಯಂತ್ರಗಳು ಮತ್ತು ಉಪಕರಣಗಳನ್ನು ಒದಗಿಸುವ ಸಲುವಾಗಿ ಒಂದು ಯೋಜನೆಯನ್ನು ಡಿಎಂಎಫ್‌ಟಿ, ಚಿತ್ರದುರ್ಗ, ಇವರು ಕೈಗೆತ್ತಿಕೊಂಡರು ಹಾಗೂ ಉಪ–ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಚಿತ್ರದುರ್ಗ, ಇವರ ಮೂಲಕ ಕಾರ್ಯಗತಗೊಳಿಸಿದರು. ಕಾಮಗಾರಿ ಆದೇಶವನ್ನು ಕಿಯಾನಿಕ್ಸ್‌ಗೆ ನೀಡಲಾಯಿತು (ಸೆಪ್ಟಂಬರ್ 2020). ಕಿಯಾನಿಕ್ಸ್ ಗಣಕಯಂತ್ರಗಳು ಮತ್ತು ಉಪಕರಣಗಳನ್ನು ಸರಬರಾಜು ಮಾಡಿದ್ದಂತಹ 38 ಶಾಲೆಗಳ ಜಂಟಿ ಭೌತಿಕ ಪರೀಕ್ಷಣೆಯ ವೇಳೆಯಲ್ಲಿ (ಆಗಸ್ಟ್ 2023) ಈ ಕೆಳಗಿನ ಅಂಶಗಳನ್ನು ಗಮನಿಸಲಾಯಿತು:

ಛಾಯಾಚಿತ್ರ ಸಂಖ್ಯೆ 5.7: ಕಾಮಗಾರಿಯನ್ನು ವಿಧಾನಸಭೆ ಸದಸ್ಯರ ಅನುದಾನದ ಅಡಿಯಲ್ಲಿ ಕೈಗೆತ್ತಿಕೊಳ್ಳಲಾಗಿರುವುದು ಎಂಬುದಾಗಿ ಪ್ರದರ್ಶನ ಫಲಕವನ್ನು ಹಾಕಿರುವುದು.

- ಈ 38 ಶಾಲೆಗಳಿಗೆ ಸರಬರಾಜು ಮಾಡಲಾಗಿದ್ದಂತಹ ಪ್ರಿಂಟರುಗಳು, ಇವುಗಳನ್ನು ಸ್ಥಾಪಿಸಿದ ದಿನಾಂಕದಿಂದಲೂ ಕಾರ್ಯನಿರ್ವಹಿಸುತ್ತಿರುವುದಿಲ್ಲ. ಕಾಟ್ರಿಡ್ಜುಗಳು ದುಬಾರಿಯಾಗಿರುವುದರಿಂದ ಹಾಗೂ ಬದಲಿ ಪ್ರಿಂಟರುಗಳು ಲಭ್ಯವಿದ್ದುದರಿಂದ ಈ ಪ್ರಿಂಟರುಗಳನ್ನು ಉಪಯೋಗಿಸುತ್ತಿರುವುದಿಲ್ಲ ಎಂಬುದಾಗಿ ಶಾಲಾ ಅಧಿಕಾರಿಗಳು ಲೆಕ್ಕಪರಿಶೋಧನೆಗೆ ತಿಳಿಸಿದರು.

- ಕಾಮಗಾರಿ ಆದೇಶದ ಷರತ್ತುಗಳ ಅನುಸಾರ, ಡಿಎಂಎಫ್‌ಟಿ ಮೂಲಕ ಕಾಮಗಾರಿಯನ್ನು ಕಾರ್ಯಗತಗೊಳಿಸಲಾಗಿದ್ದಿತು ಎಂದು ಪ್ರದರ್ಶನ ಫಲಕದಲ್ಲಿ ಸೂಚಿಸಬೇಕಿತ್ತು. ಆದಾಗ್ಯೂ, ಟ್ರಸ್ಟಿನ ಫಲಕದ ಜೊತೆಗೆ ಈ ಕಾಮಗಾರಿಯನ್ನು ಹೊಳಲ್ಕೆರೆ ವಿಧಾನಸಭೆ ಸದಸ್ಯರ ಅನುದಾನದ ಅಡಿಯಲ್ಲಿ ಕೈಗೆತ್ತಿಕೊಳ್ಳಲಾಗಿರುವುದು

[35] ಯುಪಿಎಸ್ ಒಂದಕ್ಕೆ ₹ 19,116 X 101.

ಎಂಬುದಾಗಿ ವಿಧಾನಸಭಾ ಸದಸ್ಯರ ಛಾಯಾಚಿತ್ರದೊಂದಿಗೆ ಪ್ರದರ್ಶನ ಫಲಕವನ್ನು ಹಾಕಲಾಗಿದ್ದಿತು.

ಲೆಕ್ಕಪರಿಶೋಧನೆಯಲ್ಲಿ ಆಕ್ಷೇಪಿಸಲಾಗಿದ್ದಂತಹ ಹಾಗೂ ಗಣಕಯಂತ್ರಗಳು ಮತ್ತು ಅದರ ಭಾಗಗಳು ಕಾರ್ಯನಿರ್ವಹಿಸುತ್ತಿರದ ಶಾಲೆಗಳನ್ನು ಕಿಯಾನಿಕ್ಸ್ ಪರೀಕ್ಷಣೆ ಮಾಡಿರುವುದು ಹಾಗೂ ಅವುಗಳನ್ನು ಸರಿಪಡಿಸಿರುವುದು, ಅಲ್ಲದೆಯೇ ಶಿಕ್ಷಕರುಗಳಿಗೆ ತರಬೇತಿ ನೀಡಿರುವುದು ಎಂಬುದಾಗಿ ಸರ್ಕಾರವು ಉತ್ತರಿಸಿತು (ಆಗಸ್ಟ್ 2024). ಡಿಎಂಎಫ್ ಹಣಕಾಸಿನಿಂದ ಸೃಷ್ಟಿಸಲಾಗಿರುವ ಆಸ್ತಿಗಳನ್ನು ಉಪಯೋಗಿಸುತ್ತಿರುವ ಬಗ್ಗೆ ಮೇಲ್ವಿಚಾರಣೆ ಮಾಡುವ ಸಲುವಾಗಿ ಒಂದು ವ್ಯವಸ್ಥೆಯನ್ನು ಇಲಾಖೆಯು ರೂಪಿಸಿರಲಿಲ್ಲವಾದ್ದರಿಂದ ಹಾಗೂ ಲೆಕ್ಕಪರಿಶೋಧನೆಯ ಆಕ್ಷೇಪಣೆಯ ನಂತರವಷ್ಟೇ ಕ್ರಮವನ್ನು ಕೈಗೊಂಡಿದ್ದಿತಾದ್ದರಿಂದ ಉತ್ತರವು ಒಪ್ಪುವಂತಿರಲಿಲ್ಲ.

5.7.3 ಡಿಎಂಎಫ್‌ಟಿ, ಚಿತ್ರದುರ್ಗ, ಇದರ ವ್ಯವಸ್ಥಾಪನಾ ಸಮಿತಿಯು ಭರಮಸಾಗರ ಹೋಬಳಿ (13 ಶಾಲೆಗಳು) ಮತ್ತು ತಾಳ್ಯ ಹೋಬಳಿಯ (11 ಶಾಲೆಗಳು) ಸರ್ಕಾರಿ ಶಾಲೆಗಳಿಗೆ ಗಣಕಯಂತ್ರ ಲ್ಯಾಬ್ ಉಪಕರಣಗಳನ್ನು ಪ್ರತಿಯೊಂದಕ್ಕೂ ₹ 1.00 ಕೋಟಿ ಅಂದಾಜು ವೆಚ್ಚದಲ್ಲಿ ಸರಬರಾಜು ಮಾಡುವ ಸಲುವಾಗಿ ತನ್ನ ಅನುಮೋದನೆ ನೀಡಿತು (21 ಜನವರಿ 2022) ಹಾಗೂ ಪ್ರತಿಯೊಂದು ಹೋಬಳಿಗೂ ಮೊದಲ ಕಂತು ₹ 0.50 ಕೋಟಿ ಮೊತ್ತವನ್ನು ಉಪ–ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಚಿತ್ರದುರ್ಗ, ಇವರಿಗೆ ಬಿಡುಗಡೆಗೊಳಿಸಿತು (4 ಮೇ 2022).

ಗಣಕಯಂತ್ರ ಲ್ಯಾಬನ್ನು 5 ಗಣಕಯಂತ್ರಗಳು, ಒಂದು ಯುಪಿಎಸ್ ಬ್ಯಾಟರಿಯೊಂದಿಗೆ, ವಿವಿಧ ಕ್ರಿಯೆಗಳನ್ನು ಮಾಡುವ ಪ್ರಿಂಟರು, ಗಣಕಯಂತ್ರ ಟೇಬಲ್ಲು, ಧ್ವನಿ ವ್ಯವಸ್ಥೆ, ಬಿಳಿ ಹಲಗೆ, ಬೆಂಕಿ ನಂದಿಸುವ ಸಾಧನ, ಎಲ್ಇಡಿ ಪ್ರದರ್ಶಕ ಹಲಗೆ ಮತ್ತು ಗಣಕಯಂತ್ರ ಕುರ್ಚಿಗಳೊಂದಿಗೆ ಎಲ್ಲಾ 24 ಶಾಲೆಗಳಲ್ಲಿ ಸ್ಥಾಪಿಸಬೇಕಿದ್ದಿತು. ಆಗಸ್ಟ್ 2023ರಲ್ಲಿ ಲೆಕ್ಕಪರಿಶೋಧನೆಯ ಈ 24 ಶಾಲೆಗಳ ಪರೀಕ್ಷಣೆ ಜಂಟಿ ಬೌತಿಕ ನಡೆಸಿತು.

19 ಶಾಲೆಗಳಲ್ಲಿ, ಪ್ರಿಂಟರುಗಳು ಕೆಲಸ ಮಾಡುವ ಸ್ಥಿತಿಯಲ್ಲಿ ಇರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಪರೀಕ್ಷಣೆಯ ವೇಳೆಯಲ್ಲಿ ಗಮನಿಸಿತು. ಎಂಟು ಶಾಲೆಗಳಲ್ಲಿ, ಕಿಯಾನಿಕ್ಸ್ ಗಣಕಯಂತ್ರ ಕುರ್ಚಿಗಳನ್ನು ಸರಬರಾಜು ಮಾಡಿಲ್ಲದೇಯಿರುವುದು, ಕಡಿಮೆ ಸಂಖ್ಯೆಯಲ್ಲಿ ವಿದ್ಯಾರ್ಥಿಗಳಿರುವುದು (ಒಂದು ಶಾಲೆಯಲ್ಲಿ ಮೂರು ವಿದ್ಯಾರ್ಥಿಗಳು ಮತ್ತು ಓರ್ವ ಶಿಕ್ಷಕರು), ಗಣಕಯಂತ್ರ ಲ್ಯಾಬಿಗೆ ವಿದ್ಯುತ್ ಸಂಪರ್ಕ ಇಲ್ಲದಿರುವುದು, ಗೋಡೆಗಳಲ್ಲಿ ನೀರು ಸೋರಿರುವುದು, ಇತ್ಯಾದಿ ಕಾರಣಗಳಿಂದಾಗಿ ಗಣಕಯಂತ್ರಗಳನ್ನು ಬಳಕೆ ಮಾಡಿರಲಿಲ್ಲ. ಮೂರು ಶಾಲೆಗಳಲ್ಲಿ, ಗಣಕಯಂತ್ರಗಳನ್ನು ಕಾರ್ಯೋದ್ಯುಕ್ತಗೊಳಿಸಿರಲಿಲ್ಲ. ಒಂದು ಶಾಲೆಯಲ್ಲಿ, ತರಬೇತಿ ಹೊಂದಿರುವ ಶಿಕ್ಷಕರು ಇರದಿದ್ದ ಕಾರಣ ಗಣಕಯಂತ್ರಗಳು ಮತ್ತು ಅದರ ಭಾಗಗಳು ಉಪಯೋಗವಾಗದೆಯೇ ಉಳಿದಿದ್ದವು. ಎರಡು ಶಾಲೆಗಳಲ್ಲಿ ಸರಬರಾಜು ಮಾಡಲಾಗಿದ್ದಂತಹ ಗಣಕಯಂತ್ರಗಳು ಪರೀಕ್ಷಣೆಗೆ ಲಭ್ಯವಿರಲಿಲ್ಲ. ಜಂಟಿ ಭೌತಿಕ ಪರೀಕ್ಷಣೆಯ ವೇಳೆಯಲ್ಲಿ ಶಾಲಾವಾರು ಗಮನಿಸಲಾಗಿರುವ ಅಂಶಗಳನ್ನು ***ಅನುಬಂಧ–6ರಲ್ಲಿ*** ವಿವರಿಸಲಾಗಿರುವುದು.

ಈ ರೀತಿಯಾಗಿ, ಕಾಮಗಾರಿಯು ಪೂರ್ಣಗೊಂಡನಂತರ ಉಪ–ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಚಿತ್ರದುರ್ಗ, ಇವರಿಂದ ಸಮರ್ಪಕವಾದಂತಹ ಮೇಲ್ವಿಚಾರಣೆಯ ಕೊರತೆಯ ಕಾರಣ ಗುರಿಯಾಗಿಸಿಕೊಳ್ಳಲಾಗಿದ್ದಂತಹ ಉದ್ದೇಶಗಳನ್ನು ಈಡೇರಿಸಿಕೊಳ್ಳಲಾಗಿರಲಿಲ್ಲ.

ಶಾಲೆಗಳಿಗೆ ಭೇಟಿ ನೀಡುವ ಮೂಲಕ ಕಾರ್ಯನಿರ್ವಹಿಸುತ್ತಿರದ ಪ್ರಿಂಟರುಗಳು, ಗಣಕಯಂತ್ರಗಳ ಬಗ್ಗೆ ಕ್ರಮಗಳನ್ನು ಕೈಗೊಳ್ಳಲಾಗಿರುವುದು ಹಾಗೂ ವಿದ್ಯುತ್ ಸಂಪರ್ಕ ಕಲ್ಪಿಸುವುದರೊಂದಿಗೆ ಶಿಕ್ಷಕರುಗಳಿಗೆ ತರಬೇತಿಯನ್ನು ನೀಡಲಾಗಿರುವುದು ಎಂಬುದಾಗಿ ಕಿಯಾನಿಕ್ಸ್ ನೀಡಿರುವ ಉತ್ತರವನ್ನು ಉಪ–ನಿರ್ದೇಶಕರು ಮತ್ತು ಸಂಚಾಲಕರು, ಡಿಎಂಎಫ್‌ಟಿ, ಚಿತ್ರದುರ್ಗ, ಇವರು ಒಪ್ಪಿಕೊಂಡು ಕಳುಹಿಸಿಕೊಟ್ಟಿರುವರು (ಡಿಸೆಂಬರ್ 2023). ಆದಾಗ್ಯೂ, ಲೆಕ್ಕಪರಿಶೋಧನೆಯು ಮೇಲಿನ ಅಂಶಗಳನ್ನು ತೋರಿಸಿದ ನಂತರವಷ್ಟೇ ಕಿಯಾನಿಕ್ಸ್ ಲೋಪದೋಷಗಳನ್ನು ಸರಿಪಡಿಸಿರುವುದು ಎಂಬ ವಾಸ್ತವಾಂಶವು ಉಳಿದುಕೊಳ್ಳುವುದು.

5.7.4 ಜೂನ್ 2021ರಲ್ಲಿ, ಬೆಂಗಳೂರು ನಗರ ಜಿಲ್ಲೆಯಲ್ಲಿ 20 ಸರ್ಕಾರಿ ಶಾಲೆಗಳಿಗೆ ಸ್ಮಾರ್ಟ್ ತರಗತಿ ಉಪಕರಣವನ್ನು[36] ಸ್ಥಾಪಿಸುವ ಕಾಮಗಾರಿಯನ್ನು (ಸ್ಮಾರ್ಟ್ ತರಗತಿಗಳನ್ನು ನಡೆಸುವ ಸಲುವಾಗಿ ತರಬೇತಿ ನೀಡುವುದರೊಂದಿಗೆ) ಕಿಯಾನಿಕ್ಸ್‌ಗೆ ₹ 0.30 ಕೋಟಿ ವೆಚ್ಚದಲ್ಲಿ ವಹಿಸಲಾಗಿದ್ದಿತು. ಈ 10 ಶಾಲೆಗಳನ್ನು ಜಂಟಿ ಭೌತಿಕ ಪರಿಶೀಲನೆ ಮಾಡಲಾಗಿ, ಒಂದು ಶಾಲೆಯಲ್ಲಿ ಪ್ರೊಜೆಕ್ಟರು ಕಾಣೆಯಾಗಿದ್ದಿತು ಹಾಗೂ ಒಂಬತ್ತು ಶಾಲೆಗಳಲ್ಲಿ ***ಅನುಬಂಧ–7ರಲ್ಲಿ*** ನೀಡಲಾಗಿರುವ ಕಾರಣಗಳಿಂದ ಪ್ರೊಜೆಕ್ಟರುಗಳನ್ನು ಉಪಯೋಗಿಸುತ್ತಿರುವುದಿಲ್ಲ ಎಂಬುದನ್ನು ತೋರಿಸಿಕೊಟ್ಟಿತು.

ಈ ರೀತಿಯಾಗಿ, ಇದು ಸ್ಮಾರ್ಟ್ ತರಗತಿಗಳ ಕಡೆಗೆ ಭರಿಸಲಾಗಿದ್ದಂತಹ ₹ 0.15 ಕೋಟಿ ವೆಚ್ಚವನ್ನು ನಿಷ್ಫಲಗೊಳಿಸಿದ್ದಿತು, ಅಲ್ಲದೆಯೇ ಗುರಿಯಾಗಿಸಿಕೊಳ್ಳಲಾಗಿದ್ದಂತಹ ಉದ್ದೇಶಗಳು ಈಡೇರಿರಲಿಲ್ಲ.

5.7.5 ಗಣಕಯಂತ್ರಗಳು ಬಳಕೆಯಾಗುತ್ತಿರುವುದನ್ನು ಮೇಲ್ವಿಚಾರಣೆ ಮಾಡದಿದ್ದ ಕಾರಣ ನಿಷ್ಫಲ ವೆಚ್ಚ

ಡಿಎಂಎಫ್‌ಟಿ, ಬಳ್ಳಾರಿ, ಇವರು ಜಿಲ್ಲೆಯಲ್ಲಿನ ವಿದ್ಯಾರ್ಥಿನಿಲಯಗಳಿಗೆ ಗಣಕಯಂತ್ರಗಳು, ಯುಪಿಎಸ್, ಇತ್ಯಾದಿಗಳನ್ನು ಒದಗಿಸುವ ಪ್ರಸ್ತಾವನೆ ಮಾಡಿದರು. ಅದರಂತೆಯೇ, ಆರು ಕಾಮಗಾರಿಗಳನ್ನು ಸಮಾಜ ಕಲ್ಯಾಣ ಇಲಾಖೆಯ (ಡಿಎಸ್‌ಡಬ್ಲ್ಯು) ಮೂಲಕ ₹ 1.50 ಕೋಟಿ ಆಯವ್ಯಯದಲ್ಲಿ ಕಾರ್ಯಗತಗೊಳಿಸಲು ಅನುಮೋದನೆ ನೀಡಲಾಗಿದ್ದಿತು. ಈ ಕೆಳಗಿನ ಸರಬರಾಜುದಾರರುಗಳಿಂದ ಖರೀದಿಸುವ ಸಲುವಾಗಿ ಆದೇಶಿಸಲಾಗಿದ್ದ ಸರಕುಗಳು ದಾಖಲೆಗಳಿಂದ ಕಂಡು ಬಂದಂತೆ ಈ ಕೆಳಗೆ ನೀಡಲಾಗಿರುವುದು:

ಕೋಷ್ಟಕ ಸಂಖ್ಯೆ 5.5: ಸರಬರಾಜು ಆದೇಶವನ್ನು ನೀಡಲಾಗಿದ್ದಂತಹ ಸರಕುಗಳ ವಿವರಗಳನ್ನು ತೋರಿಸುವ ತಃಖ್ತೆ

ಕ್ರಮ ಸಂಖ್ಯೆ	ಸರಕು	ಸರಬರಾಜುದಾರರು (ಕಂಪನಿಗಳು)	ಘಟಕ ಒಂದಕ್ಕೆ ಒಪ್ಪಿಕೊಳ್ಳಲಾಗಿದ್ದ ದರ	ವಿದ್ಯಾರ್ಥಿ ನಿಲಯಗಳ ಸಂಖ್ಯೆ	ಪ್ರಸ್ತಾಪಿಸಲಾಗಿದ್ದ ಘಟಕಗಳ ಸಂಖ್ಯೆ
1	5 ಕೆವಿಎ–ಯುಪಿಎಸ್	ಪವರೆಡ್ಜ್ ಎನರ್ಜೀ ಪ್ರೈವೇಟ್ ಲಿಮಿಟೆಡ್	₹ 1,06,600	49	49
2	ಗಣಕಯಂತ್ರ	ಕಾಮಧೇನು ಅಂಡ್ ಕಂಪನಿ	₹ 42,996	10	90

ಮೂಲ : ಲೆಕ್ಕಪರಿಶೋಧನೆಯು ಮಾಹಿತಿಯನ್ನು ಸಂಕಲಿಸಿರುವುದು.

ಪ್ರಗತಿಯ ವರದಿಯ ಅನುಸಾರ, ಕಾಮಗಾರಿಯು ಪೂರ್ಣಗೊಂಡಿರುವುದಾಗಿ ತಿಳಿಸಲಾಗಿದ್ದಿತು ಹಾಗೂ ತದನಂತರದಲ್ಲಿ ಡಿಎಂಎಫ್‌ಟಿ, ಬಳ್ಳಾರಿ, ಇದರ ದಾಖಲೆಗಳ ಅನುಸಾರ ವಿದ್ಯಾರ್ಥಿನಿಲಯದ ವಾರ್ಡನ್ನುಗಳು ಸರಕುಗಳ ಸ್ವೀಕೃತಿ ಪತ್ರಗಳನ್ನು ನೀಡಿದ್ದರು. ಮುಂದುವರೆದು, ವಿದ್ಯಾರ್ಥಿನಿಲಯಗಳಿಗೆ ಸರಕುಗಳನ್ನು ಸರಬರಾಜು ಮಾಡಿದ್ದಕ್ಕಾಗಿ ಮೂರನೇ ತಂಡದ ಪರೀಕ್ಷಣಾ ವರದಿಗಳನ್ನು ಸಹ ಪಡೆದುಕೊಳ್ಳಲಾಗಿದ್ದಿತು ಹಾಗೂ ದಾಖಲೆಗಳಲ್ಲಿ ಇಡಲಾಗಿದ್ದಿತು. ಡಿಎಂಎಫ್‌ಟಿ, ಬಳ್ಳಾರಿ, ಇವರು ಸರಬರಾಜುದಾರರುಗಳಿಗೆ ಪಾವತಿಸುವ ಸಲುವಾಗಿ ₹ 0.44 ಕೋಟಿ ಮೊತ್ತವನ್ನು ಸಮಾಜ ಕಲ್ಯಾಣ ಇಲಾಖೆಗೆ ಬಿಡುಗಡೆಗೊಳಿಸಿದರು.

ಲೆಕ್ಕಪರಿಶೋಧನೆಯು ಡಿಸೆಂಬರ್ 2024ರಲ್ಲಿ ಗಣಿಗಳು ಮತ್ತು ಭೂವಿಜ್ಞಾನ ಇಲಾಖೆಯ ಹಾಗೂ ಡಿಎಂಎಫ್‌ಟಿ, ವಿಜಯನಗರ[37] ಇವರ ಸಿಬ್ಬಂದಿಯೊಂದಿಗೆ ಆರು ವಿದ್ಯಾರ್ಥಿನಿಲಯಗಳ ಜಂಟಿ ಭೌತಿಕ ಪರೀಕ್ಷಣೆಯನ್ನು ನಡೆಸಿತು. ವಿದ್ಯಾರ್ಥಿನಿಲಯಗಳ ಪರೀಕ್ಷಾ–ಪರಿಶೀಲನೆಯ ವೇಳೆಯಲ್ಲಿ, ಈ ಕೆಳಗೆ ವಿವರಿಸಿರುವಂತೆ, ಸರಬರಾಜು ಮಾಡಲಾಗಿದ್ದಂತಹ ಸರಕುಗಳು ಪ್ಯಾಕು ಮಾಡಿದ ಸ್ಥಿತಿಯಲ್ಲಿಯೇ ಇದ್ದವು, ಅಥವಾ ರಿಪೇರಿ ಮಾಡಿಸುವ ಸ್ಥಿತಿಯಲ್ಲಿ ಇದ್ದವು ಅಥವಾ ಸರಕುಗಳನ್ನು ಬಳಕೆ ಮಾಡಿರಲಿಲ್ಲ ಎಂಬುದನ್ನು ಗಮನಿಸಲಾಯಿತು:

[36] ಎಲ್ಲಾ ಅನುಕೂಲತೆಯೂ ಒಂದರಲ್ಲಿಯೇ ಇರುವಂತಹ ಆಂಡ್ರಾಯ್ಡ್ ಪ್ರೊಜೆಕ್ಟರು ತಂತ್ರಾಂಶ ಅನ್ವಯ, ಬಿಳಿ ಹಲಗೆ, ಕೀ ಬೋರ್ಡು, ಪ್ರೊಜೆಕ್ಟರಿಗೆ ಟ್ರಾಲಿ, 1 ಕೆವಿಎ ಯುಪಿಎಸ್, ಸ್ಥಾಪಿಸುವುದು ಮತ್ತು ಕಾರ್ಯಕ್ರಮ ವಿನ್ಯಾಸಗೊಳಿಸುವಿಕೆ ಇವುಗಳೊಂದಿಗೆ.

[37] ಅವಿಭಾಜಿತ ಬಳ್ಳಾರಿ ಜಿಲ್ಲೆಯಲ್ಲಿ ಬರುವುದು.

ಕೋಷ್ಟಕ ಸಂಖ್ಯೆ 5.6: ವಿದ್ಯಾರ್ಥಿನಿಲಯಗಳು ಉಪಯೋಗಕ್ಕೆ ಬಿಟ್ಟಿರದ ಸರಕುಗಳ ವಿವರಗಳನ್ನು ತೋರಿಸುವ ತ:ಖ್ತೆ

ಕ್ರಮ ಸಂಖ್ಯೆ	ವಿದ್ಯಾರ್ಥಿ ನಿಲಯ	ಸರಕುಗಳು	ಸರಬರಾಜು ಮಾಡಲಾಗಿದ್ದ ಘಟಕಗಳ ಸಂಖ್ಯೆ	ಎಷ್ಟು ಘಟಕಗಳಲ್ಲಿ ಉಪಯೋಗಿಸಿರಲಿಲ್ಲ	ಘಟಕ ಒಂದರ ದರ	ಒಳಗೊಂಡಿದ್ದ ಮೊತ್ತ
1	ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯ, ಎಂಜೆ ನಗರ, ಹೊಸಪೇಟೆ	ಗಣಕಯಂತ್ರ	3	3	₹ 42,996	₹ 1,28,988
		ಯುಪಿಎಸ್	1	1	₹ 1,06,600	₹ 1,06,600
2	ಮೆಟ್ರಿಕ್ ನಂತರದ ವಿದ್ಯಾರ್ಥಿನಿಯರ ನಿಲಯ ಸಂಕಲಪುರ, ಹೊಸಪೇಟೆ	ಗಣಕಯಂತ್ರ	10	7	₹ 42,996	₹ 3,00,972
3	ಮೆಟ್ರಿಕ್ ನಂತರದ ವಿದ್ಯಾರ್ಥಿನಿಯರ ನಿಲಯ, ಹೊಸಪೇಟೆ (ಅಲ್ಪಸಂಖ್ಯಾತರು)	ಗಣಕಯಂತ್ರ	10	7	₹ 42,996	₹ 3,00,972
4	ಮೆಟ್ರಿಕ್ ನಂತರದ ಪಿಜಿ ವಿದ್ಯಾರ್ಥಿನಿಯರ ನಿಲಯ, ಹಂಪಿ	ಗಣಕಯಂತ್ರ	10	8	₹ 42,996	₹ 3,43,968
5	ಮೆಟ್ರಿಕ್ ನಂತರದ ವಿದ್ಯಾರ್ಥಿನಿಯರ ನಿಲಯ, ಹೊಸಪೇಟೆ (ಅಲ್ಪಸಂಖ್ಯಾತರು)	ಗಣಕಯಂತ್ರ	3	3	₹ 42,996	₹ 1,28,988
		ಯುಪಿಎಸ್	1	1	₹ 1,06,600	₹ 1,06,600
6	ಮೆಟ್ರಿಕ್ ನಂತರದ ಪಿಜಿ ವಿದ್ಯಾರ್ಥಿ ನಿಲಯ, ಹಂಪಿ	ಗಣಕಯಂತ್ರ	3	3	₹ 42,996	₹ 1,28,988
		ಯುಪಿಎಸ್	1	1	₹ 1,06,600	₹ 1,06,600
	ಒಟ್ಟು (1ರಿಂದ 6)					**₹ 16,52,676**

ಮೂಲ: ಲೆಕ್ಕಪರಿಶೋಧನೆಯು ಮಾಹಿತಿಯನ್ನು ಸಂಕಲಿಸಿರುವುದು.

ಆದ್ದರಿಂದ ಡಿಎಂಎಫ್‌ಟಿ, ಬಳ್ಳಾರಿ, ಇವರು ಸರಬರಾಜು ಮಾಡಿದ ಸರಕುಗಳನ್ನು ಉಪಯೋಗಿಸಿಕೊಂಡಿರುವುದನ್ನು ಮೇಲ್ವಿಚಾರಣೆ ಮಾಡದಿದ್ದುದು ₹ 16.53 ಲಕ್ಷ ಮೊತ್ತದಷ್ಟು ನಿಷ್ಫಲ ವೆಚ್ಚವಾಗುವಲ್ಲಿ ಪರಿಣಮಿಸಿರುವುದು.



ಛಾಯಾಚಿತ್ರ ಸಂಖ್ಯೆ 5.8 ಮತ್ತು 5.9: ಸ್ವೀಕರಿಸಲಾಗಿರುವ ಗಣಕಯಂತ್ರಗಳು (ಏಪ್ರಿಲ್ 2018) ಹಾಗೂ ವಿದ್ಯಾರ್ಥಿನಿಲಯದ ನಿವಾಸಿಗಳು ಉಪಯೋಗಿಸುತ್ತಿರುವುದಾಗಿ ಘೋಷಿಸಲಾಗಿರುವಂತಹ ಗಣಕಯಂತ್ರಗಳು.

5.8 ಮಹಿಳಾ ಮತ್ತು ಮಕ್ಕಳ ಕಲ್ಯಾಣ

ಪಿಎಂಕೆಕೆಕೆವೈ ಅಡಿಯಲ್ಲಿ ಆಯ್ಕೆ ಮಾಡಿಕೊಳ್ಳಲಾದಂತಹ ಐದು ಜಿಲ್ಲೆಗಳಲ್ಲಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಶೀರ್ಷಿಕೆಯಡಿಯಲ್ಲಿ ಕಾರ್ಯಗತಗೊಳಿಸಲಾದ ₹ 152.86 ಕೋಟಿ ಮೊತ್ತದ 22 ಕಾಮಗಾರಿಗಳನ್ನು ಲೆಕ್ಕಪರಿಶೋಧನೆಯು ಜಂಟಿ ಭೌತಿಕ ಪರೀಕ್ಷಣೆಯನ್ನು ನಡೆಸಿತು.

5.8.1 ಅನುತ್ಪಾದಕ ವೆಚ್ಚ

ಚಿತ್ರದುರ್ಗ ಜಿಲ್ಲೆಯ 4 ತಾಲ್ಲೂಕುಗಳಲ್ಲಿನ[38] 14 ಅಂಗನವಾಡಿ ಕೇಂದ್ರಗಳನ್ನು ಲೆಕ್ಕಪರಿಶೋಧನೆಯು ಪರೀಕ್ಷಿಸಿತು ಅಲ್ಲಿ ₹ 29.73 ಲಕ್ಷ ಅಂದಾಜು ವೆಚ್ಚದಲ್ಲಿ ಮೋಟಾರು, ನೀರು ಸರಬರಾಜು ವ್ಯವಸ್ಥೆಗಳು ಹಾಗೂ ಶೌಚಾಲಯಗಳ ನಿರ್ಮಾಣ/ರಿಪೇರಿಗಳು, ಅಂಗನವಾಡಿ ಕೇಂದ್ರಗಳಿಗೆ ಕೊಳವೆ ಮಾರ್ಗಗಳನ್ನು ಒದಗಿಸುವುದು ಇತ್ಯಾದಿ ಹಾಗೂ ಎರಡು ಹೊಸ ನಿರ್ಮಾಣಗಳನ್ನು ಕೈಗೆತ್ತಿಕೊಳ್ಳಲಾಯಿತು.



ಛಾಯಾಚಿತ್ರ ಸಂಖ್ಯೆ 5.10: ಚಿತ್ರದುರ್ಗ ಜಿಲ್ಲೆ ಹೊಳಲ್ಕೆರೆ ತಾಲ್ಲೂಕಿನ ಹಿರೇಕಂದವಾಡಿ ಗ್ರಾಮದಲ್ಲಿ ಅಂಗನವಾಡಿ ಕೇಂದ್ರದಲ್ಲಿ ಗಣಕಯಂತ್ರ ಕೇಂದ್ರ ಕಾರ್ಯನಿರ್ವಹಿಸುತ್ತಿರುವುದು.

ಏಳು ಕೇಂದ್ರಗಳಲ್ಲಿ ಮೋಟಾರುಗಳು ಕಾರ್ಯನಿರ್ವಹಿಸುತ್ತಿರಲಿಲ್ಲ ಹಾಗೂ ಹೊಸದಾಗಿ ನಿರ್ಮಿಸಲಾಗಿದ್ದ ಎರಡು ಅಂಗನವಾಡಿ ಕೇಂದ್ರಗಳನ್ನು[39] ಅನ್ಯ ಉದ್ದೇಶಗಳಿಗಾಗಿ (ಖಾಸಗಿ ಗಣಕಯಂತ್ರ

[38] ಹೊಸಪೇಟೆ, ಕೂಡಲಗಿ, ಹೊಸದುರ್ಗ, ಹೊಳಲ್ಕೆರೆ ತಾಲ್ಲೂಕುಗಳು.

[39] ಚಿತ್ರದುರ್ಗ ಜಿಲ್ಲೆಯಲ್ಲಿ ಹಿರೇಕಂದವಾಡಿ ಗ್ರಾಮ, ಹೊಳಲ್ಕೆರೆ ತಾಲ್ಲೂಕು ಮತ್ತು ಅತ್ತಿಗಟ್ಟ ಗ್ರಾಮ, ಹೊಸದುರ್ಗ ತಾಲ್ಲೂಕು.

ತರಬೇತಿ ಕೇಂದ್ರ ನಡೆಸುವ ಸಲುವಾಗಿ ಹಾಗೂ ಪಂಚಾಯತ್ ಸಭೆಗಳನ್ನು ನಡೆಸುವ ಸಲುವಾಗಿ) ಉಪಯೋಗಿಸಲಾಗಿದ್ದಿತು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು

ಚಿತ್ರದುರ್ಗ ಜಿಲ್ಲೆ ಹೊಳಲ್ಕೆರೆ ತಾಲ್ಲೂಕಿನ ಹಿರೇಕಂದವಾಡಿ ಗ್ರಾಮದಲ್ಲಿ ಅಂಗನವಾಡಿ ಕೇಂದ್ರದಲ್ಲಿ ಗಣಕಯಂತ್ರ ಕೇಂದ್ರ ಕಾರ್ಯನಿರ್ವಹಿಸುತ್ತಿರುವುದನ್ನು ತೆರವುಗೊಳಿಸಲಾಗಿರುವುದು ಹಾಗೂ ಅಂಗನವಾಡಿ ಕೇಂದ್ರವು ಹೊಸ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿರುವುದು ಎಂಬುದಾಗಿ ಸರ್ಕಾರವು ಉತ್ತರಿಸಿತು (ಆಗಸ್ಟ್ 2024). ಲೆಕ್ಕಪರಿಶೋಧನೆಯು ಈ ನಿಟ್ಟಿನಲ್ಲಿ ಸ್ಪಷ್ಟಪಡಿಸಿದನಂತರ ಈ ಕ್ರಮವನ್ನು ಕೈಗೊಳ್ಳಲಾಗಿರುವುದು. ಆದಾಗ್ಯೂ, ಉತ್ತರವು ಮತ್ತೊಂದು ಅಂಗನವಾಡಿ ಕೇಂದ್ರದ[40] ಬಗ್ಗೆ ಹಾಗೂ ಗಮನಿಸಿದ ಇತರ ವಿಷಯಗಳ ಬಗ್ಗೆ ಮೌನವಾಗಿದ್ದಿತು.

5.9 ಕೌಶಲ್ಯ ಅಭಿವೃದ್ಧಿ

ಲೆಕ್ಕಪರಿಶೋಧನೆಯು ಆಯ್ಕೆ ಮಾಡಲಾಗಿದ್ದಂತಹ ಐದು ಜಿಲ್ಲೆಗಳಲ್ಲಿ ಕೌಶಲ್ಯ ಅಭಿವೃದ್ಧಿ ಶೀರ್ಷಿಕೆ ಅಡಿಯಲ್ಲಿ ₹ 9.50 ಕೋಟಿ ಮೊತ್ತದಲ್ಲಿ ಕಾರ್ಯಗತಗೊಳಿಸಲಾಗಿದ್ದಂತಹ ಐದು ಕಾಮಗಾರಿಗಳನ್ನು ಜಂಟಿ ಭೌತಿಕ ಪರೀಕ್ಷಣೆಯನ್ನು ನಡೆಸಿತು.

5.9.1 ಕಾಮಗಾರಿಯನ್ನು ಪೂರ್ಣಗೊಳಿಸುವಲ್ಲಿನ ವಿಳಂಬ

ಬಳ್ಳಾರಿ ಜಿಲ್ಲೆಯ ಸಂಡೂರು ತಾಲ್ಲೂಕಿನ ಕುರೆಕುಪ್ಪ ಗ್ರಾಮದಲ್ಲಿ ಬಳ್ಳಾರಿ ಕುರಿ ತಳಿ ಸಾಕಾಣಿಕೆ ಮತ್ತು ತರಬೇತಿ ಕೇಂದ್ರದ ಜೊತೆಗೆ ಅತಿಥಿ ಗೃಹವನ್ನು ₹ 2.00 ಕೋಟಿ ವೆಚ್ಚದಲ್ಲಿ ನಿರ್ಮಿಸುವ ಕಾಮಗಾರಿಗೆ ರಾಜ್ಯ ಸರ್ಕಾರವು ಆಡಳಿತಾತ್ಮಕ ಅನುಮೋದನೆ ನೀಡಿದ್ದಿತು (ಡಿಸೆಂಬರ್ 2017). ಡಿಎಂಎಫ್‌ಟಿ, ಬಳ್ಳಾರಿ, ಇವರು ಕಾಮಗಾರಿಯನ್ನು ಸಹಾಯಕ ನಿರ್ದೇಶಕರು ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮ ನಿಯಮಿತ (ಕೆಎಸ್&ಡಬ್ಲ್ಯುಡಿಸಿಎಲ್)[41] ಹೊಸಪೇಟೆ, ಇವರಿಗೆ ನೀಡಿದರು (ಮಾರ್ಚ್ 2018). ಉಪ–ನಿರ್ದೇಶಕರವರು, ಕುರಿ ಮತ್ತು ತಳಿ ಸಾಕಾಣಿಕೆ ಕೇಂದ್ರ, ಕುರೆಕುಪ್ಪ (ಎಎಚ್&ವಿಎಸ್), ಇವರು ನಿವೇಶನವನ್ನು ವಹಿಸಿಕೊಟ್ಟ ದಿನಂಕದಿಂದ/ಹಣಕಾಸನ್ನು ಬಿಡುಗಡೆಗೊಳಿಸಿದ ದಿನಾಂಕದಿಂದ/ಆಡಳಿತಾತ್ಮಕ ಅನುಮೋದನೆ ನೀಡಿದ ದಿನಾಂಕದಿಂದ, ಇವುಗಳಲ್ಲಿ ಯಾವುದು, ಇತ್ತೀಚಿನದೋ ಅಂತಹ ದಿನಾಂಕದಿಂದ ಮಳೆಗಾಲವನ್ನು ಹೊರತುಪಡಿಸಿದಂತೆ 12 ತಿಂಗಳುಗಳ ಒಳಗೆ ಕಾಮಗಾರಿಯನ್ನು ಪೂರ್ಣಗೊಳಿಸತಕ್ಕದ್ದು ಎಂಬ ಷರತ್ತಿನೊಂದಿಗೆ ಕಾರ್ಯನಿರ್ವಾಹಕ ಇಂಜಿನಿಯರ್, ಕರ್ನಾಟಕ ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ ನಿಯಮಿತ (ಕೆಆರ್‌ಐಡಿಎಲ್)[42], ಇವರೊಂದಿಗೆ ಒಂದು ಒಡಂಬಡಿಕೆಯನ್ನು ಮಾಡಿಕೊಂಡರು (ಮಾರ್ಚ್ 2018).

ಈ ನಿಟ್ಟಿನಲ್ಲಿ ಲೆಕ್ಕಪರಿಶೋಧನೆಯು ಈ ಕೆಳಗಿನ ಅಂಶಗಳನ್ನು ಗಮನಿಸಿತು:

- ಕಾಮಗಾರಿಯನ್ನು ಸ್ಪರ್ಧಾತ್ಮಕ ಟೆಂಡರುಗಳನ್ನು ಆಹ್ವಾನಿಸದೆಯೇ ಕೆಆರ್‌ಐಡಿಎಲ್‌ಗೆ ನೀಡಲಾಯಿತು. ಮಾರ್ಚ್ 2018ರಲ್ಲಿ ಕೆಆರ್‌ಐಡಿಎಲ್‌ಗೆ ನೀಡಲಾದಂತಹ ಕಾಮಗಾರಿಯು ಅದಕ್ಕೆ ವಹಿಸಿಕೊಟ್ಟಂತಹ ದಿನಾಂಕದಿಂದ 7 ವರ್ಷಗಳು ಕಳೆದನಂತರವೂ ಇನ್ನೂ ಪೂರ್ಣಗೊಂಡಿರಲಿಲ್ಲ. ಕಾಮಗಾರಿಯನ್ನು ಡಿಎಂಎಫ್‌ಟಿ/ಸಹಾಯಕ ನಿರ್ದೇಶಕರು, ಕೆಎಸ್&ಡಬ್ಲ್ಯುಡಿಸಿಎಲ್, ಹೊಸಪೇಟೆ ಇವರುಗಳು ಮೇಲ್ವಿಚಾರಣೆ ಮಾಡಿರಲಿಲ್ಲ.

- ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್, ಕೆಆರ್‌ಐಡಿಎಲ್, ಇವರೊಂದಿಗೆ ಜಂಟಿ ಭೌತಿಕ ಪರೀಕ್ಷಣೆಯನ್ನು ಮಾಡುವ ವೇಳೆಯಲ್ಲಿ, ಪ್ರಸ್ತಾಪಿತ ನಿರ್ಮಾಣವು ಮುಖ್ಯ ರಸ್ತೆಯಿಂದ ಎರಡು ಕಿಲೋ ಮೀಟರುಗಳ ದೂರದ ಪ್ರದೇಶದ ಒಳಗೆ ಇದ್ದು ಅದರ

[40] ಪಂಚಾಯತ್ ಸಭೆಗಳನ್ನು ನಡೆಸಲಾಗಿದ್ದಂತಹ ಚಿತ್ರದುರ್ಗ ಜಿಲ್ಲೆಯ ಹೊಸದುರ್ಗ ತಾಲೂಕಿನ ಅತ್ತಿಗಟ್ಟಾ ಗ್ರಾಮದಲ್ಲಿ.

[41] ರಾಜ್ಯ ಸರ್ಕಾರದ ಒಂದು ಸಾರ್ವಜನಿಕ ವಲಯ ಉದ್ದಿಮೆ.

[42] ಕರ್ನಾಟಕ ಸರ್ಕಾರದ ಒಂದು ಸಾರ್ವಜನಿಕ ವಲಯ ಉದ್ದಿಮೆಯಾಗಿದ್ದು, ಸಾರ್ವಜನಿಕ ಖರೀದಿಗಳು ಮತ್ತು ಸೇವೆಗಳನ್ನು ಪಡೆದುಕೊಳ್ಳುವಲ್ಲಿ ಪಾರದರ್ಶಕತೆ ಅಧಿನಿಯಮ, 1999ರ ಪರಿಚ್ಛೇದ 4(ಜಿ) ಅಡಿಯಲ್ಲಿ ವಿನಾಯಿತಿ ಹೊಂದಿರುವುದು.

ಸಂಪರ್ಕ ರಸ್ತೆಯು ನಿಕೃಷ್ಟಮಟ್ಟದಲ್ಲಿ ಇದ್ದಿತು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಮುಂದುವರೆದು, ಸಮೀಪದಲ್ಲಿ ವಿದ್ಯುತ್ ಸಂಪರ್ಕ ಇರಲಿಲ್ಲ.

- ಸಂಪರ್ಕ ರಸ್ತೆ, ವಿದ್ಯುತ್ ಸರಬರಾಜು ಮತ್ತು ನೀರು ಸರಬರಾಜು ಮುಂತಾದವುಗಳಂತಹ ಮೂಲ ಸೌಕರ್ಯಗಳನ್ನು ಒದಗಿಸುವ ಸಲುವಾಗಿ ಗಣಿಗಾರಿಕೆಯಿಂದ ಪ್ರಭಾವಿತ ವಲಯಕ್ಕಾಗಿ ಸಮಗ್ರ ಪರಿಸರೀಯ ಯೋಜನೆ (ಸಿಇಪಿಎಂಐಝಡ್)[43] ಅಡಿಯಲ್ಲಿ ₹ 2.00 ಕೋಟಿ ಅನುದಾನಕ್ಕಾಗಿ ಒಂದು ಪ್ರಸ್ತಾವನೆಯು ಪಶು ವೈದ್ಯರು, ಬಳ್ಳಾರಿ ಕುರಿ ತಳಿ ಸಾಕಾಣಿಕೆ ಕೇಂದ್ರ, ಇವರಿಂದ ತಯಾರಿಕೆಯ ಪ್ರಕ್ರಿಯೆಯ ಅಡಿಯಲ್ಲಿದ್ದಿತು. ಸಿಇಪಿಎಂಐಝಡ್ ಅಡಿಯಲ್ಲಿ ಹೆಚ್ಚುವರಿ ಅನುದಾನಕ್ಕಾಗಿ ಸಲ್ಲಿಸಲಾದ ಪ್ರಸ್ತಾವನೆಗೆ ಅನುಮೋದನೆಯನ್ನು ನೀಡಿರಲಿಲ್ಲ.

ಸಂಪರ್ಕ ರಸ್ತೆ, ವಿದ್ಯುತ್ ಸರಬರಾಜು ಮತ್ತು ನೀರು ಸರಬರಾಜು ಮುಂತಾದ ಮೂಲ ಸೌಕರ್ಯಗಳಿಗೆ ಪೂರ್ವಭಾವಿಯಾಗಿ ಯೋಜಿಸದೆಯೇ ತರಬೇತಿ ಕೇಂದ್ರ ಮತ್ತು ಅತಿಥಿ ಗೃಹದ ನಿರ್ಮಾಣವನ್ನು ಕೈಗೆತ್ತಿಕೊಳ್ಳಲಾಗಿದ್ದಿತು ಎಂಬುದು ಸುಸ್ಪಷ್ಟವಾಗಿದ್ದಿತು. ಈ ರೀತಿಯಾಗಿ ನಿವೇಶನದ ಹಾಗೂ ಕಾರ್ಯಗತಗೊಳಿಸುವ ಸಂಸ್ಥೆಯನ್ನು ಅಸಮರ್ಪಕವಾದಂತಹ ರೀತಿಯಲ್ಲಿ ಆಯ್ಕೆ ಮಾಡಿದ್ದುದು ₹ 1.50 ಕೋಟಿ ಮೊತ್ತದಷ್ಟು ನಿಷ್ಫಲ ವೆಚ್ಚವಾಗುವಲ್ಲಿ ಪರಿಣಮಿಸಿದ್ದಿತು.

ಕಾಮಗಾರಿಯನ್ನು ಸೆಪ್ಟಂಬರ್ 2024ರ ವೇಳೆಗೆ ಪೂರ್ಣಗೊಳಿಸುವ ಸಲುವಾಗಿ ಕ್ರಮವನ್ನು ಕೈಗೊಳ್ಳಲಾಗಿರುವುದು ಹಾಗೂ ಮೇಲೆ ತಿಳಿಸಲಾಗಿರುವ ನಿವೇಶನವು ರಸ್ತೆಯಿಂದ ದೂರದಲ್ಲಿ ಒಳಭಾಗದಲ್ಲಿ ಲಭ್ಯವಿದ್ದಂತಹ ಭೂಮಿಯ ಒಂದು ತುಂಡು ಭೂಮಿಯಾಗಿರುವುದು (ಉಳಿಕೆ ಭೂಮಿಯು ಪಶು ಸಂಗೋಪನಾ ಇಲಾಖೆಯಿಂದ ಅನ್ಯ ಉದ್ದೇಶಕ್ಕಾಗಿ ಮೀಸಲಿಡಲ್ಪಟ್ಟಿದ್ದಿತು) ಎಂಬುದಾಗಿ ಸರ್ಕಾರವು ಉತ್ತರಿಸಿತು (ಆಗಸ್ಟ್ 2024). ಮುಂದುವರೆದು, ಸಂಪರ್ಕ ರಸ್ತೆ, ವಿದ್ಯುತ್ ಸರಬರಾಜು ಮತ್ತು ನೀರು ಸರಬರಾಜು ಪ್ರಸ್ತಾವನೆಗಳಿಗಾಗಿ ಅನುದಾನ ಕೋರಿಕೆಯನ್ನು ಸ್ವೀಕರಿಸಿದಲ್ಲಿ, ತಮ್ಮ ಸ್ವಂತ ಹಣಕಾಸಿನಿಂದ ಕಾಮಗಾರಿಯನ್ನು ಕಾರ್ಯಗತಗೊಳಿಸುವಂತೆ ತಿಳಿಸಲಾಗುವುದು ಎಂಬುದಾಗಿಯೂ ತಿಳಿಸಿದ್ದಿತು. ಕುರಿ ತಳಿ ಸಾಕಣೆ ಕೇಂದ್ರದ ಕಾರ್ಯಾಚರಣೆಗಾಗಿ ಅಗತ್ಯವಿರುವ ಮೂಲ ಸೌಕರ್ಯಗಳನ್ನು ಪೂರ್ವಭಾವಿಯಾಗಿ ಯೋಜಿಸುವಲ್ಲಿನ ಕೊರತೆಯನ್ನು ಉತ್ತರವು ಸೂಚಿಸುತ್ತಿದ್ದಿತು. ಮುಂದುವರೆದು, 2019ರಲ್ಲಿಯೇ ಪೂರ್ಣಗೊಳಿಸಬೇಕಿದ್ದಂತಹ ಈ ಕೇಂದ್ರವು ಏಳು ವರ್ಷಗಳು ಕಳೆದನಂತರವೂ ಪೂರ್ಣಗೊಳ್ಳುವುದರಿಂದ ಬಹಳಷ್ಟು ದೂರ ಉಳಿದಿರುವುದು.

ಇತರೆ ಆದ್ಯತೆಯ ಕ್ಷೇತ್ರಗಳು

ಜಂಟಿ ಭೌತಿಕ ಪರೀಕ್ಷಣೆಯನ್ನು ನಡೆಸಲಾದಂತಹ 417 ಕಾಮಗಾರಿಗಳ ಪೈಕಿ 112 ಕಾಮಗಾರಿಗಳು ಯೋಜನೆಯ ಮಾರ್ಗಸೂಚಿಗಳಲ್ಲಿ ಚಿಂತಿಸಲಾಗಿದ್ದಂತೆ 'ಇತರೆ ಆದ್ಯತೆಯ ಕ್ಷೇತ್ರಗಳಿಗೆ' ಸಂಬಂಧಿಸಿದ್ದವು. ಈ ಕ್ಷೇತ್ರಗಳಲ್ಲಿ ಪರೀಕ್ಷಣೆ ಮಾಡಲಾದಂತಹ ಕಾಮಗಾರಿಗಳಿಂದ ಕಂಡುಬಂದಂತಹ ಅಂಶಗಳನ್ನು ಮುಂದಿನ ಕಂಡಿಕೆಗಳಲ್ಲಿ ವಿವರಿಸಲಾಗಿರುವುದು:

5.10 ಭೌತಿಕ ಮೂಲಸೌಕರ್ಯ

ಪಿಎಂಕೆಕೆಕೆವೈ ಅಡಿಯಲ್ಲಿ ಲೆಕ್ಕಪರಿಶೋಧನೆಯು ಆಯ್ಕೆ ಮಾಡಿಕೊಂಡಿದ್ದಂತಹ ಐದು ಜಿಲ್ಲೆಗಳಲ್ಲಿ **'ಭೌತಿಕ ಮೂಲಸೌಕರ್ಯ ಶೀರ್ಷಿಕೆ'** ಅಡಿಯಲ್ಲಿ ₹ 171.93 ಕೋಟಿ ಮೊತ್ತದ 90 ಕಾಮಗಾರಿಗಳನ್ನು ಜಂಟಿ ಭೌತಿಕ ಪರೀಕ್ಷಣೆ ನಡೆಸಿತು ಹಾಗೂ ಈ ಸಂದರ್ಭದಲ್ಲಿ ಗಮನಿಸಲಾದಂತಹ ಅಂಶಗಳನ್ನು ಈ ಕೆಳಗೆ ಚರ್ಚಿಸಲಾಗಿರುವುದು:

[43] ಗಣಿಗಾರಿಕೆಯಿಂದ ಪ್ರಭಾವಿತ ವಲಯಕ್ಕಾಗಿ ಸಮಗ್ರ ಪರಿಸರೀಯ ಯೋಜನೆಯು (ಸಿಇಪಿಎಂಐಝಡ್) ಬಳ್ಳಾರಿ, ಚಿತ್ರದುರ್ಗ ಮತ್ತು ತುಮಕೂರು ಜಿಲ್ಲೆಗಳ ಗಣಿಗಾರಿಕೆಯಿಂದ ತೊಂದರೆಗೆ ಈಡಾಗಿರುವಂತಹ ಪ್ರದೇಶಗಳಲ್ಲಿ ಉತ್ತಮಗೊಳಿಸಬಹುದಾದಂತಹ ಮತ್ತು ಮಿತಗೊಳಿಸಬಹುದಾದ ಕ್ರಮಗಳನ್ನು ಕೈಗೊಳ್ಳುವ ಸಲುವಾಗಿ ತಯಾರಿಸಲಾಗುವಂತಹ ಒಂದು ಯೋಜನೆಯಾಗಿರುತ್ತದೆ.

5.10.1 ನಿಕೃಷ್ಠ ಗುಣಮಟ್ಟದ ಹಾಗೂ ಕಾಮಗಾರಿಯ ಅಪೂರ್ಣ ಅನುಷ್ಠಾನ

ವಿಜಯನಗರ ಜಿಲ್ಲೆಯ ಮೂರು ತಾಲ್ಲೂಕುಗಳಲ್ಲಿ (ಹೊಸಪೇಟೆ, ಹರಪನಹಳ್ಳಿ ಮತ್ತು ಕೂಡ್ಲಿಗಿ) ಪೂರ್ಣಗೊಂಡಿರುವುದಾಗಿ ತಿಳಿಸಲಾಗಿದ್ದಂತಹ ಭೌತಿಕ ಮೂಲಸೌಕರ್ಯಗಳ ಆರು ಕಾಮಗಾರಿಗಳಿಗೆ ಸಂಬಂಧಿಸಿದಂತೆ, ಲೆಕ್ಕಪರಿಶೋಧನೆಯು ಈ ಕೆಳಗಿನ ಅಂಶಗಳನ್ನು ಗಮನಿಸಿತು:

ಛಾಯಾಚಿತ್ರ ಸಂಖ್ಯೆ 5.11: ಹೊಸಪೇಟೆ ತಾಲ್ಲೂಕಿನ ಭಟ್ಟರಹಳ್ಳಿ ಆಂಜನೇಯ ರಸ್ತೆಯಲ್ಲಿ ರಸ್ತೆ ಬದಿಯಲ್ಲಿ ಚರಂಡಿ ಕಾಮಗಾರಿಯನ್ನು ಕಾರ್ಯಗತಗೊಳಿಸದಿರುವುದು.

- ಮೂರು ಕಾಮಗಾರಿಗಳಲ್ಲಿ[44], ಲೋಕೋಪಯೋಗಿ ಇಲಾಖೆ, ಹೊಸಪೇಟೆ ಮತ್ತು ಹರಪನಹಳ್ಳಿ, ಕಾರ್ಯಗತಗೊಳಿಸಿದ ಸಂಸ್ಥೆಗಳು ಅನುಮೋದಿತ ಕಾಮಗಾರಿಗಳ ಭಾಗವಾಗಿದ್ದಂತಹ ₹ 0.36 ಕೋಟಿ ಮೌಲ್ಯದ ರಸ್ತೆ ಬದಿಯಲ್ಲಿನ ಚರಂಡಿಗಳು ಮುಂತಾದ ಕಾಮಗಾರಿಗಳನ್ನು ಕಾರ್ಯಗತಗೊಳಿಸಿರಲಿಲ್ಲ.

- ಹರಪನಹಳ್ಳಿ ತಾಲ್ಲೂಕಿನಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ರಿಪೇರಿಗಳು ಮತ್ತು ನವೀಕರಣ ಕಾಮಗಾರಿಗೆ ಸಂಬಂಧಿಸಿದಂತೆ ನಿರ್ಮಿತಿ ಕೇಂದ್ರದ ಮೂಲಕ ₹ 0.63 ಕೋಟಿ ಮೊತ್ತದಲ್ಲಿ ಕಾರ್ಯಗತಗೊಳಿಸಲಾಗಿದ್ದ ಎರಡು ಕಾಮಗಾರಿಗಳಿಗೆ ಸಂಬಂಧಿಸಿದಂತೆ ಕಟ್ಟಡದಲ್ಲಿ ಬಿರುಕು ಬಿಟ್ಟಿದ್ದಿತು, ಇದು ಗೋಡೆಯಲ್ಲಿ ನೀರು ಸೋರಿಕೆಯಾಗುವಲ್ಲಿ ಪರಿಣಮಿಸಿದ್ದಿತು.

ಛಾಯಾಚಿತ್ರ ಸಂಖ್ಯೆ 5.12: ಹರಪನಹಳ್ಳಿಯ ಅಲಗಿಲವಾಡ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ನಿರ್ಮಿತಿ ಕೇಂದ್ರ ಮೂಲಕ ರಿಪೇರಿ ಮಾಡಲಾಗಿರುವ ಕಟ್ಟಡದಲ್ಲಿ ಬಿರುಕು ಬಿಟ್ಟಿರುವುದು.

ಈ ರೀತಿಯಾಗಿ, ಕಾರ್ಯಗತಗೊಳಿಸುವಿಕೆ ಸಂಸ್ಥೆಗಳು ಕಾಮಗಾರಿಗಳನ್ನು ಅಸಮರ್ಪಕವಾದಂತಹ ರೀತಿಯಲ್ಲಿ ಕಾರ್ಯಗತಗೊಳಿಸಿರುವಿಕೆ ಹಾಗೂ ನಿಕೃಷ್ಠವಾದಂತಹ ಗುಣಮಟ್ಟದಿಂದ ಕೂಡಿದ ಕಾಮಗಾರಿಗಳ ಕಾರಣ ಗುರಿಯಾಗಿಸಿಕೊಳ್ಳಲಾಗಿದ್ದಂತಹ ಪ್ರಯೋಜನಗಳು ಈಡೇರಿರಲಿಲ್ಲ ಹಾಗೂ ಖರ್ಚು ಮಾಡಲಾಗಿದ್ದಂತಹ ₹ 1.00 ಕೋಟಿ ಮೊತ್ತವು ನಿಷ್ಫಲಗೊಂಡಿದ್ದಿತು.

[44] ಶ್ರೀ ಶಂಕರ್ ಆನಂದ್ ಸಿಂಗ್ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹೊಸಪೇಟೆ, ಇಲ್ಲಿ ಕಾಂಪೌಂಡು ಗೋಡೆ ಹಾಗೂ ಬೈಸಿಕಲ್ಲು ನಿಲುಗಡೆ ವ್ಯವಸ್ಥೆಯ ನಿರ್ಮಾಣ (₹ 0.11 ಕೋಟಿ), ಹೊಸಪೇಟೆಯ ಭಟ್ಟರಹಳ್ಳಿ ಆಂಜನೇಯ ರಸ್ತೆಯ ಅಭಿವೃದ್ಧಿ (₹ 0.14 ಕೋಟಿ) ಹಾಗೂ ಇಟ್ಟಿಗಿ ಕಂಚಿಕೆರೆ ರಸ್ತೆಯಿಂದ ಯರಬಳ್ಳಿ ಗ್ರಾಮಕ್ಕೆ ಸಿಮೆಂಟು ಕಾಂಕ್ರೀಟು ರಸ್ತೆ (₹ 0.11 ಕೋಟಿ).

ಬಿರುಕುಗಳು ಅತೀ ಸೂಕ್ಷ್ಮ ಗಾಳಿ ಬಿರುಕುಗಳಾಗಿದ್ದು ಹಾಗೂ ನೀರಿನ ಸೋರಿಕೆಯು ಸಂಭವಿಸಿರುವುದಿಲ್ಲ ಎಂಬುದಾಗಿ ಸರ್ಕಾರವು ಉತ್ತರಿಸಿತು (ಆಗಸ್ಟ್ 2024). ಮುಂದುವರೆದು, ಬಿರುಕುಗಳನ್ನು ಸರಿಪಡಿಸಲಾಗಿರುವುದು ಹಾಗೂ ಪುನಃ ಪ್ಲಾಸ್ಟರ್ ಮಾಡಲಾಗಿರುವುದು ಎಂಬುದಾಗಿಯೂ ಇಲಾಖೆಯು ತಿಳಿಸಿರುವುದು. ಆದಾಗ್ಯೂ, ರಸ್ತೆ ಬದಿಯಲ್ಲಿನ ಚರಂಡಿ ನಿರ್ಮಾಣದ ಬಗ್ಗೆ ಸರ್ಕಾರವು ಏನನ್ನೂ ತಿಳಿಸಿರುವುದಿಲ್ಲ.

5.10.2 ಚಿತ್ರದುರ್ಗ ಜಿಲ್ಲೆಯ ಹಿರೇಗುಂಟನೂರು ಮತ್ತು ಬೆನೆಕೇನಹಳ್ಳಿ ಗ್ರಾಮಗಳಲ್ಲಿ ಸಿಮೆಂಟು ಕಾಂಕ್ರೀಟು ರಸ್ತೆಗಳನ್ನು ಜಂಟಿ ಭೌತಿಕ ಪರೀಕ್ಷಣೆ ಮಾಡಲಾಗಿ ಈ ಕೆಳಗಿನ ಅಂಶಗಳನ್ನು ಬಹಿರಂಗಪಡಿಸಿತು:

- ರಸ್ತೆಯನ್ನು ವಹಿಸಿಕೊಟ್ಟನಂತರ (ಸೆಪ್ಟಂಬರ್ 2020) ಗ್ರಾಮ ಪಂಚಾಯಿತಿಯು ಚರಂಡಿ ಕಾಮಗಾರಿಯನ್ನು (ಇತರೆ ಯೋಜನೆ ಅಡಿಯಲ್ಲಿ) ಕೈಗೆತ್ತಿಕೊಂಡಿತು. ಹಿರೇಗುಂಟನೂರು ಗ್ರಾಮದಲ್ಲಿ ಚರಂಡಿ ಕಾಮಗಾರಿಯು ರಸ್ತೆಯ ಸ್ಥಿತಿಗತಿಯ ಮೇಲೆ ಪರಿಣಾಮ ಬೀರಿದ್ದಿತು ಹಾಗೂ ಚರಂಡಿಯ ಎತ್ತರವನ್ನು ರಸ್ತೆಯ ಎತ್ತರಕ್ಕಿಂತ ಅಧಿಕ ಮಟ್ಟದಲ್ಲಿ ಚರಂಡಿಗೆ ಯಾವುದೇ ಒಳ ಹರಿವಿನ ದ್ವಾರಗಳನ್ನು ಮಾಡದೆಯೇ ಮಾಡಲಾಗಿದ್ದಿತಾದ್ದರಿಂದ ಸಿಮೆಂಟು ಕಾಂಕ್ರೀಟು ರಸ್ತೆಯ ಮೇಲೆ ನೀರು ನಿಲ್ಲಲು ಕಾರಣವಾಗಿದ್ದಿತು ಹಾಗೂ ಅದರಿಂದಾಗಿ ಸಿಮೆಂಟು ಕಾಂಕ್ರೀಟು ರಸ್ತೆಗೆ ಹಾನಿಯುಂಟಾಗುವ ಅಪಾಯ/ಸಂಭಾವ್ಯತೆಯನ್ನು ಒಡ್ಡಿದ್ದಿತು. ಕಾಮಗಾರಿಯನ್ನು ಪೂರ್ವಭಾವಿಯಾಗಿ ಯೋಜಿಸುವಲ್ಲಿ ಡಿಎಂಎಫ್‌ಟಿ ಹಾಗೂ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯವರ ನಡುವೆ ಸಮನ್ವಯತೆಯನ್ನು ಹೊಂದಿದ್ದಲ್ಲಿ, ರಸ್ತೆಯಲ್ಲಿ ನೀರು ನಿಲ್ಲುವಿಕೆಯನ್ನು ತಪ್ಪಿಸಬಹುದಿದ್ದಿತು.

ಛಾಯಾಚಿತ್ರ ಸಂಖ್ಯೆ 5.13: ಚಿತ್ರದುರ್ಗ ಜಿಲ್ಲೆಯ ಹಿರೇಗುಂಟನೂರು ಗ್ರಾಮದಲ್ಲಿ ಚರಂಡಿ ನಿರ್ಮಾಣ ಕಾಮಗಾರಿ ಮತ್ತು ರಸ್ತೆಯ ಸ್ಥಿತಿಗತಿ

- ಬೆನೆಕೆನಹಳ್ಳಿಯಲ್ಲಿ ಸಿಮೆಂಟು ಕಾಂಕ್ರೀಟು ರಸ್ತೆಯ ಮಧ್ಯದವರೆಗೂ ನಿವಾಸಿಯೊಬ್ಬರು ತಮ್ಮ ಮನೆಯ ಕಾರು ನಿಲುಗಡೆಗಾಗಿ ಕಾರು ಷೆಡ್ಡನ್ನು ನಿರ್ಮಿಸಿದ್ದರು.

ಛಾಯಾಚಿತ್ರ ಸಂಖ್ಯೆ 5.14: ಚಿತ್ರದುರ್ಗ ಜಿಲ್ಲೆಯ ಬೆನಕೆನಹಳ್ಳಿಯಲ್ಲಿ ಸಿಮೆಂಟು ಕಾಂಕ್ರೀಟು ರಸ್ತೆಯ ಮಧ್ಯದವರೆಗೂ ಕಾರು ಷೆಡ್ಡು ನಿರ್ಮಿಸಿರುವುದು.

ರಸ್ತೆ ಕಾಮಗಾರಿಯು ಪೂರ್ಣಗೊಂಡನಂತರ, ಅದನ್ನು ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಹುಲ್ಲೂರು ಗ್ರಾಮ ಪಂಚಾಯತಿ, ಇವರಿಗೆ ವಹಿಸಿಕೊಡಲಾಗಿದ್ದಿತು ಹಾಗೂ ವಹಿಸಿಕೊಡುವ ಸಮಯದಲ್ಲಿ, ರಸ್ತೆಯ ಮೇಲೆ ಕಾರು ನಿಲುಗಡೆ ಷೆಡ್ಡು ಇರಲಿಲ್ಲ ಎಂಬುದಾಗಿ ಸರ್ಕಾರವು ಉತ್ತರಿಸಿತು (ಆಗಸ್ಟ್ 2024). ನಿವಾಸಿಯು ರಸ್ತೆಯನ್ನು ಒತ್ತುವರಿ ಮಾಡಿಕೊಂಡಿರುವರು ಹಾಗೂ ಈ ಒತ್ತುವರಿಯನ್ನು ತೆರವುಗೊಳಿಸಿರುವುದಿಲ್ಲ ಎಂಬುದನ್ನು ಉತ್ತರವು ಸೂಚಿಸುತ್ತಿದ್ದಿತು. ಇದು ಪ್ರಾಧಿಕಾರಗಳ ಕಡೆಯಿಂದ ಮೇಲ್ವಿಚಾರಣೆ ಮಾಡದಿರುವುದು ಮತ್ತು ಕ್ರಮಗಳನ್ನು ಕೈಗೊಳ್ಳದಿರುವ ಕಡೆಗೆ ಬೆರಳು ಮಾಡಿ ತೋರಿಸುತ್ತಿದ್ದಿತು.

ಶಿಫಾರಸು:

7. ಡಿಎಂಎಫ್‌ಟಿ ಹಾಗೂ ಸಂಬಂಧಿತ ಅಧೀನ ಇಲಾಖೆಗಳು ಸೃಷ್ಟಿಸಲಾಗಿರುವ ಆಸ್ತಿಗಳನ್ನು ಗುರಿಯಾಗಿಸಿಕೊಳ್ಳಲಾಗಿರುವಂತಹ ಉದ್ದೇಶಗಳಿಗೆ ಉಪಯೋಗಕ್ಕೆ ಬಿಡುವುದನ್ನು ಹಾಗೂ ಸಂಬಂಧಿತ ಕಾರ್ಯಾಚರಣೆಗಳು ಮತ್ತು ನಿರ್ವಹಣಾ ವೆಚ್ಚಗಳನ್ನು ಭರಿಸುವ ಸಲುವಾಗಿ ವ್ಯವಸ್ಥೆಗಳನ್ನು ಮಾಡಲಾಗಿರುವುದನ್ನು ಖಚಿತಪಡಿಸಿಕೊಳ್ಳತಕ್ಕದ್ದು.

ಕಾಮಗಾರಿಗಳನ್ನು ಕೈಗೆತ್ತಿಕೊಳ್ಳುವಲ್ಲಿನ ವಿಳಂಬ

5.11 ಕಾಮಗಾರಿಗಳನ್ನು ಪ್ರಾರಂಭಿಸುವಲ್ಲಿನ ವಿಳಂಬ

ಡಿಎಂಎಫ್‌ಟಿ ಒದಗಿಸಿದಂತಹ ಕಾಮಗಾರಿಗಳ ಪ್ರಗತಿಯನ್ನು ಲೆಕ್ಕಪರಿಶೋಧನೆಯು ವಿಶ್ಲೇಷಣೆ ಮಾಡಲಾಗಿ, 2017–2020ರ ನಡುವೆ ಕ್ರಿಯಾ ಯೋಜನೆಗಳನ್ನು ಅನುಮೋದಿಸಲಾಗಿದ್ದಿತಾದರೂ ₹ 433.20 ಕೋಟಿ ಮೌಲ್ಯದ 403 ಕಾಮಗಾರಿಗಳನ್ನು ಇನ್ನೂ ಪ್ರಾರಂಭಿಸಿರಲಿಲ್ಲ ಹಾಗೂ ಟೆಂಡರು ಪ್ರಕ್ರಿಯೆಗಳನ್ನು ಪ್ರಾರಂಭಿಸಿರಲಿಲ್ಲ ಎಂಬುದನ್ನು ಈ ಕೆಳಗೆ ವಿವರಿಸಿರುವಂತೆ ಬಹಿರಂಗಪಡಿಸಿತು:

ಕೋಷ್ಟಕ ಸಂಖ್ಯೆ 5.7: ಅನುಮೋದನೆಯ ನಂತರ ಕಾಮಗಾರಿಗಳನ್ನು ಪ್ರಾರಂಭಿಸುವಲ್ಲಿನ ವಿಳಂಬವನ್ನು ತೋರಿಸುವ ತ:ಖ್ತೆ

ಕ್ರಮ ಸಂಖ್ಯೆ	ಡಿಎಂಎಫ್‌ಟಿ ಹೆಸರು	ಕ್ರಿಯಾ ಯೋಜನೆಯಲ್ಲಿ ಅನುಮೋದಿತ ಗೊಂಡಿದ್ದಂತಹ ಕಾಮಗಾರಿಗಳ ಸಂಖ್ಯೆ	ಮೊತ್ತ ಕೋಟಿಗಳಲ್ಲಿ	ಪ್ರಾರಂಭ ಗೊಳಿಸದಿದ್ದಂತಹ ಕಾಮಗಾರಿಗಳ ಸಂಖ್ಯೆ	ಮೊತ್ತ ಕೋಟಿಗಳಲ್ಲಿ	ಟೆಂಡರನ್ನು ಆಹ್ವಾನಿಸದ್ದಂತಹ ಕಾಮಗಾರಿಗಳ ಸಂಖ್ಯೆ	ಮೊತ್ತ ಕೋಟಿಗಳಲ್ಲಿ
01	ಬಳ್ಳಾರಿ	1,764	1,593.68	27	33.35	158	325.15
02	ಚಿತ್ರದುರ್ಗ	305	319.39	3	4.65	34	42.62
03	ಗದಗ	95	5.56	0	0	28	0.90
04	ಬೆಂಗಳೂರು ನಗರ	607	76.35	0	0	141	24.38
05	ವಿಜಯನಗರ	1,420	751.45	0	0	12	2.15
	ಒಟ್ಟು	**4,191**	**2,746.43**	**30**	**38.00**	**373**	**395.20**

(ಮೂಲ: ಕಾಮಗಾರಿಗಳ ಪ್ರಗತಿ: ಜೂನ್ 2023ರಲ್ಲಿದ್ದಂತೆ – ಚಿತ್ರದುರ್ಗ, ಜುಲೈ 2023ರಲ್ಲಿದ್ದಂತೆ – ಬಳ್ಳಾರಿ ಮತ್ತು ಬೆಂಗಳೂರು ನಗರ, ಆಗಸ್ಟ್ 2023ರಲ್ಲಿದ್ದಂತೆ – ವಿಜಯನಗರ ಮತ್ತು ಸೆಪ್ಟಂಬರ್ 2023ರಲ್ಲಿದ್ದಂತೆ – ಗದಗ).

ಮೇಲಿನ ಕೋಷ್ಟಕದಿಂದ ಕಾಣಬಹುದಾದಂತೆ, ಲೆಕ್ಕಪರಿಶೋಧನೆಯು ಆಯ್ಕೆ ಮಾಡಿಕೊಂಡಿದ್ದಂತಹ ಐದು ಜಿಲ್ಲೆಗಳಲ್ಲಿ ₹ 38.00 ಕೋಟಿ ಮೊತ್ತದ 30 ಕಾಮಗಾರಿಗಳು ಹಾಗೂ ₹ 395.20 ಕೋಟಿ ಮೊತ್ತದ 373 ಕಾಮಗಾರಿಗಳಿಗೆ ಸಂಬಂಧಿಸಿದಂತೆ ಟೆಂಡರುಗಳನ್ನು ಆಹ್ವಾನಿಸಿರಲಿಲ್ಲ. ಮುಂದುವರೆದು 21 ಪ್ರಗತಿಯಲ್ಲಿರುವ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಕಾರ್ಯಗತಗೊಳಿಸುವ ಇಲಾಖೆಗಳಿಗೆ/ಸಂಸ್ಥೆಗಳಿಗೆ ₹ 2.78 ಕೋಟಿ ಮೊತ್ತದಷ್ಟರ ಮಟ್ಟಿಗೆ ಅನುದಾನಗಳನ್ನು ಬಿಡುಗಡೆ ಮಾಡಲಾಗಿದ್ದಿತಾದರೂ ಟೆಂಡರುಗಳನ್ನು ಆಹ್ವಾನಿಸಿರಲಿಲ್ಲ.

ಮುಂದುವರೆದು, ಮಾರ್ಚ್ 2023ರ ಹೊತ್ತಿಗೆ ಗದಗ, ಚಿತ್ರದುರ್ಗ ಮತ್ತು ವಿಜಯನಗರದ ಡಿಎಂಎಫ್‌ಟಿ ಅನುಕ್ರಮವಾಗಿ 'ಪ್ರಗತಿಯಲ್ಲಿದೆ' ಎಂದು ವರದಿ ಮಾಡಿದ್ದರಾದರೂ, ₹ 1.32 ಕೋಟಿ ಮೊತ್ತದ 12 ಕಾಮಗಾರಿಗಳು ಹಾಗೂ ₹ 3.45 ಕೋಟಿ ಮೊತ್ತದ 6 ಕಾಮಗಾರಿಗಳು, ₹ 0.34 ಕೋಟಿ ಮೊತ್ತದ ಮೂರು ಕಾಮಗಾರಿಗಳಿಗೆ ಸಂಬಂಧಿಸಿದಂತೆ ಟೆಂಡರುಗಳನ್ನು ಆಹ್ವಾನಿಸಿರಲಿಲ್ಲ. ₹ 0.98 ಕೋಟಿ ಹಾಗೂ ₹ 1.80 ಕೋಟಿ ಮೊತ್ತಗಳನ್ನು ಈ ಕಾಮಗಾರಿಗಳ ಕಡೆಗೆ ಸಂಬಂಧಿತ ಡಿಎಂಎಫ್‌ಟಿ ಈಗಾಗಲೇ ಬಿಡುಗಡೆಗೊಳಿಸಿದ್ದವು.

ವ್ಯವಸ್ಥಾಪನಾ ಸಮಿತಿಯು ವಾರ್ಷಿಕ ಯೋಜನೆಗಳನ್ನು ಹಾಗೂ ಅನುಮೋದಿತ ಯೋಜನೆಗಳು/ಕಾರ್ಯಕ್ರಮಗಳನ್ನು ಮೇಲ್ವಿಚಾರಣೆ ಮಾಡತಕ್ಕದ್ದು ಹಾಗೂ ಕಾರ್ಯಗತಗೊಳಿಸುವುದನ್ನು ಖಚಿತಪಡಿಸಿಕೊಳ್ಳತಕ್ಕದ್ದು ಎಂಬುದಾಗಿ ಡಿಎಂಎಫ್‌ಟಿ ನಿಯಮಗಳು, 2016ರ ನಿಯಮ 15(5) ನಿರ್ದಿಷ್ಟಪಡಿಸಿರುತ್ತದೆ. ***ಕಂಡಿಕೆ 4.7ರಲ್ಲಿ*** ಗಮನಿಸಲಾಗಿರುವಂತೆ, ಈ ಸಮಿತಿಗಳು ಕಾಮಗಾರಿಗಳ ಸ್ಥಿತಿಗತಿಗಳನ್ನು ಚರ್ಚಿಸುವ ಸಲುವಾಗಿ ಮತ್ತು ಮೇಲ್ವಿಚಾರಣೆ ಮಾಡುವ ಸಲುವಾಗಿ ನಿಯತವಾಗಿ ಸಭೆ ಸೇರಿರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು.

ಕಾರ್ಯಗತಗೊಳಿಸುವ ಸಂಸ್ಥೆಗಳು ಕಾಮಗಾರಿಯನ್ನು ಸಮಯೋಚಿತವಾಗಿ ಮುಕ್ತಾಯಗೊಳಿಸುವುದನ್ನು ಖಚಿತಪಡಿಸಿಕೊಳ್ಳುವ ಸಲುವಾಗಿ ಸಭೆಗಳನ್ನು ನಡೆಸಲಾಗಿದ್ದಿತು ಎಂಬುದಾಗಿ ಸರ್ಕಾರವು ಉತ್ತರಿಸಿತು (ಆಗಸ್ಟ್ 2024). ಮುಂದುವರಿದು, ಕೋವಿಡ್ ಸಮಯದಲ್ಲಿ, ಕಾಮಗಾರಿಯನ್ನು ನಡೆಸಿಕೊಂಡು ಹೋಗಲಾಗಲಿಲ್ಲ ಹಾಗೂ ಕೆಲವು ತಾಂತ್ರಿಕ/ಆಡಳಿತಾತ್ಮಕ ಕಾರಣಗಳಿಂದಾಗಿ, ಸ್ಥಳೀಯರಿಂದ ವಿರೋಧದ ಕಾರಣ ಕಾಮಗಾರಿಗಳು ವಿಳಂಬಗೊಂಡವು ಹಾಗೂ ಕೆಲವು ಕಾಮಗಾರಿಗಳು ಭೌತಿಕವಾಗಿ ಪೂರ್ಣಗೊಂಡಿದ್ದರೂ ಸಹ ಅಂತಿಮ ಬಿಲ್ಲಿನ ಸಲ್ಲಿಕೆಗಾಗಿ ಬಾಕಿಯಿರುವುದಾಗಿ ತೋರಿಸಲಾಗಿದ್ದವು ಎಂಬುದಾಗಿ ಇಲಾಖೆಯು ತಿಳಿಸಿತು. ಕಾಮಗಾರಿಗಳು ವಿಳಂಬಗೊಂಡಿರಬಹುದು ಆದರೆ ಕಾಮಗಾರಿಗಳನ್ನು ಟೆಂಡರಿಗೆ ಇಡದಿದ್ದುದರ ವಾಸ್ತವಾಂಶದ ಬಗ್ಗೆ ಉತ್ತರವು ಏನನ್ನೂ ತಿಳಿಸಿರುವುದಿಲ್ಲ, ಇದು ಆಡಳಿತಾತ್ಮಕ ಲೋಪದೋಷಗಳನ್ನು ಸೂಚಿಸುತ್ತಿದ್ದಿತು.

ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾದಂತಹ ಇತರೆ ಅಂಶಗಳು

5.12 ಪಿಎಂಕೆಕೆಕೆವೈ ಯೋಜನೆಗಳು/ಕಾರ್ಯಚಟುವಟಿಕೆಗಳ ಮೌಲ್ಯಮಾಪನ

ಪಿಎಂಕೆಕೆಕೆವೈಯ ಸರ್ವಾಂಗೀಣ ಉದ್ದೇಶವು ಗಣಿಗಾರಿಕೆಯ ಸಮಯದಲ್ಲಿ ಮತ್ತು ನಂತರ, ಗಣಿಗಾರಿಕೆ ಜಿಲ್ಲೆಗಳಲ್ಲಿನ ವಾತಾವರಣದ ಮೇಲೆ, ಜನತೆಯ ಆರೋಗ್ಯ ಮತ್ತು ಸಾಮಾಜಿಕ –ಆರ್ಥಿಕ ಸ್ಥಿತಿಗತಿಯ ಮೇಲೆ ಉಂಟಾಗುವ ಪ್ರತಿಕೂಲ ಪರಿಣಾಮಗಳನ್ನು ಕನಿಷ್ಠ ಮಟ್ಟಕ್ಕೆ ತರುವುದು/ತಪ್ಪಿಸುವುದು ಹಾಗೂ ಗಣಿಗಾರಿಕೆ ಜಿಲ್ಲೆಗಳಲ್ಲಿನ ತೊಂದರೆಗೆ ಈಡಾಗಿರುವ ಜನತೆಯ ಒಂದು ದೀರ್ಘಾವಧಿ ಊರ್ಜಿತಗೊಳ್ಳಬಲ್ಲಂತಹ ಜೀವನೋಪಾಯಗಳನ್ನು ಖಚಿತಪಡಿಸಿಕೊಳ್ಳುವುದಾಗಿದ್ದಿತು. ಪಿಎಂಕೆಕೆಕೆವೈಯ ಸರ್ವಾಂಗೀಣ ಉದ್ದೇಶದ ಈಡೇರಿಕೆಯ ವಿಸ್ತೀರ್ಣವನ್ನು ಮೌಲ್ಯಮಾಪನ ಮಾಡುವ ಸಲುವಾಗಿ ಪರೀಕ್ಷಾ–ಪರಿಶೀಲನೆ ಮಾಡಲಾದ ಡಿಎಂಎಫ್‌ಟಿಗಳಲ್ಲಿ ಪಿಎಂಕೆಕೆಕೆವೈ ಯೋಜನೆಗಳು/ಕಾರ್ಯಚಟುವಟಿಕೆಗಳ ನಿರ್ಧಾರಣೆಯನ್ನು ಯಾವುದೇ ಮೂರನೇ ತಂಡದ/ಸ್ವತಂತ್ರ ನಿರ್ಧಾರಣೆ ಕೈಗೊಂಡಿರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು.

5.12.1 ಫಲಾನುಭವಿ ಸಮೀಕ್ಷೆ

ರೇಖಾಚಿತ್ರ ಸಂಖ್ಯೆ 5.3 : ಫಲಾನುಭವಿಗಳ ಲಿಂಗ ಪಾರ್ಶ್ವಚಿತ್ರಣ



ಆಯ್ಕೆ ಮಾಡಿಕೊಳ್ಳಲಾಗಿದ್ದ ಯೋಜನೆಗಳು/ಕಾಮಗಾರಿಗಳು ಹಾಗೂ ಫಲಾನುಭವಿ ಸಂಬಂಧಿತ ಯೋಜನೆಗಳು/ಕಾಮಗಾರಿಗಳ ಪೈಕಿ ಲೆಕ್ಕಪರಿಶೋಧನೆಯು 961 ಫಲಾನುಭವಿಗಳನ್ನು ಮಾದರಿ ಆಯ್ಕೆ ಮೂಲಕ ಸಮೀಕ್ಷಿಸಿತು.

ಸಮೀಕ್ಷೆಯನ್ನು ಲೆಕ್ಕಪರಿಶೋಧನೆಯು ಆಯ್ಕೆ ಮಾಡಿಕೊಂಡಿದ್ದಂತಹ ಐದು ಜಿಲ್ಲೆಗಳ ಪಟ್ಟಣಗಳು (254 ಫಲಾನುಭವಿಗಳು) ಹಾಗೂ ಅಲ್ಲದೆಯೇ ಗ್ರಾಮಗಳಲ್ಲಿ (707 ಫಲಾನುಭವಿಗಳು) ಕೈಗೊಳ್ಳಲಾಯಿತು. ಸಮೀಕ್ಷೆಗಾಗಿ ಆಯ್ಕೆ ಮಾಡಿಕೊಳ್ಳಲಾಗಿದ್ದಂತಹ ಫಲಾನುಭವಿಗಳ ವಯೋವಾರು ಪಾರ್ಶ್ವಚಿತ್ರಣವನ್ನು ಈ ಕೆಳಗೆ ವಿವರಿಸಲಾಗಿರುವುದು:

ಕೋಷ್ಟಕ ಸಂಖ್ಯೆ 5.8 ಸಮೀಕ್ಷೆಗಾಗಿ ಆಯ್ಕೆ ಮಾಡಿಕೊಳ್ಳಲಾಗಿದ್ದಂತಹ ಫಲಾನುಭವಿಗಳ ವಯೋವಾರು ಪಾರ್ಶ್ವಚಿತ್ರಣ

ಕ್ರಮ ಸಂಖ್ಯೆ	ವಯಸ್ಸಿನ ಪಾರ್ಶ್ವಚಿತ್ರಣ	ಫಲಾನುಭವಿಗಳ ಸಂಖ್ಯೆ	ಪುರುಷ		ಮಹಿಳೆ	
			ಪಟ್ಟಣ	ಗ್ರಾಮ	ಪಟ್ಟಣ	ಗ್ರಾಮ
1	7ರಿಂದ 20	326*	54	111	66	95
2	21ರಿಂದ 30	167	32	73	22	40
3	31ರಿಂದ 60	452	53	273	24	102
4	60ರ ಮೇಲ್ಪಟ್ಟು	16	2	12	1	1
	ಒಟ್ಟು	**961**	**141**	**469**	**113**	**238**

*** 7ರಿಂದ 20ರ ವಯೋ ಗುಂಪು ಡಿಎಂಎಫ್‌ಟಿ ಅಡಿಯಲ್ಲಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದ್ದಂತಹ ವಿದ್ಯಾರ್ಥಿನಿಲಯ ಮತ್ತು ಶಾಲೆಗಳ ವಿದ್ಯಾರ್ಥಿಗಳನ್ನು ಒಳಗೊಂಡಿರುವುದು.**

ಕೆಲವು ಪ್ರಮುಖ ಪ್ರಶ್ನೆಗಳಿಗೆ 961 ಫಲಾನುಭವಿಗಳ ಪ್ರತಿಕ್ರಿಯೆಯನ್ನು ಈ ಕೆಳಗಿನ ರೇಖಾಚಿತ್ರದಲ್ಲಿ ತೋರಿಸಲಾಗಿರುವುದು:

ರೇಖಾಚಿತ್ರ ಸಂಖ್ಯೆ 5.4: 961 ಫಲಾನುಭವಿಗಳಿಂದ ಪ್ರತಿಕ್ರಿಯೆಗಳು



ಗಮನಿಸಲಾದಂತಹ ಪ್ರಮುಖ ಅಂಶಗಳನ್ನು ಈ ಕೆಳಗೆ ವಿವರಿಸಲಾಗಿರುವುದು:

- 961 ಫಲಾನುಭವಿಗಳ ಪೈಕಿ 813 ಫಲಾನುಭವಿಗಳು (ಶೇಕಡಾ 85) ಪಿಎಂಕೆಕೆಕೆವೈ ಬಗ್ಗೆ ಅರಿವನ್ನು ಹೊಂದಿರಲಿಲ್ಲ, 146 ಫಲಾನುಭವಿಗಳು (ಶೇಕಡಾ 15) ಯೋಜನೆಯ ಬಗ್ಗೆ ಅರಿತಿದ್ದರು. ಇಬ್ಬರು ಫಲಾನುಭವಿಗಳು ಪ್ರಶ್ನೆಗೆ ಯಾವುದೇ ಪ್ರತಿಕ್ರಿಯೆಯನ್ನೂ ನೀಡಲಿಲ್ಲ.

- 702 ಫಲಾನುಭವಿಗಳು (ಶೇಕಡಾ 73) ಡಿಎಂಎಫ್‌ಟಿ ಕಾರ್ಯಚಟುವಟಿಕೆಗಳ ಬಗ್ಗೆ ಅರಿವನ್ನು ಹೊಂದಿರಲಿಲ್ಲ ಹಾಗೂ ಕೇವಲ 88 ಫಲಾನುಭವಿಗಳು (ಶೇಕಡಾ 9) ಅದರ ಕಾರ್ಯಚಟುವಟಿಕೆಗಳ ಬಗ್ಗೆ ಅರಿವನ್ನು ಹೊಂದಿದ್ದರು. 171 (ಶೇಕಡಾ 18) ಫಲಾನುಭವಿಗಳು ಪ್ರಶ್ನೆಗೆ ಯಾವುದೇ ಪ್ರತಿಕ್ರಿಯೆಯನ್ನೂ ನೀಡಲಿಲ್ಲ.

- 749 ಫಲಾನುಭವಿಗಳು (ಶೇಕಡಾ 78) ತಮ್ಮ ಗ್ರಾಮವು ಪಿಎಂಕೆಕೆಕೆವೈ ಅಡಿಯಲ್ಲಿನ ಪಟ್ಟಿಯಲ್ಲಿ ಇರುವುದರ ಬಗ್ಗೆ ಅರಿವನ್ನು ಹೊಂದಿರಲಿಲ್ಲ ಹಾಗೂ 210 ಫಲಾನುಭವಿಗಳು (ಶೇಕಡಾ 22) ತಮ್ಮ ಗ್ರಾಮವು ತೊಂದರೆಗೆ ಈಡಾಗಿರುವ ಗ್ರಾಮಗಳ ಪಟ್ಟಿಯಲ್ಲಿ ಇರುವುದರ ಬಗ್ಗೆ ಅರಿವನ್ನು ಹೊಂದಿದ್ದರು. ಇಬ್ಬರು ಫಲಾನುಭವಿಗಳು ಪ್ರಶ್ನೆಗೆ ಯಾವುದೇ ಪ್ರತಿಕ್ರಿಯೆಯನ್ನೂ ನೀಡಲಿಲ್ಲ.

- 763 ಫಲಾನುಭವಿಗಳು (ಶೇಕಡಾ 79) ತಮ್ಮ ಪ್ರದೇಶದಲ್ಲಿ/ ವಸತಿ ಪ್ರದೇಶದಲ್ಲಿ ಲಭ್ಯವಿರುವ ಶಾಲೆಗಳು/ ಆಸ್ಪತ್ರೆಗಳು/ ನೀರು ಸರಬರಾಜು/ ಕೌಶಲ್ಯ ಅಭಿವೃದ್ಧಿ/ ರಸ್ತೆಗಳು/ ವಿದ್ಯುತ್ತಿನ ಅನುಕೂಲತೆಯ ಬಗ್ಗೆ ತೃಪ್ತಿ ಹೊಂದಿದ್ದರು ಹಾಗೂ 34 ಫಲಾನುಭವಿಗಳು (ಶೇಕಡಾ 4) ತೃಪ್ತಿ ಹೊಂದಿರಲಿಲ್ಲ. 164 ಫಲಾನುಭವಿಗಳು ಪ್ರಶ್ನೆಗೆ ಪ್ರತಿಕ್ರಿಯೆ ನೀಡಲಿಲ್ಲ.

- 882 ಫಲಾನುಭವಿಗಳು (ಶೇಕಡಾ 92) ತಮ್ಮ ಗ್ರಾಮದಲ್ಲಿನ ಆಸ್ತಿಗಳನ್ನು ಫಲಪ್ರದವಾಗಿ ಉಪಯೋಗಕ್ಕೆ ಬಿಡಲಾಗಿರುವುದು ಎಂಬುದಾಗಿ ತಿಳಿಸಿರುವರು ಹಾಗೂ 72 ಫಲಾನುಭವಿಗಳು (ಶೇಕಡಾ 7) ಆಸ್ತಿಗಳನ್ನು ಸಮರ್ಪಕವಾಗಿ ಉಪಯೋಗಕ್ಕೆ ಬಿಟ್ಟಿರುವುದಿಲ್ಲ

ಎಂಬುದಾಗಿ ತಿಳಿಸಿರುವರು. 7 ಫಲಾನುಭವಿಗಳು ಪ್ರಶ್ನೆಗೆ ಉತ್ತರಿಸದಿರುವುದನ್ನು ಆಯ್ಕೆ ಮಾಡಿಕೊಂಡರು.

- 689 ಫಲಾನುಭವಿಗಳು (ಶೇಕಡಾ 72) ತಾವು ಗ್ರಾಮ ಸಭೆಯ ಸಭೆಗಳಲ್ಲಿ ಭಾಗವಹಿಸಿರುವುದಿಲ್ಲ ಎಂಬುದಾಗಿ ತಿಳಿಸಿರುವರು, 269 ಫಲಾನುಭವಿಗಳು (ಶೇಕಡಾ 28) ತಾವು ಗ್ರಾಮ ಸಭೆಯ ಸಭೆಗಳಲ್ಲಿ ಭಾಗವಹಿಸಿರುವುದಾಗಿ ತಿಳಿಸಿರುವರು. ಮೂವರು ಫಲಾನುಭವಿಗಳು ಪ್ರಶ್ನೆಗೆ ಉತ್ತರಿಸದಿರುವುದನ್ನು ಆಯ್ಕೆ ಮಾಡಿಕೊಂಡರು.

- 749 ಫಲಾನುಭವಿಗಳು (ಶೇಕಡಾ 78) ಪಿಎಂಕೆಕೆಕೆವೈ ಅಡಿಯಲ್ಲಿನ ಯೋಜನೆಗಳಿಗೆ ಗ್ರಾಮ ಸಭೆ ಅನುಮೋದನೆಯನ್ನು ಪಡೆದುಕೊಂಡಿರುವುದಿಲ್ಲ ಎಂಬುದಾಗಿ ತಿಳಿಸಿರುವರು ಹಾಗೂ 208 ಫಲಾನುಭವಿಗಳು (ಶೇಕಡಾ 22) ಯೋಜನೆಗಳಿಗೆ ಗ್ರಾಮ ಸಭೆಯ ಅನುಮೋದನೆಯನ್ನು ಪಡೆದುಕೊಳ್ಳಲಾಗಿರುವುದಾಗಿ ತಿಳಿಸಿರುವರು. ನಾಲ್ಕು ಫಲಾನುಭವಿಗಳು ಪ್ರಶ್ನೆಗೆ ಉತ್ತರಿಸದಿರುವುದನ್ನು ಆಯ್ಕೆ ಮಾಡಿಕೊಂಡರು.

- 882 ಫಲಾನುಭವಿಗಳು (ಶೇಕಡಾ 92) ಪಿಎಂಕೆಕೆಕೆವೈ ಅಡಿಯಲ್ಲಿನ ಕಾಮಗಾರಿಗಳಿಗೆ ಸಂಬಂಧಿತ ಗ್ರಾಮಗಳಲ್ಲಿ ಗ್ರಾಮ ಸಭೆಗಳಿಗೆ ಯಾವುದೇ ವರದಿಗಳನ್ನು ನೀಡಿರುವುದಿಲ್ಲ ಅಥವಾ ಚರ್ಚಿಸಿರುವುದಿಲ್ಲ ಎಂಬುದಾಗಿ ತಿಳಿಸಿದರು ಹಾಗೂ 76 ಫಲಾನುಭವಿಗಳು (ಶೇಕಡ 8) ಕೈಗೆತ್ತಿಕೊಂಡಿರುವ ಕಾಮಗಾರಿಗಳ ಮೇಲೆ ವರದಿಯನ್ನು ಗ್ರಾಮ ಸಭೆಯ ಮುಂದೆ ಮಂಡಿಸಿರುವರು ಅಥವಾ ಚರ್ಚೆಗಳನ್ನು ಮಾಡಿರುವರು ಎಂಬುದಾಗಿ ತಿಳಿಸಿರುವರು. ಮೂವರು ಫಲಾನುಭವಿಗಳು ಪ್ರಶ್ನೆಗೆ ಉತ್ತರಿಸದಿರುವುದನ್ನು ಆಯ್ಕೆ ಮಾಡಿಕೊಂಡರು.

5.12.2 ಡಿಎಂಎಫ್‌ಟಿ ಗಳ ನಿಯಮಬಾಹಿರ/ಒಪ್ಪಿಕೊಳ್ಳಲು ಸಾಧ್ಯವಿರದ ವೆಚ್ಚಗಳು

ಜಿಲ್ಲಾ ಖನಿಜ ಪ್ರತಿಷ್ಠಾನ ಟ್ರಸ್ಟ್ ತೀರ್ಮಾನಿಸುವ ರೀತಿಯಲ್ಲಿ, ಟ್ರಸ್ಟಿಗೆ ಬರುವಂತಹ ವಾರ್ಷಿಕ ಆದಾಯದ ಶೇಕಡಾ ಐದರ ಪೈಕಿ ಶೇಕಡಾ ನಾಲ್ಕರಷ್ಟನ್ನು ಆಡಳಿತಾತ್ಮಕ, ಮೇಲ್ವಿಚಾರಣೆ ಹಾಗೂ ಇತರೆ ಸಂಬಂಧಿತ ವೆಚ್ಚಗಳ ಕಡೆಗೆ ಉಪಯೋಗಿಸಿಕೊಳ್ಳುವುದು ಎಂಬುದಾಗಿ ಡಿಎಂಎಫ್‌ಟಿ ನಿಯಮಗಳು, 2016ರ ನಿಯಮ 18(2) ನಿರ್ದಿಷ್ಟಪಡಿಸಿರುವುದು. ಉಳಿದ ಶೇಕಡಾ ಒಂದನ್ನು ಮೇಲ್ವಿಚಾರಣಾ ಸಮಿತಿ, ರಾಜ್ಯ ಮಟ್ಟದ ಅಧಿಕಾರಯುಕ್ತ ಸಮಿತಿ ಮತ್ತು ರಾಜ್ಯ ಮಟ್ಟದ ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಕೋಶ, ಇವುಗಳ ಒಂದು ಸುಗಮ ಕಾರ್ಯನಿರ್ವಹನೆಗಾಗಿ ರಾಜ್ಯ ರಾಜಧಾನಿಯಲ್ಲಿ ಆಡಳಿತಾತ್ಮಕ ವೆಚ್ಚಗಳನ್ನು ಭರಿಸುವ ಸಲುವಾಗಿ ನಿರ್ದೇಶಕರು, ಗಣಿಗಳು ಮತ್ತು ಭೂ ವಿಜ್ಞಾನ ಇಲಾಖೆ, ಇವರಿಗೆ ವರ್ಗಾಯಿಸತಕ್ಕದ್ದು.

ಪ್ರಗತಿಯಲ್ಲಿರುವಂತಹ ಯಾವುದಾದರೂ ಯೋಜನೆಗಳಿಂದ ಸಂಡೂರು ತಾಲ್ಲೂಕಿನಲ್ಲಿ ನಾಲ್ಕು ಚಕ್ರದ ವಾಹನಗಳನ್ನು ಒದಗಿಸುವಂತೆ ವಿವಿಧ ಇಲಾಖೆಗಳು[45] ಮಾಡಿದ ಮನವಿಗಳನ್ನು (29 ಏಪ್ರಿಲ್ 2021) ಪರಿಗಣಿಸಿದಂತೆ, ಜಿಲ್ಲಾಧಿಕಾರಿಯವರು, ಬಳ್ಳಾರಿ, ಇವರು ಅದನ್ನು ಕಾರ್ಯದರ್ಶಿಯವರು (ಅತೀ ಸಣ್ಣ, ಸಣ್ಣ ಮತ್ತು ಮಧ್ಯಮ ಪ್ರಮಾಣದ ಉದ್ದಿಮೆಗಳು ಮತ್ತು ಗಣಿಗಳು), ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, ಇವರಿಗೆ ಕಳುಹಿಸಿಕೊಟ್ಟರು, ಇದಕ್ಕೆ ಪ್ರತಿಕ್ರಿಯೆಯಾಗಿ ಕಾರ್ಯದರ್ಶಿಯವರು, ಈ ಇಲಾಖೆಗಳಿಗೆ 12 ವಾಹನಗಳನ್ನು ಖರೀದಿಸುವ ಸಲುವಾಗಿ ಡಿಎಂಎಫ್‌ಟಿನಿಂದ ಮೊತ್ತವನ್ನು ಬಿಡುಗಡೆ ಮಾಡಲು ಅನುಮೋದನೆ ನೀಡಿದರು (27 ಆಗಸ್ಟ್ 2021). ಅದರಂತೆಯೇ, ಜಿಲ್ಲಾಧಿಕಾರಿಯವರು, ಬಳ್ಳಾರಿ, ಇವರು ಇತರೆ ಇಲಾಖೆಗಳಿಗಾಗಿ ₹ 0.68 ಕೋಟಿ ಮೊತ್ತದಷ್ಟು ಒಟ್ಟಾರೆ ವೆಚ್ಚದಲ್ಲಿ ಎಂಟು ವಾಹನಗಳನ್ನು ಖರೀದಿಸಿದರು.

ಆದಾಗ್ಯೂ, ಪಿಎಂಕೆಕೆಕೆವೈ ಸಾಮಾನ್ಯ ಮಾರ್ಗಸೂಚಿಗಳ ಕಂಡಿಕೆ 2(ಬಿ) ಅನುಸಾರ, ಯಾವುದೇ ತಾತ್ಕಾಲಿಕ/ಖಾಯಂ ಹುದ್ದೆಗಳನ್ನು ಸೃಷ್ಟಿಸುವ ಮೊದಲು ಹಾಗೂ ವಾಹನಗಳನ್ನು ಖರೀದಿಸುವ ಮೊದಲು ಪ್ರತಿಷ್ಠಾನ ಟ್ರಸ್ಟ್ ರಾಜ್ಯ ಸರ್ಕಾರದ ಅನುಮೋದನೆಯನ್ನು ಪಡೆದುಕೊಳ್ಳತಕ್ಕದ್ದು.

[45] ಲೋಕೋಪಯೋಗಿ ಕಾಮಗಾರಿಗಳು, ಕಂದಾಯ (ತಹಸೀಲ್ದಾರ್), ಶಿಕ್ಷಣ, ಕೃಷಿ ಇಲಾಖೆಗಳು, ಇತ್ಯಾದಿ.

ನಿಯಮಗಳು ಆದಾಗ್ಯೂ, ಇತರೆ ಇಲಾಖೆಗಳಿಗಾಗಿ ಭರಿಸಲಾಗುವ ವೆಚ್ಚಗಳಿಗೆ ಅನುಮತಿ ನೀಡಿರುವುದಿಲ್ಲ.

ಮುಂದುವರೆದು, ಗೃಹ ರಕ್ಷಕ ದಳ ಸಿಬ್ಬಂದಿಯ ವೇತನ, ಬಳ್ಳಾರಿಯ ಜಿಲ್ಲಾಧಿಕಾರಿಯವರ ಪ್ರಾಂಗಣದಲ್ಲಿ ಆಂತರಿಕ ರಸ್ತೆಗಳ ಸುಧಾರಣೆ, ಇತ್ಯಾದಿಗಳಿಗಾಗಿ ₹ 1.26 ಕೋಟಿ ಮೊತ್ತವನ್ನು ಭರಿಸಲಾಗಿದ್ದಿತು, ***ಅನುಬಂಧ–8ರಲ್ಲಿ*** ವಿವರಿಸಿರುವಂತೆ ಈ ವೆಚ್ಚಗಳು ಆಡಳಿತಾತ್ಮಕ ವೆಚ್ಚಗಳ ಅಡಿಯಲ್ಲಿ ಭರಿಸಲು ಅರ್ಹತೆಯನ್ನು ಹೊಂದಿರಲಿಲ್ಲ.

ಈ ರೀತಿಯಾಗಿ ಮೇಲೆ ಚರ್ಚಿಸಿರುವಂತೆ ಸರ್ಕಾರಿ ಇಲಾಖೆಗಳ ವೆಚ್ಚಗಳಿಗಾಗಿ ₹ 1.94 ಕೋಟಿ ಮೊತ್ತವನ್ನು ಭರಿಸಿರುವುದು ಡಿಎಂಎಫ್‌ಟಿ, ಬಳ್ಳಾರಿ, ಇವರ ಆಡಳಿತಾತ್ಮಕ ವೆಚ್ಚಗಳಿಗೆ ಸಂಬಂಧಿಸಿರಲಿಲ್ಲವಾದ್ದರಿಂದ, ನಿಯಮಬಾಹಿರ ವೆಚ್ಚವಾಗಿದ್ದಿತು.

ದಿನಾಂಕ 18 ಜನವರಿ 2020ರಂದು ಹಣಕಾಸು ಇಲಾಖೆಯು ನೀಡಿದ ಅನುಮೋದನೆಯ ಅನುಸಾರ ಮೊತ್ತವನ್ನು ಆಡಳಿತಾತ್ಮಕ ವೆಚ್ಚಗಳ ಕಡೆಗೆ ಭರಿಸಲಾಗಿದ್ದಿತು ಎಂಬುದಾಗಿ ಸರ್ಕಾರವು ಉತ್ತರಿಸಿತು (ಆಗಸ್ಟ್ 2024). ಡಿಎಂಎಫ್‌ಟಿ ನಿಯಮಗಳ ಅನುಸಾರ ವೆಚ್ಚಗಳಿಗೆ ಅನುಮೋದನೆ ನೀಡಲು ಹಣಕಾಸು ಇಲಾಖೆಗೆ ಅಧಿಕಾರ ಇರಲಿಲ್ಲವಾದ್ದರಿಂದ ಉತ್ತರವು ಒಪ್ಪುವಂತಿರಲಿಲ್ಲ. ಮುಂದುವರೆದು, ಮಾರ್ಗಸೂಚಿಗಳ ವಿರುದ್ಧವಾಗಿ ಇತರೆ ಇಲಾಖೆಗಳ ವೆಚ್ಚಗಳ ಕಡೆಗೆ ಡಿಎಂಎಫ್‌ಟಿ ಹಣಕಾಸನ್ನು ಭರಿಸಿರುವುದರ ಬಗ್ಗೆ ಉತ್ತರವು ಮೌನವಾಗಿದ್ದಿತು.

ಬೆಂಗಳೂರು	**(ಅಶೋಕ್ ಸಿನ್ಹಾ)**
ದಿನಾಂಕ 15 OCT 2025	**ಪ್ರಧಾನ ಮಹಾಲೇಖಾಪಾಲರು (ಲೆಕ್ಕಪರಿಶೋಧನೆ–II)**
	ಕರ್ನಾಟಕ

ಮೇಲುಸಹಿ ಮಾಡಲಾಗಿದೆ

ನವ ದೆಹಲಿ	**(ಕೆ. ಸಂಜಯ್ ಮೂರ್ತಿ)**
ದಿನಾಂಕ 22 OCT 2025	**ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು**

ಅನುಬಂಧಗಳು

ಅನುಬಂಧ – 1

(ಕಂಡಿಕೆ 2.3ರಲ್ಲಿ ಉಲ್ಲೇಖಿಸಲಾಗಿದೆ)

ಜಿಲ್ಲಾ ಖನಿಜ ಪ್ರತಿಷ್ಠಾನ ಟ್ರಸ್ಟ್‌ನ ಸದಸ್ಯರು

ಕ್ರಮ ಸಂಖ್ಯೆ.	ಹೆಸರು ಮತ್ತು ಹುದ್ದೆ	ಆಡಳಿತ ಮಂಡಳಿಯಲ್ಲಿ ಹುದ್ದೆ
01	ಜಿಲ್ಲಾ ಉಸ್ತುವಾರಿ ಸಚಿವರು	ಪದನಿಮಿತ್ತ ಟ್ರಸ್ಟಿ ಮತ್ತು ಅಧ್ಯಕ್ಷರು
02	ಜಿಲ್ಲೆಯನ್ನು ಪ್ರತಿನಿಧಿಸುವ ಸಂಸತ್ ಸದಸ್ಯರು.	ಪದನಿಮಿತ್ತ ಟ್ರಸ್ಟಿ
03	ಜಿಲ್ಲೆಯ ಒಂದು ಭಾಗವನ್ನು ಅಥವಾ ಇಡೀ ಜಿಲ್ಲೆಯನ್ನು ಪ್ರತಿನಿಧಿಸುವ ವಿಧಾನಸಭೆಯ ಸದಸ್ಯರು.	ಪದನಿಮಿತ್ತ ಟ್ರಸ್ಟಿ
04	ಜಿಲ್ಲೆಯಲ್ಲಿ ಮತದಾರರಾಗಿ ನೋಂದಾಯಿಸಲಾದ ವಿಧಾನ ಪರಿಷತ್ತಿನ ಸದಸ್ಯರು	ಪದನಿಮಿತ್ತ ಟ್ರಸ್ಟಿ
05	ಅಧ್ಯಕ್ಷರು, ಸಂಬಂಧಪಟ್ಟ ಜಿಲ್ಲಾ ಪಂಚಾಯತ್	ಪದನಿಮಿತ್ತ ಟ್ರಸ್ಟಿ
06	ಜಿಲ್ಲೆಯ ಉಪ ಆಯುಕ್ತರು	ಪದನಿಮಿತ್ತ ಟ್ರಸ್ಟಿ ಮತ್ತು ಸದಸ್ಯ ಕಾರ್ಯದರ್ಶಿ.
07	ಜಿಲ್ಲೆಯ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ	ಪದನಿಮಿತ್ತ ಟ್ರಸ್ಟಿ ಮತ್ತು ಅಧಿಕೃತ ಸಹಿದಾರರು
08	ಅರಣ್ಯ ಇಲಾಖೆಯ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ಅಥವಾ ಅರಣ್ಯ ಸಂರಕ್ಷಣಾಧಿಕಾರಿಗಳು (ಪ್ರಾದೇಶಿಕ)	ಪದನಿಮಿತ್ತ ಟ್ರಸ್ಟಿ
09	ಜಿಲ್ಲಾ ಆರೋಗ್ಯ ಅಧಿಕಾರಿ.	ಪದನಿಮಿತ್ತ ಟ್ರಸ್ಟಿ
10	ಜಿಲ್ಲಾ ಲೋಕೋಪಯೋಗಿ, ಒಳನಾಡು ಜಲ ಸಾರಿಗೆ ಮತ್ತು ಬಂದರು ಇಲಾಖೆಯ ಕಾರ್ಯನಿರ್ವಾಹಕ ಎಂಜಿನಿಯರ್	ಪದನಿಮಿತ್ತ ಟ್ರಸ್ಟಿ
11	ಜಿಲ್ಲಾ ಪಂಚಾಯತ್‌ನ ಕಾರ್ಯನಿರ್ವಾಹಕ ಎಂಜಿನಿಯರ್, ಜಿಲ್ಲೆಯಲ್ಲಿ ಗ್ರಾಮೀಣ ನೀರು ಸರಬರಾಜು ಉಸ್ತುವಾರಿ.	ಪದನಿಮಿತ್ತ ಟ್ರಸ್ಟಿ
12	ಜಿಲ್ಲಾ ಕೈಗಾರಿಕಾ ಕೇಂದ್ರ, ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ ಜಂಟಿ ನಿರ್ದೇಶಕರು.	ಪದನಿಮಿತ್ತ ಟ್ರಸ್ಟಿ
13	ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ನಾಮನಿರ್ದೇಶಿತರಾದ ಪರಿಸರ ಅಧಿಕಾರಿ.	ಪದನಿಮಿತ್ತ ಟ್ರಸ್ಟಿ
14	ಜಿಲ್ಲಾ ಉಸ್ತುವಾರಿ ಹೊಂದಿರುವ ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರು.	ಪದನಿಮಿತ್ತ ಟ್ರಸ್ಟಿ
15	ರಾಜ್ಯ ಸರ್ಕಾರದಿಂದ ನಾಮನಿರ್ದೇಶಿತರಾದ ಸಂಬಂಧಪಟ್ಟ ಜಿಲ್ಲೆಯಲ್ಲಿ ಖನಿಜಗಳನ್ನು ಬಳಸುವ ಕೈಗಾರಿಕೆಗಳಿಂದ ಇಬ್ಬರು ಪ್ರತಿನಿಧಿಗಳು	ನಾಮನಿರ್ದೇಶಿತ ಟ್ರಸ್ಟಿ
16	ರಾಜ್ಯ ಸರ್ಕಾರದಿಂದ ನಾಮನಿರ್ದೇಶಿತರಾದ ಸಂಬಂಧಪಟ್ಟ ಜಿಲ್ಲೆಗೆ ಸೇರಿದ ಖನಿಜ ಅಥವಾ ಸಣ್ಣ ಖನಿಜ ರಿಯಾಯಿತಿ ಹೊಂದಿರುವವರಿಂದ ಇಬ್ಬರು ಪ್ರತಿನಿಧಿಗಳು	ನಾಮನಿರ್ದೇಶಿತ ಟ್ರಸ್ಟಿ
17	ಸಂಬಂಧಿತ ಜಿಲ್ಲೆಯಲ್ಲಿ ಪರಿಸರ ಸಮಸ್ಯೆಗಳ ಕುರಿತು ಕೆಲಸ ಮಾಡುತ್ತಿರುವ ಪ್ರಮುಖ ಸರ್ಕಾರೇತರ ಸಂಸ್ಥೆ ಅಥವಾ ಯಾವುದೇ ಸಂಸ್ಥೆಯಿಂದ ಒಬ್ಬ ಪ್ರತಿನಿಧಿಯನ್ನು ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ನಾಮನಿರ್ದೇಶನ ಮಾಡಬೇಕು.	ನಾಮನಿರ್ದೇಶಿತ ಟ್ರಸ್ಟಿ
18	ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ನಾಮನಿರ್ದೇಶನ ಮಾಡಿದ ಬಾಧಿತ ಪ್ರದೇಶಗಳಿಂದ ಬಾಧಿತ ವ್ಯಕ್ತಿಗಳ ಸಮುದಾಯದ ಮೂವರು ಪ್ರತಿನಿಧಿಗಳು..	ನಾಮನಿರ್ದೇಶಿತ ಟ್ರಸ್ಟಿ
19	ಆಯಾ ಜಿಲ್ಲೆಯ ಗಣಿ ಮತ್ತು ಭೂವಿಜ್ಞಾನ ಇಲಾಖೆಯ ನಿರ್ದೇಶಕರ ಉಪ ನಿರ್ದೇಶಕರು ಅಥವಾ ಹಿರಿಯ ಭೂವಿಜ್ಞಾನಿಗಳು.	ಪದನಿಮಿತ್ತ ಟ್ರಸ್ಟಿ ಮತ್ತು ಸಂಚಾಲಕರು.

ಅನುಬಂಧ – 2

(ಕಂಡಿಕೆ 3.1ರಲ್ಲಿ ಉಲ್ಲೇಖಿಸಲಾಗಿದೆ)

2015–16ನೇ ಹಣಕಾಸು ವರ್ಷದಿಂದ 2022–23ನೇ ಸಾಲಿನವರೆಗಿನ ಜಿಲ್ಲಾವಾರು ಡಿಎಂಎಫ್ ಸಂಗ್ರಹ

(₹ ಕೋಟಿಯಲ್ಲಿ)

ಕ್ರಮ ಸಂಖ್ಯೆ.	ಜಿಲ್ಲೆ	2015-16	2016-17	2017-18	2018-19	2019-20	2020-21	2021-22	2022-23 (ಮಾರ್ಚ್ 2023)	ಒಟ್ಟು
1	ಬಳ್ಳಾರಿ	0.0090	137.87	390.94	246.59	231.32	277.91	269.50	358.42	1,912.55
2	ವಿಜಯನಗರ	0.0000	16.94	18.94	57.29	33.04	40.60	252.21	44.20	463.21
3	ಕಲಬುರಗಿ	0.0000	93.70	64.87	66.15	57.97	63.86	77.31	80.80	504.66
4	ಚಿತ್ರದುರ್ಗ	0.0000	9.13	45.38	34.33	64.38	68.33	113.10	87.84	422.49
5	ಬಾಗಲಕೋಟೆ	0.0000	19.92	12.42	13.51	13.49	12.57	17.04	15.44	104.40
6	ಕೊಪ್ಪಳ	0.0000	9.68	12.20	10.94	9.53	7.96	7.56	6.67	64.55
7	ರಾಯಚೂರು	0.0000	9.44	2.68	11.38	9.12	8.88	5.66	10.95	58.11
8	ಚಿಕ್ಕಬಳ್ಳಾಪುರ	0.0000	3.79	6.90	8.69	7.99	8.60	10.12	13.18	59.27
9	ರಾಮನಗರ	0.0000	4.60	6.80	7.77	7.91	8.33	8.15	6.10	49.66
10	ಬೆಂಗಳೂರು ನಗರ	0.0000	1.59	3.81	8.17	10.89	8.23	9.51	9.32	51.52
11	ತುಮಕೂರು	0.0000	3.73	5.54	7.08	6.10	8.57	8.70	7.61	47.33
12	ಬೆಂಗಳೂರು ಗ್ರಾಮಾಂತರ	0.0000	1.27	3.10	5.95	7.39	7.35	6.89	7.61	39.55
13	ಬೆಳಗಾವಿ	0.1765	1.91	4.98	4.94	5.41	5.87	10.23	10.41	43.93
14	ಚಾಮರಾಜನಗರ	0.0000	3.02	4.58	4.64	5.02	4.50	4.25	4.34	30.35
15	ಉತ್ತರ ಕನ್ನಡ	0.0000	3.64	3.77	1.30	1.95	1.14	0.98	2.66	15.45
16	ಹಾಸನ	0.0000	0.42	2.11	2.14	3.64	3.90	3.79	4.51	20.51
17	ದಕ್ಷಿಣ ಕನ್ನಡ	0.0000	0.95	1.71	2.43	1.99	1.98	1.70	3.19	13.95
18	ಉಡುಪಿ	0.0000	0.84	1.73	1.36	1.83	2.34	2.45	3.21	13.77
19	ಚಿಕ್ಕಮಗಳೂರು	0.0000	0.52	1.31	1.75	1.88	2.32	2.92	4.01	14.71
20	ಕೋಲಾರ	0.0000	0.44	1.13	1.79	1.53	3.17	3.71	3.40	15.17
21	ಗದಗ	0.0000	0.70	1.72	1.52	1.15	1.31	1.39	1.95	9.73

ಅನುಬಂಧ–2 (ಮುಂದುವರಿದಿದೆ)

ಕ್ರಮ ಸಂಖ್ಯೆ	ಜಿಲ್ಲೆ	2015-16	2016-17	2017-18	2018-19	2019-20	2020-21	2021-22	2022-23 (ಮಾರ್ಚ್ 2023)	ಒಟ್ಟು
22	ಧಾರವಾಡ	0.0000	0.54	0.86	1.51	1.55	1.56	1.41	1.28	8.71
23	ಹಾವೇರಿ	0.0000	0.28	1.55	1.08	1.68	1.16	0.68	1.16	7.58
24	ದಾವಣಗೆರೆ	0.0000	1.06	1.02	0.92	0.89	0.71	1.13	1.21	6.94
25	ವಿಜಯಪುರ	0.0000	0.48	1.90	0.58	0.65	1.10	0.58	0.38	5.67
26	ಮಂಡ್ಯ	0.0000	0.09	0.15	0.46	0.98	2.72	2.22	1.27	7.90
27	ಶಿವಮೊಗ್ಗ	0.0000	0.72	0.39	0.47	0.29	0.42	0.47	0.94	3.69
28	ಮೈಸೂರು	0.0140	0.13	0.28	0.34	0.40	0.59	0.57	0.62	2.94
29	ಬೀದರ್	0.0000	0.68	0.10	0.19	0.14	0.11	0.19	0.65	2.05
30	ಕೊಡಗು	0.0000	0.05	0.19	0.24	0.31	0.33	0.29	0.29	1.70
31	ಯಾದಗಿರಿ	0.0000	0.27	0.17	0.31	0.19	0.17	0.19	0.15	1.45
	ಒಟ್ಟು	**0.20**	**328.38**	**603.22**	**505.80**	**490.59**	**556.61**	**824.91**	**693.80**	**4,003.51**

ಅನುಬಂಧ – 3

(ಕಂಡಿಕೆ 3.1ರಲ್ಲಿ ಉಲ್ಲೇಖಿಸಲಾಗಿದೆ)

ಜಿಲ್ಲಾವಾರು ಡಿಎಂಎಫ್ ಸಂಗ್ರಹ, ಅನುಮೋದಿತ ಕ್ರಿಯಾ ಯೋಜನೆ, ಖರ್ಚು ಮತ್ತು ಕಾಮಗಾರಿಗಳ ಸ್ಥಿತಿ ವಿವರಗಳು – ಮಾರ್ಚ್ 2023

ಕ್ರಮ ಸಂಖ್ಯೆ	ಜಿಲ್ಲೆ	2015–16 ರಿಂದ ಮಾರ್ಚ್ 2023 ರವರೆಗಿನ ಡಿಎಂಎಫ್ ಸಂಗ್ರಹ	85 ಶೇಕಡಾ ಲಭ್ಯವಿರುವ ಮೊತ್ತ	ಒಟ್ಟು ಕಾಮಗಾರಿಗಳ ಸಂಖ್ಯೆ	ಅನುಮೋದಿತ ಕ್ರಿಯಾ ಯೋಜನೆ ಮೊತ್ತ	ಪಿಎಂಕೆಕೆಕೆವೈ ಕಾಮಗಾರಿಗಳು ಖರ್ಚು ಮಾಡಿದ ಮೊತ್ತ	ಕೋವಿಡ್ –19 ಚಟುವಟಿಕೆಗಳಿಗೆ ಮಾರ್ಚ್ 2023 ರವರೆಗೆ ಖರ್ಚು ಮಾಡಿದ ಮೊತ್ತ	ಒಟ್ಟು ಖರ್ಚು ಮಾಡಿದ ಮೊತ್ತ	ನಡೆಯುತ್ತಿರುವ ಕಾಮಗಾರಿಗಳ ಸಂಖ್ಯೆ	ಪೂರ್ಣಗೊಂಡ ಕಾಮಗಾರಿಗಳ ಸಂಖ್ಯೆ	ಇನ್ನೂ ಪ್ರಾರಂಭವಾಗಬೇಕಾದ ಕಾಮಗಾರಿಗಳ ಸಂಖ್ಯೆ	ರದ್ದುಗೊಳಿಸಿದ/ ರದ್ದುಪಡಿಸಿದ ಕಾಮಗಾರಿಗಳ ಸಂಖ್ಯೆ	ವೆಚ್ಚದ ಶೇಕಡಾವಾರು
1	ಬಳ್ಳಾರಿ	1,912.55	1,625.67	1,757	1,593.68	576.47	53.16	629.62	318	814	229	396	39%
2	ವಿಜಯನಗರ (ಹೊಸಪೇಟೆ)	463.21	393.73	1,400	753.33	333.79	0.00	333.79	321	536	341	202	85%
3	ಕಲಬುರಗಿ	504.66	428.96	1,343	540.84	104.63	59.51	164.14	177	868	251	47	38%
4	ಚಿತ್ರದುರ್ಗ	422.49	359.11	304	319.40	214.19	40.34	254.52	162	90	43	9	71%
5	ಬಾಗಲಕೋಟೆ	104.40	88.74	349	114.10	71.43	3.86	75.29	59	218	68	4	85%
6	ಕೊಪ್ಪಳ	64.55	54.87	466	88.91	39.53	5.43	44.96	131	158	177	0	82%
7	ರಾಯಚೂರು	58.11	49.39	178	70.23	38.86	3.86	42.72	99	43	5	31	86%
8	ಚಿಕ್ಕಬಳ್ಳಾಪುರ	59.27	50.38	151	78.03	25.60	4.39	29.99	46	60	16	29	60%
9	ರಾಮನಗರ	49.66	42.21	627	36.06	27.91	6.19	34.11	178	356	30	63	81%
10	ಬೆಂಗಳೂರು ನಗರ	51.52	43.79	607	76.35	38.22	4.52	42.74	84	360	141	22	98%
11	ತುಮಕೂರು	47.33	40.23	799	49.96	33.58	5.64	39.22	23	277	304	195	97%
12	ಬೆಳಗಾವಿ	43.93	37.34	267	29.61	25.17	3.74	28.91	80	41	146	0	77%
13	ಬೆಂಗಳೂರು ಗ್ರಾಮಾಂತರ	39.55	33.62	888	36.86	20.49	2.63	23.12	458	309	95	26	69%
14	ಚಾಮರಾಜನಗರ	30.35	25.80	60	24.08	10.51	2.97	13.48	17	13	22	8	52%
15	ಹಾಸನ	20.51	17.43	337	12.53	10.99	0.15	11.14	34	290	5	8	64%
16	ಉತ್ತರ ಕನ್ನಡ	15.45	13.13	97	7.62	6.89	0.44	7.33	6	84	1	6	56%
17	ಕೋಲಾರ	15.17	12.89	160	5.93	2.63	0.76	3.39	78	82	0	0	26%
18	ದಕ್ಷಿಣ ಕನ್ನಡ	13.95	11.86	55	3.05	2.75	1.52	4.27	9	43	2	1	36%
19	ಚಿಕ್ಕಮಗಳೂರು	14.71	12.50	203	12.33	7.03	0.00	7.03	49	46	84	24	56%
20	ಉಡುಪಿ	13.77	11.70	257	9.04	7.33	1.19	8.52	135	94	24	4	73%
21	ಗದಗ	9.73	8.27	92	4.94	3.70	0.60	4.30	20	43	29	0	52%
22	ಧಾರವಾಡ	8.71	7.41	128	6.94	5.17	1.00	6.17	2	107	19	0	83%

ಅನುಬಂಧ–3 (ಮುಂದುವರಿದಿದೆ)

ಕ್ರಮ ಸಂಖ್ಯೆ	ಜಿಲ್ಲೆ	2015–16 ರಿಂದ ಮಾರ್ಚ್ 2023 ರವರೆಗಿನ ಡಿಎಂಎಫ್ ಸಂಗ್ರಹ	85 ಶೇಕಡಾ ಲಭ್ಯವಿರುವ ಮೊತ್ತ	ಒಟ್ಟು ಕಾಮಗಾರಿಗಳ ಸಂಖ್ಯೆ	ಅನುಮೋದಿತ ಕ್ರಿಯಾ ಯೋಜನೆ ಮೊತ್ತ	ಪಿಎಂಕೆಕೆಕೆವೈ ಕಾಮಗಾರಿಗಳು ಖರ್ಚು ಮಾಡಿದ ಮೊತ್ತ	ಕೋವಿಡ್ –19 ಚಟುವಟಿಕೆಗಳಿಗೆ ಮಾರ್ಚ್ 2023 ರವರೆಗೆ ಖರ್ಚು ಮಾಡಿದ ಮೊತ್ತ	ಒಟ್ಟು ಖರ್ಚು ಮಾಡಿದ ಮೊತ್ತ	ನಡೆಯುತ್ತಿರುವ ಕಾಮಗಾರಿಗಳ ಸಂಖ್ಯೆ	ಪೂರ್ಣಗೊಂಡ ಕಾಮಗಾರಿಗಳ ಸಂಖ್ಯೆ	ಇನ್ನೂ ಪ್ರಾರಂಭವಾಗಬೇಕಾದ ಕಾಮಗಾರಿಗಳ ಸಂಖ್ಯೆ	ರದ್ದುಗೊಳಿಸಿದ/ ರದ್ದುಪಡಿಸಿದ ಕಾಮಗಾರಿಗಳ ಸಂಖ್ಯೆ	ವೆಚ್ಚದ ಶೇಕಡಾವಾರು
23	ಮಂಡ್ಯ	7.90	6.71	107	6.56	4.58	0.24	4.82	67	20	20	0	72%
24	ಹಾವೇರಿ	7.58	6.44	122	7.88	1.74	0.94	2.67	8	13	99	2	41%
25	ದಾವಣಗೆರೆ	6.94	5.90	14	5.32	5.10	0.16	5.26	4	10	0	0	89%
26	ವಿಜಯಪುರ	5.67	4.82	33	4.49	2.29	0.55	2.84	7	6	20	0	59%
27	ಶಿವಮೊಗ್ಗ	3.69	3.14	19	0.57	0.28	0.39	0.68	0	10	9	0	22%
28	ಮೈಸೂರು	2.94	2.50	8	1.77	0.10	0.23	0.33	6	1	1	0	13%
29	ಕೊಡಗು	1.70	1.44	17	0.73	0.49	0.20	0.69	16	1	0	0	48%
30	ಬೀದರ್	2.05	1.75	9	0.48	0.00	0.10	0.10	0	0	9	0	6%
31	ಯಾದಗಿರಿ	1.45	1.23	11	0.37	0.31	0.00	0.31	0	11	0	0	25%
	ಒಟ್ಟು ಮೊತ್ತ	**4,003.51**	**3,402.98**	**1,0865**	**3,902.00**	**1,621.74**	**204.72**	**1,826.46**	**2,594**	**5,004**	**2,190**	**1,077**	**54%**

ಅನುಬಂಧ – 4

(ಕಂಡಿಕೆ 4.7ರಲ್ಲಿ ಉಲ್ಲೇಖಿಸಲಾಗಿದೆ)

2016–17 ರಿಂದ 2022–23 ರವರೆಗೆ ನಡೆದ ವ್ಯವಸ್ಥಾಪಕ ಸಮಿತಿ ಮತ್ತು ಆಡಳಿತ ಮಂಡಳಿಯ ಸಭೆಗಳನ್ನು ತೋರಿಸುವ ತ:ಖ್ತೆ

I. ವ್ಯವಸ್ಥಾಪಕ ಸಮಿತಿ										
ಕ್ರಮ ಸಂಖ್ಯೆ	**ಜಿಲ್ಲೆ**	**ಸಭೆಗಳು**	**ಹಣಕಾಸು ವರ್ಷ**							**ಒಟ್ಟು ಸಭೆಗಳ ಸಂಖ್ಯೆ**
			2016-17	**2017 -18**	**2018-19**	**2019-20**	**2020-21**	**2021-22**	**2022-23**	
1	**ಚಿತ್ರದುರ್ಗ**	MC	ಶೂನ್ಯ (0)	ಶೂನ್ಯ (0)	ಶೂನ್ಯ (0)	30/11/2019, 15/02/2020 (2)	12/06/2020, 25/09/2022, 18/11/2020 (3)	21/04/2021, 09/08/2021, 21/01/2022 (3)	16/06/2022, 30/09/2022 (2)	10
2	**ಬಳ್ಳಾರಿ**	MC	ಶೂನ್ಯ (0)	17/5/2017, 17/8/2017, 25/1/2018, 27/2/2018 (4)	ಶೂನ್ಯ (0)	29/11/2019, 23/12/2019, 28/1/2020, 27/2/2020, 23/3/2020, (5)	12/10/2020, 1/12/2020 (2)	ಶೂನ್ಯ (0)	ಶೂನ್ಯ (0)	11
3	**ಗದಗ**	MC	ಶೂನ್ಯ (0)	ಶೂನ್ಯ (0)	ಶೂನ್ಯ (0)	21.03.2020 (1)	31.12.2020 (1)	ಶೂನ್ಯ (0)	ಶೂನ್ಯ (0)	2
4	**ಬೆಂಗಳೂರು ನಗರ**	MC	ಶೂನ್ಯ (0)	20.11.2017 (1)	ಶೂನ್ಯ (0)	ಶೂನ್ಯ (0)	29/05/2020 (1)	18/11/2022 (1)	ಶೂನ್ಯ (0)	3
5	**ವಿಜಯನಗರ**	MC	ಅನ್ವಯಿಸುವುದಿಲ್ಲ (ಜಿಲ್ಲೆಯನ್ನು ಫೆಬ್ರವರಿ 2021 ರಲ್ಲಿ ರಚಿಸಲಾಯಿತು ಮತ್ತು ಡಿಎಂಎಫ್‌ಟಿ ಅನ್ನು ಅಕ್ಟೋಬರ್ 2021 ರಲ್ಲಿ ರಚಿಸಲಾಯಿತು)					02.12.2021, 14.01.2022 (2)	16.11.2022, 27.03.2023 (2)	4

ಅನುಬಂಧ–4 (ಮುಂದುವರಿದಿದೆ)

II. ಆಡಳಿತ ಮಂಡಳಿ										
ಕ್ರಮ ಸಂಖ್ಯೆ	ಜಿಲ್ಲೆ	ಸಭೆಗಳು	ಹಣಕಾಸು ವರ್ಷ							ಒಟ್ಟು ಸಭೆಗಳ ಸಂಖ್ಯೆ
			2016-17	2017 -18	2018-19	2019-20	2020-21	2021-22	2022-23	
1	ಚಿತ್ರದುರ್ಗ	GC	ಶೂನ್ಯ (0)	27/11/2017, 10/12/2017 (2)	11/9/20218, 8/3/2019 (2)	19/10/2019, 5/7/2019 4/11/2019 (3)	28/11/2020, 15/7/2020, 8/5/2020 (3)	ಶೂನ್ಯ (0)	ಶೂನ್ಯ (0)	10
2	ಬಳ್ಳಾರಿ	GC	15/12/2016 (1)	NIL (0)	19/11/2018, 19/11/2019, 26/2/2019 (3)	22/10/2019 (1)	29/9/2020 (1)	ಶೂನ್ಯ (0)	ಶೂನ್ಯ (0)	6
3	ಗದಗ	GC	ಶೂನ್ಯ (0)	29.11.2017 (1)	ಶೂನ್ಯ (0)	ಶೂನ್ಯ (0)	ಶೂನ್ಯ (0)	06.04.2021 (1)	17.03.2023 (1)	3
4	ಬೆಂಗಳೂರು ನಗರ	GC	ಶೂನ್ಯ (0)	28.12.2017 (1)	ಶೂನ್ಯ (0)	ಶೂನ್ಯ (0)	14.09.2020 (1)	13.01.2022 (1)	ಶೂನ್ಯ (0)	3
5	ವಿಜಯನಗರ	GC	ಅನ್ವಯಿಸುವುದಿಲ್ಲ (ಜಿಲ್ಲೆಯನ್ನು ಫೆಬ್ರವರಿ 2021 ರಲ್ಲಿ ರಚಿಸಲಾಯಿತು ಮತ್ತು ಡಿಎಂಎಫ್‌ಟಿ ಅನ್ನು ಅಕ್ಟೋಬರ್ 2021 ರಲ್ಲಿ ರಚಿಸಲಾಯಿತು)					ಶೂನ್ಯ (0)	30/04/2022, 05/12/2022, 27/01/2023, 14.08.2023 (4)	4

ಅನುಬಂಧ – 5

(ಕಂಡಿಕೆ 5.4ರಲ್ಲಿ ಉಲ್ಲೇಖಿಸಲಾಗಿದೆ)

ಟೆಂಡರ್ ಕರೆಯದೆ ನಿರ್ಮಿತಿ ಕೇಂದ್ರಕ್ಕೆ ನೀಡಲಾದ ಕಾಮಗಾರಿಗಳನ್ನು ತೋರಿಸುವ ತ:ಖ್ತೆ

ಕ್ರಮ ಸಂಖ್ಯೆ	ಕೆಲಸದ ಹೆಸರು	ಕ್ರಿಯಾ ಯೋಜನೆ (₹ ಲಕ್ಷದಲ್ಲಿ)	ವೆಚ್ಚ (₹ ಲಕ್ಷದಲ್ಲಿ)	ಕ್ರಿಯಾ ಯೋಜನೆ	ಡಿಎಂಎಫ್‌ಟಿ ಆಡಳಿತ ಮಂಡಳಿ ಅನುಮೋದನೆ ದಿನಾಂಕ	ಟಿಪ್ಪಣಿಗಳು
1	ಬಳ್ಳಾರಿಯ ತಾರಾನಾಥ ಆಯುರ್ವೇದ ಕಾಲೇಜಿನಲ್ಲಿ ನವೀಕರಣ ಮತ್ತು ಪುನರ್ನಿರ್ಮಾಣ–1 ಬಳ್ಳಾರಿಯ ತಾರಾನಾಥ ಆಯುರ್ವೇದ ಕಾಲೇಜಿನಲ್ಲಿ ಆಯುರ್ವೇದ ವಿದ್ಯಾರ್ಥಿಗಳಿಗಾಗಿ ಬಾಲಕರ ಹಾಸ್ಟೆಲ್ ನಿರ್ಮಾಣ (ನೆಲಮಹಡಿ) (316)	175	163.95	III	19-01-2019 & 26-02-2019	
2	ಬಳ್ಳಾರಿಯ ತಾರಾನಾಥ ಆಯುರ್ವೇದ ಕಾಲೇಜಿನಲ್ಲಿ ನವೀಕರಣ ಮತ್ತು ಪುನರ್ನಿರ್ಮಾಣ–1 ಬಳ್ಳಾರಿಯ ತಾರಾನಾಥ ಆಯುರ್ವೇದ ಕಾಲೇಜಿನಲ್ಲಿ ಆಯುರ್ವೇದ ವಿದ್ಯಾರ್ಥಿಗಳಿಗಾಗಿ ಬಾಲಕರ ಹಾಸ್ಟೆಲ್ (ಮೊದಲ ಮಹಡಿ ಮತ್ತು ಮೂಲಸೌಕರ್ಯ) ನಿರ್ಮಾಣ (316)	125	116.51	III	Do	
3	ತಾರಾನಾಥ ಆಯುರ್ವೇದ ಕಾಲೇಜಿಗೆ ವೈದ್ಯಕೀಯ ಉಪಕರಣಗಳ ಖರೀದಿ	140	44.31	III	Do	
4	ಬಳ್ಳಾರಿಯ ತಾರಾನಾಥ್ ಸರ್ಕಾರಿ ಆಯುರ್ವೇದ ವೈದ್ಯಕೀಯ ಕಾಲೇಜಿನಲ್ಲಿ ರೋಗಶಾಸ್ತ್ರ, ಆಂಡ್ರಾಲಜಿ ಮತ್ತು ಸೆಮಿನಾರ್ ಹಾಲ್ ನವೀಕರಣ".	55.054	54.8	III	Do	
5	1) ಬೊಮ್ಮಘಟ್ಟ 2) ಚೋರನೂರು 3) ಸಂಡೂರು ಪಟ್ಟಣ 4) ಹೊಸದರೋಜಿ 5) ಸಂಡೂರು ಪಟ್ಟಣ 6) ಸಂಡೂರು ಪಟ್ಟಣದಲ್ಲಿರುವ ಮೆಟ್ರಿಕ್ ಪೂರ್ವ/ಮೆಟ್ರಿಕ್ ನಂತರದ ಬಾಲಕಿಯರ/ಬಾಲಕರ ವಸತಿ ನಿಲಯಗಳ ದುರಸ್ತಿ ಮತ್ತು ಮೂಲಭೂತ ಸೌಲಭ್ಯಗಳನ್ನು ಒದಗಿಸುವುದು.	280		VI	29-09-2020	
6	1)ಚೋರನೂರು 2)ಸಂಡೂರಿನಲ್ಲಿರುವ ಮೆಟ್ರಿಕ್ ಪೂರ್ವ/ಮೆಟ್ರಿಕ್ ನಂತರದ ಬಾಲಕಿಯರ/ಬಾಲಕರ ವಸತಿ ನಿಲಯಗಳ ದುರಸ್ತಿ ಮತ್ತು ಮೂಲಭೂತ ಸೌಲಭ್ಯಗಳನ್ನು ಒದಗಿಸುವುದು.	260		VI	do	
7	ಬಳ್ಳಾರಿ ನಗರದ ಒಳಗಿನ ಹಂತ–I ನಲ್ಲಚೆರವು (ಸರೋವರ ಅಭಿವೃದ್ಧಿ, ಬಂಡ್ ಪಿಚ್ಚಿಂಗ್, ಹೂಳೆತ್ತುವಿಕೆ ಮತ್ತು ಚೈನ್ ಲಿಂಕ್ ಮೆಶ್ ಫೆನ್ಸಿಂಗ್) (807)	185	171.24	I	15-12-2016	
8	ಬಳ್ಳಾರಿಯ ನಲ್ಲಚೆರವು ಕೆರೆಗೆ ಪೇವರ್ಸ್ ಒದಗಿಸುವುದು. (1355)	73	70.77	I	do	
9	ಬಳ್ಳಾರಿ ಜಿಲ್ಲೆಯಲ್ಲಿ ಹಾಕಿ ಕೋರ್ಟ್ ನಿರ್ಮಾಣ ಸಿಂಥೆಟಿಕ್ ಟರ್ಫಿಂಗ್ ಕೆಲಸ (584)	176.15	174.58	II	19-11-2018	
10	ಬಳ್ಳಾರಿ ಜಿಲ್ಲೆಯಲ್ಲಿ ಹಾಕಿ ಕೋರ್ಟ್ ನಿರ್ಮಾಣ ಅಡಿಪಾಯ ಕಾಮಗಾರಿ (584)	93.85	90.02	II	do	
11	ಬಳ್ಳಾರಿ ಜಿಲ್ಲೆಯ ಸಂಡೂರು ತಾಲ್ಲೂಕಿನಲ್ಲಿ ಒಳಾಂಗಣ ಕ್ರೀಡಾಂಗಣ ನಿರ್ಮಾಣ (597)	200	100	III	19-01-2019 & 26-02-2019	
12	ಬಳ್ಳಾರಿ ಜಿಲ್ಲೆಯ ಸಂಡೂರು ತಾಲ್ಲೂಕಿನಲ್ಲಿ ಒಳಾಂಗಣ ಕ್ರೀಡಾಂಗಣ ನಿರ್ಮಾಣ (ಭಾಗ–ಬಿ) (597)	100	75	III	do	
13	ಬಳ್ಳಾರಿ ಜಿಲ್ಲೆ ಕುಡುತಿನಿ ಕ್ರೀಡಾಂಗಣದಲ್ಲಿ 200 ಮೀಟರ್ ಓಟದ ಟ್ರ್ಯಾಕ್ ನಿರ್ಮಾಣ ಭಾಗ–1 (268)	200	100	III	19-01-2019 & 26-02-2019	
14	ಬಳ್ಳಾರಿ ಜಿಲ್ಲೆಯ ಕುರುಗೋಡು ಮತ್ತು ಕಂಪ್ಲಿ ತಾಲ್ಲೂಕುಗಳ ವಿದ್ಯಾರ್ಥಿಗಳಿಗೆ ಸಹಾಯ ಮಾಡುವ ಉದ್ದೇಶದಿಂದ ಕುರುಗೋಡು ವಿಭಾಗಕ್ಕೆ ಮೂರು ಬಸ್ಸುಗಳ ಖರೀದಿಗೆ ಅನುದಾನ (51).	120	**120**	IV	do	
15	ಬಳ್ಳಾರಿಯ ಶ್ರೀರಾಂಪುರ ಕಾಲೋನಿಯಲ್ಲಿ ನೆಲ ಮಹಡಿ ಶಾಲಾ ಕಟ್ಟಡ ನಿರ್ಮಾಣ (615 & 652)	200	100	VI	19-01-2019 & 26-02-2019	
16	ಬಳ್ಳಾರಿಯ ಶ್ರೀರಾಂಪುರ ಕಾಲೋನಿಯಲ್ಲಿ ಮೊದಲ ಮಹಡಿ ಶಾಲಾ ಕಟ್ಟಡ ನಿರ್ಮಾಣ (652)	160	80	VI	do	

ಅನುಬಂಧ – 6

(ಕಂಡಿಕೆ 5.7.3ರಲ್ಲಿ ಉಲ್ಲೇಖಿಸಲಾಗಿದೆ)

ಚಿತ್ರದುರ್ಗ ಜಿಲ್ಲೆಯ ಭರಮಸಾಗರ ಮತ್ತು ತಾಳ್ಯ ಹೋಬಳಿಯಲ್ಲಿ ಜಂಟಿ ಭೌತಿಕ ತಪಾಸಣೆಯ ಸಮಯದಲ್ಲಿ ಗಮನಕ್ಕೆ ಬಂದ ಶಾಲಾವಾರು ಸಮಸ್ಯೆಗಳು

ಕ್ರಮ ಸಂಖ್ಯೆ	ಶಾಲೆಗಳ ಹೆಸರು	ಲೆಕ್ಕಪರಿಶೋಧನಾ ಟಿಪ್ಪಣಿಗಳು
1	ಡಿ ಮದಕರಿಪುರ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಚಿತ್ರದುರ್ಗ ತಾಲ್ಲೂಕು	ಒಂದು ಲೆನೊವೊ ಕಂಪ್ಯೂಟರ್ ಅನುಸ್ಥಾಪನೆಯ ದಿನಾಂಕದಿಂದ ಕಾರ್ಯನಿರ್ವಹಿಸುತ್ತಿಲ್ಲ. ಪ್ರಿಂಟರ್ ಸಹ ಕಾರ್ಯನಿರ್ವಹಿಸುತ್ತಿಲ್ಲ
2	ಕೊಳಹಾಲ್ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಚಿತ್ರದುರ್ಗ ತಾಲ್ಲೂಕು	ಪ್ರಿಂಟರ್ ಕಾರ್ಯನಿರ್ವಹಿಸುತ್ತಿಲ್ಲ
3	ಹುಲ್ಲೇಹಾಳ್ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಚಿತ್ರದುರ್ಗ ತಾಲ್ಲೂಕು	ಪ್ರಿಂಟರ್ ಕಾರ್ಯನಿರ್ವಹಿಸುತ್ತಿಲ್ಲ
4	ಬೇಡರಶಿವನಕೆರೆ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಚಿತ್ರದುರ್ಗ ತಾಲ್ಲೂಕು	ಪ್ರಿಂಟರ್ ಕಾರ್ಯನಿರ್ವಹಿಸುತ್ತಿಲ್ಲ
5	ಬೈಲಹಾಳ್ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಚಿತ್ರದುರ್ಗ ತಾಲ್ಲೂಕು	ಪ್ರಿಂಟರ್ ಕಾರ್ಯನಿರ್ವಹಿಸುತ್ತಿಲ್ಲ
6	ಬಸವನಶಿವನಕೆರೆ ಸರಕಾರಿ ಹಿರಿಯ ಪ್ರಾಥಮಿಕ ಶಾಲೆ, ಚಿತ್ರದುರ್ಗ ತಾಲ್ಲೂಕು	ಪ್ರಿಂಟರ್ ಕಾರ್ಯನಿರ್ವಹಿಸುತ್ತಿಲ್ಲ
7	ಹನುಮನಹಳ್ಳಿ ಸರಕಾರಿ ಹಿರಿಯ ಪ್ರಾಥಮಿಕ ಶಾಲೆ, ಹೊಳಲ್ಕೆರೆ ತಾಲ್ಲುಕು.	ಈ ಶಾಲೆಯಲ್ಲಿ ಕೇವಲ 3 ವಿದ್ಯಾರ್ಥಿಗಳು ಮತ್ತು ಒಬ್ಬ ಶಿಕ್ಷಕರು ಇರುವುದರಿಂದ ಈ ಶಾಲೆಗೆ ನೀಡಲಾದ ಕಂಪ್ಯೂಟರ್‌ಗಳು ಮತ್ತು ಬಾಹ್ಯ ಉಪಕರಣಗಳು ಬಳಕೆಯಲ್ಲಿಲ್ಲ. ನೀಡಲಾದ ಕಂಪ್ಯೂಟರ್ ಅನ್ನು ಸಹ ನಿಯೋಜಿಸಲಾಗಿಲ್ಲ ಮತ್ತು ಪೆಟ್ಟಿಗೆಯಲ್ಲಿ ಇರಿಸಲಾಗಿದೆ
8	ಚಿಕ್ಕೇನಹಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಹೊಳಲ್ಕೆರೆ ತಾಲ್ಲೂಕು	ಶಾಲೆಯಲ್ಲಿ ತರಬೇತಿ ಪಡೆದ ಕಂಪ್ಯೂಟರ್ ಶಿಕ್ಷಕರು ಇಲ್ಲದ ಕಾರಣ ಕಂಪ್ಯೂಟರ್‌ಗಳು ಮತ್ತು ಪೆರಿಫೆರಲ್‌ಗಳು ಬಳಕೆಯಲ್ಲಿ ಇರಲಿಲ್ಲ.
9	ಬೇವಿನಹಳ್ಳಿ ಸರಕಾರಿ ಹಿರಿಯ ಪ್ರಾಥಮಿಕ ಶಾಲೆ, ಹೊಳಲ್ಕೆರೆ ತಾಲೂಕು	ಪ್ರಿಂಟರ್ ಕಾರ್ಯನಿರ್ವಹಿಸುತ್ತಿಲ್ಲ
10	ಕರಿಯಮನಹಟ್ಟಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಚಿತ್ರದುರ್ಗ ತಾಲ್ಲೂಕು	ಪ್ರಿಂಟರ್ ಕಾರ್ಯನಿರ್ವಹಿಸುತ್ತಿಲ್ಲ
11	ಹಳೇರಂಗಾಪುರ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಚಿತ್ರದುರ್ಗ ತಾಲ್ಲೂಕು	ಪ್ರಿಂಟರ್ ಕಾರ್ಯನಿರ್ವಹಿಸುತ್ತಿಲ್ಲ
12	ಕಲ್ಕೆರೆ ಸರಕಾರಿ ಹಿರಿಯ ಪ್ರಾಥಮಿಕ ಶಾಲೆ, ಚಿತ್ರದುರ್ಗ ತಾಲ್ಲೂಕು	ಪ್ರಿಂಟರ್ ಕಾರ್ಯನಿರ್ವಹಿಸುತ್ತಿಲ್ಲ
13	ಹೆಗ್ಗೆರೆ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಚಿತ್ರದುರ್ಗ ತಾಲ್ಲೂಕು.	ಪ್ರಿಂಟರ್ ಕಾರ್ಯನಿರ್ವಹಿಸುತ್ತಿಲ್ಲ
14	ಇಚಗಟ್ಟ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಹೊಳಲ್ಕೆರೆ ತಾಲ್ಲೂಕು	ಗೋಡೆಗಳಲ್ಲಿ ನೀರು ಸೋರುತ್ತಿದ್ದ ಕಾರಣ ಕೊಠಡಿ ಕೆಟ್ಟ ಸ್ಥಿತಿಯಲ್ಲಿತ್ತು. ಆದ್ದರಿಂದ, ಐದು ಕಂಪ್ಯೂಟರ್‌ಗಳನ್ನು ಅಳವಡಿಸಲಾಗಿಲ್ಲ.
15	ಟಿ ನುಲೇನೂರು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಹೊಳಲ್ಕೆರೆ ತಾಲ್ಲೂಕು	ಪ್ರಿಂಟರ್ ಕಾರ್ಯನಿರ್ವಹಿಸುತ್ತಿಲ್ಲ
16	ಬಿ ಜಿ ಹಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಚಿತ್ರದುರ್ಗ ತಾಲ್ಲೂಕು	ಕಿಯೋನಿಕ್ಸ್ ನಿಂದ ಕಂಪ್ಯೂಟರ್ ಕುರ್ಚಿಗಳನ್ನು ಪೂರೈಸದ ಕಾರಣ, ಎಲ್ಲಾ ಐದು ಕಂಪ್ಯೂಟರ್‌ಗಳನ್ನು ಬಳಸಲಾಗಲಿಲ್ಲ.
17	ಮಥಿಗಟ್ಟ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಹೊಳಲ್ಕೆರೆ ತಾಲ್ಲೂಕು	ಕಂಪ್ಯೂಟರ್ ಕೋಣೆಗೆ ವಿದ್ಯುತ್ ಸಂಪರ್ಕ ನೀಡದ ಕಾರಣ ಕಂಪ್ಯೂಟರ್‌ಗಳನ್ನು ಬಳಸಲಾಗಲಿಲ್ಲ.
18	ಗಿಳಿಕೇನಹಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಹೊಳಲ್ಕೆರೆ ತಾಲ್ಲೂಕು	ಐದು ಕಂಪ್ಯೂಟರ್‌ಗಳು ಕಾರ್ಯನಿರ್ವಹಿಸುವ ಸ್ಥಿತಿಯಲ್ಲಿ (ಮಾನಿಟರ್) ಇಲ್ಲದ ಕಾರಣ ಮತ್ತು ಪ್ರಿಂಟರ್ ಸಹ ಕಾರ್ಯನಿರ್ವಹಿಸದ ಕಾರಣ ಅವುಗಳನ್ನು ಬಳಕೆಗೆ ತರಲಾಗಿಲ

ಅನುಬಂಧ–6 (ಮುಂದುವರಿದಿದೆ)

ಕ್ರಮ ಸಂಖ್ಯೆ	ಶಾಲೆಗಳ ಹೆಸರು	ಲೆಕ್ಕಪರಿಶೋಧನಾ ಟಿಪ್ಪಣಿಗಳು
19	ಹಳೇಹಳ್ಳಿ ಸರ್ಕಾರಿ ಶಾಲೆ, ಚಿತ್ರದುರ್ಗ ತಾಲ್ಲೂಕು	ಐದು ಕಂಪ್ಯೂಟರ್‌ಗಳು ಕಾರ್ಯನಿರ್ವಹಿಸುವ ಸ್ಥಿತಿಯಲ್ಲಿ (ಮಾನಿಟರ್) ಇಲ್ಲದ ಕಾರಣ ಮತ್ತು ಪ್ರಿಂಟರ್ ಸಹ ಕಾರ್ಯನಿರ್ವಹಿಸದ ಕಾರಣ ಅವುಗಳನ್ನು ಬಳಕೆಗೆ ತರಲಾಗಿಲ್ಲ.
20	ಕಾಶಿಪುರ ಸರ್ಕಾರಿ ಶಾಲೆ, ಹೊಳಲ್ಕೆರೆ ತಾಲ್ಲೂಕು	ಪ್ರಿಂಟರ್ ಕಾರ್ಯನಿರ್ವಹಿಸುತ್ತಿಲ್ಲ
21	ಮದ್ದೇರು ಸರ್ಕಾರಿ ಶಾಲೆ, ಹೊಳಲ್ಕೆರೆ ತಾಲ್ಲೂಕು	ಪ್ರಿಂಟರ್ ಕಾರ್ಯನಿರ್ವಹಿಸುತ್ತಿಲ್ಲ
22	ಕಣಿವೆಜೋಗಿಹಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಹೊಳಲ್ಕೆರೆ ತಾಲ್ಲೂಕು	ಕಿಯೋನಿಕ್ಸ್ ಪೂರೈಸಿದ ಕಂಪ್ಯೂಟರ್ ಟೇಬಲ್‌ಗಳು ಮಾತ್ರ ಇದ್ದವು. ಆದರೆ ಮೂರನೇ ವ್ಯಕ್ತಿಯ ತಪಾಸಣೆ ವರದಿಯ ಪ್ರಕಾರ, ಎಲ್ಲಾ ಐದು ಕಂಪ್ಯೂಟರ್‌ಗಳಲ್ಲಿ ಪೆರಿಫೆರಲ್‌ಗಳನ್ನು ಅಳವಡಿಸಲಾಗಿತ್ತು.
23	ಕೊಳಲ್ಹಾಳ್ ಸರ್ಕಾರಿ ಶಾಲೆ, ಹೊಳಲ್ಕೆರೆ ಟಕ್ಲಕ್	ಐದು ಕಂಪ್ಯೂಟರ್‌ಗಳು ಕಾರ್ಯನಿರ್ವಹಿಸುವ ಸ್ಥಿತಿಯಲ್ಲಿಲ್ಲದ ಕಾರಣ (ಮಾನಿಟರ್) ಮತ್ತು ಪ್ರಿಂಟರ್ ಸಹ ಕಾರ್ಯನಿರ್ವಹಿಸದ ಕಾರಣ ಅವುಗಳನ್ನು ಬಳಕೆಗೆ ತರಲಾಗಿಲ್ಲ.
24	ನಂದನಹೊಸುರು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಹೊಳಲ್ಕೆರೆ ತಾಲ್ಲೂಕು	ಪ್ರಿಂಟರ್ ಕಾರ್ಯನಿರ್ವಹಿಸುತ್ತಿಲ್ಲ

ಅನುಬಂಧ – 7

(ಕಂಡಿಕೆ 5.7.4ರಲ್ಲಿ ಉಲ್ಲೇಖಿಸಲಾಗಿದೆ)

ಶಾಲೆಗಳಲ್ಲಿ ಪ್ರೊಜೆಕ್ಟರ್‌ಗಳನ್ನು ಬಳಸದಿರಲು ಕಾರಣಗಳು

ಕ್ರಮ ಸಂಖ್ಯೆ	ಕೆಲಸದ ಹೆಸರು	ತಾಲ್ಲೂಕು	ಯೋಜನೆಯ ವೆಚ್ಚ	ಜೆಪಿವಿ ಅವಲೋಕನಗಳು
1	ಬೆಂಗಳೂರು ಉತ್ತರದ ದೊಡ್ಡಬೆಟ್ಟಹಳ್ಳಿಯಲ್ಲಿರುವ ಸರ್ಕಾರಿ ಶಾಲಾ ಕಟ್ಟಡಗಳಿಗೆ ಸ್ಮಾರ್ಟ್ ಕ್ಲಾಸ್ ರೂಮ್‌ಗಳು – ₹ 1.50 ಲಕ್ಷ.	ಬೆಂಗಳೂರು ಉತ್ತರ	1.50	ಶಾಲೆಯಲ್ಲಿ ಪ್ರೊಜೆಕ್ಟರ್ ಲಭ್ಯವಿರಲಿಲ್ಲ. ಬಿಳಿ ಬೋರ್ಡ್ ಮತ್ತು ಸ್ಟ್ಯಾಂಡ್ ಲಭ್ಯವಿದ್ದು, ಪ್ರೊಜೆಕ್ಟರ್ ಅನ್ನು ಯೋಜನೆಯ ಮೂಲಕ ಪೂರೈಸಲಾಗಿದೆ ಎಂದು ಸೂಚಿಸುತ್ತದೆ. ಶಾಲೆಯು ಎಲ್‌ಇಡಿ ಸಂವಾದಾತ್ಮಕ ಪರದೆಗಳನ್ನು ಹೊಂದಿತ್ತು ಮತ್ತು ಆದ್ದರಿಂದ ಶಾಲೆಗೆ ಪ್ರೊಜೆಕ್ಟರ್ ಅಗತ್ಯವಿಲ್ಲ ಎಂದು ತೋರುತ್ತದೆ.
2	ಯಲಹಂಕ ಉಪನಗರದಲ್ಲಿರುವ ಸರ್ಕಾರಿ ಶಾಲಾ ಕಟ್ಟಡಗಳಿಗೆ ಸ್ಮಾರ್ಟ್ ಕ್ಲಾಸ್ ರೂಮ್‌ಗಳು – ₹ 1.50 ಲಕ್ಷ.	ಬೆಂಗಳೂರು ಉತ್ತರ	1.50	ಪ್ರೊಜೆಕ್ಟರ್ ಕಾರ್ಯನಿರ್ವಹಿಸುವ ಸ್ಥಿತಿಯಲ್ಲಿತ್ತು ಆದರೆ ಬಳಕೆಯಲ್ಲಿರಲಿಲ್ಲ. ಆದಾಗ್ಯೂ, ಶಾಲೆಗೆ ಎಲ್‌ಇಡಿ ಸಂವಾದಾತ್ಮಕ ಪರದೆಯನ್ನು ಒದಗಿಸಲಾಗಿರುವುದರಿಂದ ಪ್ರೊಜೆಕ್ಟರ್ ಅನ್ನು ಬಳಸಿರಲಿಲ್ಲ. ಪ್ರೊಜೆಕ್ಟರ್ ಅನ್ನು ನಿರ್ವಹಿಸುವಲ್ಲಿ ಶಿಕ್ಷಕರಿಗೆ ತರಬೇತಿ ನೀಡಲು ಕಿಯೋನಿಕ್ಸ್ ಯಾವುದೇ ಸಹಾಯವನ್ನು ನೀಡಿಲ್ಲ ಎಂದು ಸಹ ಹೇಳಲಾಗಿದೆ.
3	ಬೆಂಗಳೂರು ಉತ್ತರದ ಸೊಂಡೆಕೊಪ್ಪದಲ್ಲಿರುವ ಸರ್ಕಾರಿ ಶಾಲಾ ಕಟ್ಟಡಗಳಿಗೆ ಸ್ಮಾರ್ಟ್ ತರಗತಿ ಕೊಠಡಿಗಳು – ₹ 1.50 ಲಕ್ಷ.	ಬೆಂಗಳೂರು ಉತ್ತರ	1.50	ಪ್ರೊಜೆಕ್ಟರ್ ಕಾರ್ಯನಿರ್ವಹಿಸುವ ಸ್ಥಿತಿಯಲ್ಲಿತ್ತು ಆದರೆ ಬಳಕೆಯಲ್ಲಿರಲಿಲ್ಲ. ಆದಾಗ್ಯೂ, ಶಾಲೆಗೆ ಎಲ್‌ಇಡಿ ಸಂವಾದಾತ್ಮಕ (ಸಿಎಸ್‌ಆರ್ ಉಪಕ್ರಮ) ಪರದೆಯನ್ನು ಒದಗಿಸಲಾಗಿರುವುದರಿಂದ ಪ್ರೊಜೆಕ್ಟರ್ ಅನ್ನು ಬಳಸಿರಲಿಲ್ಲ. ಪ್ರೊಜೆಕ್ಟರ್ ಅನ್ನು ನಿರ್ವಹಿಸುವಲ್ಲಿ ಶಿಕ್ಷಕರಿಗೆ ತರಬೇತಿ ನೀಡುವಲ್ಲಿ ಕಿಯೋನಿಕ್ಸ್ ಯಾವುದೇ ಸಹಾಯವನ್ನು ನೀಡಿಲ್ಲ ಎಂದು ಸಹ ಹೇಳಲಾಗಿದೆ.
4	ಸರ್ಕಾರಿ ಶಾಲೆಗೆ ಸ್ಮಾರ್ಟ್ ಕ್ಲಾಸ್ ರೂಮ್‌ಗಳು ಲಕ್ಕೇನಹಳ್ಳಿ, ಸೊಂಡೆಕೊಪ್ಪ ಗ್ರಾಮ ಪಂಚಾಯತಿ – ₹ 1.50 ಲಕ್ಷ.	ಬೆಂಗಳೂರು ಉತ್ತರ	1.50	ಪ್ರೊಜೆಕ್ಟರ್ ಕೆಲಸ ಮಾಡುವ ಸ್ಥಿತಿಯಲ್ಲಿತ್ತು ಆದರೆ ಅದನ್ನು ಬಳಸಿರಲಿಲ್ಲ. ಶಿಕ್ಷಕರಿಗೆ ಪ್ರೊಜೆಕ್ಟರ್ ನಿರ್ವಹಿಸುವಲ್ಲಿ ಉತ್ತಮ ಜ್ಞಾನವಿರಲಿಲ್ಲ ಮತ್ತು ಕಿಯೋನಿಕ್ಸ್ ಯಾವುದೇ ಸಹಾಯವನ್ನು ನೀಡಲಿಲ್ಲ. ತರಗತಿಗಳನ್ನು ಕೈಯಾರೆ ಬರೆಯುವುದರ ಮೂಲಕ ನಡೆಸಲಾಗುತ್ತಿತ್ತು. ಪ್ರೊಜೆಕ್ಟರ್‌ನ ಬಿಳಿ ಬೋರ್ಡ್ ಅನ್ನು ಮಾರ್ಕರ್ ಪೆನ್ನುಗಳನ್ನು ಬಳಸಿಕೊಂಡು ಬೋಧನಾ ಉದ್ದೇಶಗಳಿಗಾಗಿ ಬಳಸಲಾಗುತ್ತಿತ್ತು.
5	ಸರ್ಕಾರಿ ಶಾಲೆ ಮಲ್ಲಸಂದ್ರ, ಕಿಟ್ಟೇನಹಳ್ಳಿ ಗ್ರಾಮ ಪಂಚಾಯತಿಗೆ ಸ್ಮಾರ್ಟ್ ಕ್ಲಾಸ್ ರೂಮ್‌ಗಳು – ₹ 1.50 ಲಕ್ಷ.	ಬೆಂಗಳೂರು ಉತ್ತರ	1.50	ಪ್ರೊಜೆಕ್ಟರ್ ಕಾರ್ಯನಿರ್ವಹಿಸುವ ಸ್ಥಿತಿಯಲ್ಲಿತ್ತು ಆದರೆ ಬಳಕೆಯಲ್ಲಿರಲಿಲ್ಲ. ಯುಪಿಎಸ್ ಕೆಟ್ಟುಹೋಗಿತ್ತು ಮತ್ತು ದುರಸ್ತಿಯಲ್ಲಿದೆ ಎಂದು ಹೇಳಲಾಗಿದೆ. ಶಿಕ್ಷಕರಿಗೆ ಪ್ರೊಜೆಕ್ಟರ್ ನಿರ್ವಹಿಸುವಲ್ಲಿ ಉತ್ತಮ ಜ್ಞಾನವಿರಲಿಲ್ಲ ಮತ್ತು ಕಿಯೋನಿಕ್ಸ್‌ನಿಂದ ಯಾವುದೇ ಸಹಾಯ ದೊರೆಯಲಿಲ್ಲ. ತರಗತಿಗಳನ್ನು ಕೈಯಾರೆ ಬರೆಯುವುದರ ಮೂಲಕ ನಡೆಸಲಾಗುತ್ತಿತ್ತು.
6	ಸರ್ಕಾರಿ ಶಾಲೆಗೆ ಸ್ಮಾರ್ಟ್ ಕ್ಲಾಸ್ ರೂಮ್‌ಗಳು ರಾಹುಟ್ಟಹಳ್ಳಿ, ಕಿಟ್ಟೇನಹಳ್ಳಿ ಗ್ರಾಮ ಪಂಚಾಯತಿ – ₹ 1.50 ಲಕ್ಷ	ಬೆಂಗಳೂರು ಉತ್ತರ	1.50	ಪ್ರೊಜೆಕ್ಟರ್ ಕೆಲಸ ಮಾಡುವ ಸ್ಥಿತಿಯಲ್ಲಿತ್ತು ಆದರೆ ಬಳಕೆಯಲ್ಲಿರಲಿಲ್ಲ. ಯುಪಿಎಸ್ ಲೋಡ್ ತೆಗೆದುಕೊಳ್ಳಲಿಲ್ಲ ಮತ್ತು ಆಗಾಗ್ಗೆ ವಿದ್ಯುತ್ ಕಡಿತದಿಂದಾಗಿ ಯೋಜನೆಯನ್ನು ಬಳಸಲಾಗುತ್ತಿರಲಿಲ್ಲ. ಪ್ರೊಜೆಕ್ಟರ್ ಅನ್ನು ನಿರ್ವಹಿಸುವಲ್ಲಿ ಶಿಕ್ಷಕರಿಗೆ ಉತ್ತಮ ಜ್ಞಾನವಿರಲಿಲ್ಲ ಮತ್ತು ಕಿಯೋನಿಕ್ಸ್‌ನಿಂದ ಯಾವುದೇ ಸಹಾಯ / ತರಬೇತಿಗಳನ್ನು ನೀಡಲಾಗಿಲ್ಲ.
7	ಆನೇಕಲ್ ತಾಲ್ಲೂಕು, ಇಂದಲವಾಡಿಯಲ್ಲಿ ಸರ್ಕಾರಿ ಶಾಲಾ ಕಟ್ಟಡಗಳಿಗೆ ಸ್ಮಾರ್ಟ್ ತರಗತಿ ಕೊಠಡಿಗಳು – ₹ 1.50 ಲಕ್ಷ.	ಆನೇಕಲ್	1.50	ಅಳವಡಿಸಿದ ದಿನಾಂಕದಿಂದ ಪ್ರೊಜೆಕ್ಟರ್ ಅನ್ನು ಬಳಸಲಾಗಿಲ್ಲ ಎಂದು ಹೇಳಲಾಗಿದೆ. ಅದನ್ನು ಉಗ್ರಾಣದಲ್ಲಿ ನಿಷ್ಕ್ರಿಯವಾಗಿ ಇಡಲಾಗಿದೆ. ಸಮಸ್ಯೆಯನ್ನು ಪರಿಹರಿಸುವಲ್ಲಿ ಕಿಯೋನಿಕ್ಸ್ ಯಾವುದೇ ಸಹಾಯವನ್ನು ನೀಡಿಲ್ಲ ಎಂದು ಹೇಳಲಾಗಿದೆ.

ಅನುಬಂಧ–7 (ಮುಂದುವರಿದಿದೆ)

ಕ್ರಮ ಸಂಖ್ಯೆ	ಕೆಲಸದ ಹೆಸರು	ತಾಲ್ಲೂಕು	ಯೋಜನೆಯ ವೆಚ್ಚ	ಜೆಪಿವಿ ಅವಲೋಕನಗಳು
8	ಆನೇಕಲ್ ತಾಲ್ಲೂಕು, ಬಲ್ಲೂರಿನಲ್ಲಿ ಸರ್ಕಾರಿ ಶಾಲಾ ಕಟ್ಟಡಗಳಿಗೆ ಸ್ಮಾರ್ಟ್ ತರಗತಿ ಕೊಠಡಿಗಳು – ₹ 1.50 ಲಕ್ಷ.	ಆನೇಕಲ್	1.50	ಜೆಪಿವಿ ಸಮಯದಲ್ಲಿ ಪ್ರೊಜೆಕ್ಟರ್‌ನ ಯುಪಿಎಸ್ ಸರಿಯಾಗಿಲ್ಲದ ಕಾರಣ, ಸಾಧನವನ್ನು ಬಳಸಲಾಗಿಲ್ಲ. ಸಮಸ್ಯೆಯನ್ನು ಸರಿಪಡಿಸಲು ಕಿಯೋನಿಕ್ಸ್‌ನಿಂದ ಯಾವುದೇ ಸಹಾಯವನ್ನು ನೀಡಲಾಗಿಲ್ಲ. ಶಾಲೆಯಲ್ಲಿ ಸಿಎಸ್‌ಆರ್ ಉಪಕ್ರಮದಲ್ಲಿ ವಿತರಿಸಲಾದ ಇತರ ಪ್ರೊಜೆಕ್ಟರ್‌ಗಳಿದ್ದವು.
9	ಸರ್ಕಾರಿ ಪ್ರೌಢಶಾಲೆ ಚಿಕ್ಕಹೊಸಹಳ್ಳಿ, ಆನೇಕಲ್ ತಾಲ್ಲೂಕು, ಇಂದಲವಾಡಿಗೆ ಸ್ಮಾರ್ಟ್ ಕ್ಲಾಸ್ ಕೊಠಡಿಗಳು – ₹ 1.50 ಲಕ್ಷ.	ಆನೇಕಲ್	1.50	ಪ್ರೊಜೆಕ್ಟರ್ ಅನ್ನು ಬಳಸಿರಲಿಲ್ಲ ಮತ್ತು ಅದನ್ನು ಸ್ಟೋರ್ ರೂಮಿನಲ್ಲಿ ಇಡಲಾಗಿತ್ತು. ಶಿಕ್ಷಕರಿಗೆ ಪ್ರೊಜೆಕ್ಟರ್ ಬಗ್ಗೆ ತಿಳಿದಿರಲಿಲ್ಲ ಮತ್ತು ತರಗತಿಗಳನ್ನು ಕೈಯಾರೆ ಬರೆಯುವುದರ ಮೂಲಕ ನಡೆಸಲಾಗುತ್ತಿತ್ತು.
10	ದೊಡ್ಡೇರಿ, ಚಿಕ್ಕನಹಳ್ಳಿಯಲ್ಲಿರುವ ಸರ್ಕಾರಿ ಶಾಲಾ ಕಟ್ಟಡಗಳಿಗೆ ಸ್ಮಾರ್ಟ್ ಕ್ಲಾಸ್ ರೂಮ್‌ಗಳು – ₹ 1.50 ಲಕ್ಷ.	ಬೆಂಗಳೂರು ದಕ್ಷಿಣ	1.50	ಜೆಪಿವಿ ಸಮಯದಲ್ಲಿ ಪ್ರೊಜೆಕ್ಟರ್ ಬಳಕೆಯಾಗುತ್ತಿರಲಿಲ್ಲ ಮತ್ತು ಅದನ್ನು ನಿಷ್ಕ್ರಿಯವಾಗಿ ಇಡಲಾಗಿತ್ತು. ಪ್ರೊಜೆಕ್ಟರ್ ಪೆನ್–ಡ್ರೈವ್‌ಗಳಂತಹ ಇತರ ಸಾಧನಗಳೊಂದಿಗೆ ಹೊಂದಿಕೆಯಾಗುವುದಿಲ್ಲ ಎಂದು ಹೇಳಲಾಗಿದೆ, ಇದರಿಂದಾಗಿ ಯೋಜನೆಯ ಸಾಫ್ಟ್‌ವೇರ್ ಮೂಲಕ ವಿನ್ಯಾಸಗೊಳಿಸಲಾದ ಪಠ್ಯಕ್ರಮಕ್ಕಿಂತ ಹೆಚ್ಚಿನ ಭಾಗಗಳು ಅಥವಾ ಸಾಮಗ್ರಿಗಳ ಮೇಲೆ ಅದು ನಿಷ್ಪರಿಣಾಮಕಾರಿಯಾಗಿದೆ ಎಂದು ಹೇಳಲಾಗಿದೆ. ಕಿಯೋನಿಕ್ಸ್‌ನಿಂದ ಯಾವುದೇ ತಾಂತ್ರಿಕ ಬೆಂಬಲವನ್ನು ಒದಗಿಸಲಾಗಿಲ್ಲ ಎಂದು ಹೇಳಲಾಗಿದೆ.

ಅನುಬಂಧ – 8

(ಕಂಡಿಕೆ 5.12.2ರಲ್ಲಿ ಉಲ್ಲೇಖಿಸಲಾಗಿದೆ)

ಆಡಳಿತಾತ್ಮಕ ವೆಚ್ಚದಿಂದ ಮಾಡಲಾದ ಸ್ವೀಕಾರಾರ್ಹವಲ್ಲದ ವೆಚ್ಚವನ್ನು ತೋರಿಸುವ ತ:ಖ್ತೆ

ಕ್ರಮ ಸಂಖ್ಯೆ	ಗೆ ನೀಡಲಾಗಿದೆ	ಜಿಲ್ಲೆ	ಉದ್ದೇಶ	ಚೆಕ್ ಸಂಖ್ಯೆ ಮತ್ತು ದಿನಾಂಕ	ಮೊತ್ತ
1	ಪಿಡಿ, ನಿರ್ಮಿತಿ ಕೇಂದ್ರ, ಬಳ್ಳಾರಿ	ಬಳ್ಳಾರಿ	ಬಳ್ಳಾರಿಯ ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿ ಭೂದೃಶ್ಯ ನಿರ್ಮಾಣ	387550 / 11.12.2020	3,187,000.00
2	ಸಿಸಿ, ಬಳ್ಳಾರಿ	ಬಳ್ಳಾರಿ	ಬಳ್ಳಾರಿಯ ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿ ಪೇವರ್‌ಗಳನ್ನು ಅಳವಡಿಸುವುದು	307558 / 23.12.2020	5,70,000.00
3	ಸಿಸಿ, ಬಳ್ಳಾರಿ	ಬಳ್ಳಾರಿ	ವಾರ್ಡ್ ಸಂಖ್ಯೆ: 02 ಬಳ್ಳಾರಿ ನಗರದ ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿನ ಆಂತರಿಕ ರಸ್ತೆಗಳ ಸುಧಾರಣೆ.	387571 / 08.01.2020	26,31,229.00
4	ಶ್ರೀ ಬಾಲಾಜಿ ಕಮ್ಯೂಟರ್	ಬಳ್ಳಾರಿ	37 ವೆಬ್ ಕ್ಯಾಮೆರಾ	307560/ 23.12.2020	90,383.00
5	ಪಿಡಿ, ನಿರ್ಮಿತಿ ಕೇಂದ್ರ, ಬಳ್ಳಾರಿ	ಬಳ್ಳಾರಿ	ಬಳ್ಳಾರಿಯಲ್ಲಿ ಡಿಯುಡಿಸಿ ಕಚೇರಿ ನವೀಕರಣ	307562 / 02.01.2020	12,00,000.00
6	ಆಯುಕ್ತರು, ಮಹಾನಗರ ಪಾಲಿಕೆ, ಬಳ್ಳಾರಿ	ಬಳ್ಳಾರಿ	ವಾರ್ಡ್ ಸಂಖ್ಯೆ: 02 ಬಳ್ಳಾರಿ ನಗರದ ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿನ ಆಂತರಿಕ ರಸ್ತೆಗಳ ಸುಧಾರಣೆ.	307530/ 15.10.2020	26,25,000.00
7		ಗದಗ	ಧಾರವಾಡ ಹೈಕೋರ್ಟ್‌ಗೆ ಕಂಪ್ಯೂಟರ್ ಖರೀದಿ	005913/ 19.03.2021	59,180.00
8		ಗದಗ	ಧಾರವಾಡ ಹೈಕೋರ್ಟ್‌ಗೆ ಲ್ಯಾಪ್‌ಟಾಪ್ ಖರೀದಿ	005920 / 19.03.2021	71,160.00
9		ಗದಗ	ಗೃಹರಕ್ಷಕರ ಸಂಬಳ	005916 / 29.09.2020	3,39,840.00
10		ಗದಗ	ಗೃಹರಕ್ಷಕರ ಸಂಬಳ	005917/ 06.11.2020	91,840.00
11		ಗದಗ	ಗೃಹರಕ್ಷಕರ ಸಂಬಳ	005918 / 01.02.2021	1,36,240.00
12		ಗದಗ	ಗೃಹರಕ್ಷಕರ ಸಂಬಳ	005922/ 22.04.2021	2,70,960.00
13		ಗದಗ	ಗೃಹರಕ್ಷಕರ ಸಂಬಳ	005925/ 07.06.2021	1,77,600.00
14		ಗದಗ	ಗೃಹರಕ್ಷಕರ ಸಂಬಳ	005932/ 13.09.2021	1,36,240.00
15		ಗದಗ	ಗೃಹರಕ್ಷಕರ ಸಂಬಳ	005933/ 13.09.2021	91,840.00
16		ಗದಗ	ಗೃಹರಕ್ಷಕರ ಸಂಬಳ	005937/ 01.10.2021	1,34,720.00
17		ಗದಗ	ಗೃಹರಕ್ಷಕರ ಸಂಬಳ	005948/ 24.03.2022	1,33,200.00
18		ಗದಗ	ಗೃಹರಕ್ಷಕರ ಸಂಬಳ	005958/ 29.09.2022	1,36,080.00
19		ಗದಗ	ಗೃಹರಕ್ಷಕರ ಸಂಬಳ	005968/ 16.12.2022	1,42,240.00
20		ಗದಗ	ಗೃಹರಕ್ಷಕರ ಸಂಬಳ	005972/ 16.03.2023	72,320.00
21		ಗದಗ	ಗೃಹರಕ್ಷಕರ ಸಂಬಳ	005973/ 02.05.2023	1,42,240.00
22		ಗದಗ	ಗೃಹರಕ್ಷಕರ ಸಂಬಳ	005976/ 13.06.2023	1,42,240.00
	ಒಟ್ಟು				**1,25,81,552**